ಕುವೆಂಪು ಶತಮಾನೋತ್ಸವ ಮಾಲಿಕೆ–೨೦೦೪

ಕನ್ನಡ ಶಾಸನಗಳು

ಡಾ. ರಾ. ಗೋಪಾಲ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು–೫೬೦ ೦೧೮

BVP-1211-27/12/17
1216-(4).

ಕುವೆಂಪು ಶತಮಾನೋತ್ಸವ ಮಾಲಿಕೆ-೨೦೦೪

ಕನ್ನಡ ಶಾಸನಗಳು

ಡಾ|| ಬಾ. ರಾ. ಗೋಪಾಲ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦ ೦೧೮

KANNADA SHASANAGALU : by **Dr. B. R. Gopala**
Published by **Kannada Sahitya Parishath,**
Pampa Mahakavi Road, Chamarajapet, Bangalore-18.
Pages : 61+iii Price : **20-00 ; 2004**

ಮುದ್ರಣದ ವರ್ಷ : ೨೦೦೪
ಪ್ರತಿಗಳು : ೧೦೦೦
ಬೆಲೆ ರೂ. : ೨೦/-

ಕುವೆಂಪು ಶತಮಾನೋತ್ಸವ ಮಾಲಿಕೆ-೨೦೦೪

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯಕ್ಕೆ ಕೊಡಮಾಡಿರುವ ದೇಶದ ಬಹುತೇಕ ಎಲ್ಲ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಗೆ ಮೊದಲು ಪಾತ್ರರಾದ ರಾಷ್ಟ್ರಕವಿ ಕುವೆಂಪು, ಕನ್ನಡದ ವರ್ಡ್ಸ್‌ವರ್ತ್ ಎಂದು ಪ್ರಖ್ಯಾತರಾಗಿದ್ದಾರೆ. ಈ ಕವಿಯನ್ನು ಸ್ಮರಿಸುವುದೆ ಒಂದು ಚೇತೋಹಾರಿ ಅನುಭವ.

ಕರ್ನಾಟಕ ಸರ್ಕಾರ ಈ ಮಹಾಕವಿಯ ಶತಮಾನೋತ್ಸವವನ್ನು ಸಾಹಿತ್ಯಕವಾಗಿ ವರ್ಷವಿಡೀ ಆಚರಿಸುತ್ತಿರುವ ಹಿನ್ನಲೆಯಲ್ಲಿ, ಸಾರ್ವಜನಿಕ ವಿಶ್ವವಿದ್ಯಾಲಯವೆಂದು ಪರಿಗಣಿತವಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರ ನೀಡಿರುವ ಉದಾರ ದೇಣಿಗೆಯನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು ಈ ಮಹತ್ವದ ಕವಿಯ ಹೆಸರಿನಲ್ಲಿ "ಕುವೆಂಪು ಶತಮಾನೋತ್ಸವ ಮಾಲಿಕೆ" ಯೊಂದನ್ನು ಆರಂಭಮಾಡಿದೆ. ಅಪರೂಪದ ಮೌಲಿಕವಾದ ಕೃತಿಗಳನ್ನು ಪ್ರಕಟಿಸುವ ಯೋಜನೆಯೊಂದನ್ನು ಹಾಕಿಕೊಂಡಿದೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಿವೇಚನೆಗೆ ತಕ್ಕುದೆಂದು ಕಂಡುಬಂದ ಹಲವಾರು ಅಲಭ್ಯ ಪ್ರತಿಷ್ಠಿತ ಕೃತಿಗಳನ್ನು ಮರುಮುದ್ರಣಮಾಡಿ, ಜತೆಗೆ ಇತ್ತೀಚಿನ ಉತ್ತಮ ಕೃತಿಗಳನ್ನು ಮಾಲಿಕೆಯಡಿ ಪ್ರಕಟಿಸಲು ಉದ್ದೇಶಿಸಲಾಗಿದೆ.

ಅಗತ್ಯ ಆರ್ಥಿಕ ನೆರವು ನೀಡಿ ಉಪಕರಿಸಿರುವ ಕರ್ನಾಟಕ ರಾಜ್ಯ ಸರ್ಕಾರಕ್ಕೆ ವಿನಯ ಪೂರ್ವಕ ಕೃತಜ್ಞತೆ ಸಲ್ಲಿಸುವ ಆದ್ಯ ಕರ್ತವ್ಯ ನಿರ್ವಹಿಸಿ, ಪ್ರಕಟಣೆಗೆ ಹಸಿರುನಿಶಾನೆ ತೋರಿದ ಪ್ರಕಟಣ ಸಮಿತಿಗೂ, ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಕನ್ನಡ ಶಾಸನಗಳು

ಪ್ರಸ್ತಾವನೆ

ನಮ್ಮ ದೇಶದ ಪ್ರಾಚೀನ ಇತಿಹಾಸವನ್ನು ಬರೆಯತೊಡಗಿದಾಗ, ಯಾವುದನ್ನು ಆಧರಿಸಿ ಅಂತಹ ಇತಿಹಾಸವನ್ನು ರಚಿಸಬೇಕು ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಇತಿಹಾಸ ಎಂದರೆ ಹಿಂದೆ ಹೀಗೆ ನಡೆದಿತ್ತು - ಇತಿ-ಹ ಅಸ- ಎಂದು ಅರ್ಥ. ಮಾನವಪ್ರಪಂಚದಲ್ಲಿ ನಡೆದುಹೋದ ಘಟನೆಗಳ ನಿರೂಪಣೆ ಇತಿಹಾಸ. ಭಾರತೀಯರಿಗೆ ಇತಿಹಾಸದ ಜ್ಞಾನ ಇರಲಿಲ್ಲ ಎನ್ನುವುದು ಒಂದು ಆಪಾದನೆ. ಗ್ರೀಸ್ ದೇಶದಲ್ಲಿ ಆರಂಭದಿಂದಲೂ ಅಲ್ಲಿನ ಇತಿಹಾಸಕಾರರು ತಮ್ಮ ದೇಶದ ಆಗುಹೋಗುಗಳನ್ನು ಗುರುತಿಸಿದ್ದಾರೆ. ಹೀರೋಡೋಟಸ್, ಥೂಸಿಡೈಡಸ್ ಮುಂತಾದವರು ತಮ್ಮ ಕಾಲದಲ್ಲಿ ಅಥವಾ ಸ್ವಲ್ಪ ಹಿಂದೆ ನಡೆದ ಘಟನೆಗಳನ್ನು ತಮ್ಮ ಬರಹಗಳಲ್ಲಿ ಮೆಲುಕು ಹಾಕಿದ್ದಾರೆ. ಅವುಗಳನ್ನು ವಿಶ್ಲೇಷಿಸುವ ಪ್ರಯತ್ನಗಳನ್ನೂ ಮಾಡಿದ್ದಾರೆ. ತಮ್ಮದೇ ಅತಿ ಪ್ರಬಲವಾದ ರಾಜ್ಯ; ತಮ್ಮ ಸಂಸ್ಕೃತಿಯೇ ವಿಶಿಷ್ಟವಾದ ಸಂಸ್ಕೃತಿ ಎಂದು ಭಾವಿಸಿದ್ದ ಅವರು ಪರ್ಷಿಯನ್ನರೊಡನೆ ಕಾದು ಸೋತಾಗ, ಅದಕ್ಕೆ ಕಾರಣಗಳೇನು ಎಂಬುದನ್ನು ಪರಿಶೀಲಿಸಲು ಉದ್ಯುಕ್ತರಾಗಿ ಇತಿಹಾಸವನ್ನು ರಚಿಸಿದರು. ಅವು ಇಂದಿಗೂ ನಮಗೆ ಅನನ್ಯ ಕೃತಿಗಳಾಗಿ

ಲಭಿಸಿವೆ. ಆದರೆ ಇಂತಹ ಕಾಣಬಹುದಾದಂತಹ ಇತಿಹಾಸ ಗ್ರಂಥಗಳು ನಮ್ಮಲ್ಲಿ ಹಿಂದೆ ಇರಲಿಲ್ಲ.

ಹಾಗೆಂದಾಕ್ಷಣ ನಮ್ಮ ಪ್ರಾಚೀನರಲ್ಲಿ ಇತಿಹಾಸ ಪ್ರಜ್ಞೆ ಇರಲಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ದೇವ, ಧರ್ಮ, ನೀತಿ, ತತ್ವಬೋಧೆ ಇಂತಹವುಗಳಿಗೇ ವಿಶೇಷವಾದ ಗಮನವನ್ನು ನೀಡಲಾಗಿತ್ತು. ಸಮಕಾಲೀನ ಸಾಮಾಜಿಕ, ರಾಜಕೀಯ ಘಟನೆಗಳು ಆ ಸಾಹಿತ್ಯದಲ್ಲಿ ಅಲ್ಲಲ್ಲಿ ನಿರೂಪಿಸಲ್ಪಟ್ಟಿದ್ದರೂ ಅವು ನೇರವಾಗಿ ಅಂತಹ ಪ್ರಸ್ತಾಪಗಳನ್ನು ಮಾಡದಿರುವುದರಿಂದ ಅವುಗಳನ್ನು ನಾವು ಹೆಕ್ಕಿ ತೆಗೆಯಬೇಕಷ್ಟೆ. ಆದರೂ ಅವುಗಳನ್ನು ಖಚಿತವಾದ ಇತಿಹಾಸಕ್ಕೆ ಸಂಬಂಧಿಸಿದ ಬರಹಗಳೆಂದು ಹೇಳಲಾಗುವುದಿಲ್ಲ. ಇತಿಹಾಸ ಎಂಬ ಪದ ವೇದಕಾಲಗಳಲ್ಲಿಯೇ ಬಳಸಲಾದ ಪದ. ಇದು ಪುರಾಣವಲ್ಲ- ಅದಕ್ಕಿಂತ ಭಿನ್ನವಾದ ರಚನೆ ಎಂಬುದನ್ನು ಅವರು ಅರಿತಿದ್ದರು. ವೇದದಲ್ಲಿ ಹತ್ತು ರಾಜರ ಕಾಳಗದ ಪ್ರಸ್ತಾಪ ಇದೆ. ರಾಜರ, ರಾಜವಂಶಗಳ ಪ್ರಶಸ್ತಿಗಳನ್ನು ಆ ಸಾಹಿತ್ಯದಲ್ಲಿ ಅಲ್ಲಲ್ಲಿ ಕಾಣಬಹುದು. ಪುರಾಣಗಳಲ್ಲಿ ಇವು ಇನ್ನೂ ಹೆಚ್ಚಾಗಿ ಲಭಿಸುತ್ತದೆ. ನಮ್ಮಲ್ಲಿ ಲಭ್ಯವಿರುವ ಸಾವಿರಾರು ಶಾಸನಗಳಲ್ಲಿ ಘಟನೆಗಳ ನಿರೂಪಣೆಗಳಿವೆ. ಕಾಲ ನಿರ್ದೇಶನಗಳೂ ಇವೆ. ನಮ್ಮಲ್ಲಿ ಇತಿಹಾಸ ಪ್ರಜ್ಞೆ ಇಲ್ಲದಿದ್ದಲ್ಲಿ ಈ ವಿಧದ ಶಾಸನಗಳು ಇರುತ್ತಿರಲಿಲ್ಲ.

ಭಾರತದಲ್ಲಿ ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ಪರ್ಯಟನೆ ಮಾಡಿದಾತ ಆಲ್ಬೆರೂನಿ. ಘಜ್ನಿ ಮಹಮೂದನ ಸಮಕಾಲೀನ ಅಬುರಿಹಾನ್ ಎಂಬ, ಆಲ್ಬೆರೂನಿ ಎಂದು ಪ್ರಸಿದ್ಧನಾದ, ವಿದ್ವಾಂಸನು ನಮ್ಮ ದೇಶದ ಸಂಸ್ಕೃತಿ ನಾಗರಿಕತೆಗಳನ್ನು ಕಂಡುಕೊಳ್ಳತೊಡಗಿದ.

ಸಂಸ್ಕೃತ ಭಾಷೆಯನ್ನು ಕಲಿತ. ಪರದೇಶದ ವಿದ್ವಾಂಸರು ಈ ದೇಶದ ಬಗೆಗೆ ಬರೆದಿಟ್ಟು ಹೋದ ಗ್ರಂಥಗಳಲ್ಲಿ ಗಾತ್ರದಲ್ಲೂ, ಮೌಲ್ಯದಲ್ಲೂ ಹಿರಿದಾದದು ಅಲ್ಬೆರೂನಿಯ ಗ್ರಂಥ. ಆದರೆ ವಿಶೇಷವಾಗಿ ಭಾರತೀಯ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಬರೆದುದು. ರಾಜಕೀಯ ಘಟನೆಗಳ ಪ್ರಸ್ತಾಪವಿಲ್ಲ. ಈ ದೃಷ್ಟಿಯಲ್ಲಿಯೇ ಆತ ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇಲ್ಲ ಎಂದುದು. ರಾಜಕೀಯ ಇತಿಹಾಸವನ್ನು ಅರಿಯಲು ಅಂತಹ ಯಾವುದೇ ಗ್ರಂಥ ಆತನಿಗೆ ದೊರೆತಿರಲಿಲ್ಲ. ಕಾಲಾನುಪೂರ್ವಿಯ ನಿರೂಪಣೆಯಲ್ಲಿ ಅಲಕ್ಷ್ಯ ತೋರಿಸುವ ಹಿಂದೂಗಳು ವಿಷಯಕ್ಕಾಗಿ ಒತ್ತಾಯ ಪಡಿಸಿದಾಗ, ಕತೆಗಳನ್ನು ಕಟ್ಟುತ್ತಾರೆ ಎಂದಿದ್ದಾನೆ.

ಭಾರತೀಯರು ಇತಿಹಾಸ ಗ್ರಂಥ ರಚನೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಲಿಲ್ಲ. ಈ ವಿಶ್ವದಲ್ಲಿ ನಡೆಯುವ ಯಾವ ಘಟನೆಯೂ ಶಾಶ್ವತವಲ್ಲ, ಕ್ಷಣಿಕವಾದುದು ಎಂಬ ಅವರ ಮನೋಭಾವ ಈ ನ್ಯೂನತೆಗೆ ಕಾರಣವಿದ್ದಂತೆ ತೋರುತ್ತದೆ. ಆದರೂ ನಂತರದ ಶತಮಾನಗಳಲ್ಲಿ ಒಂದೆರಡು ಇತಿಹಾಸ ಗ್ರಂಥಗಳು ರಚಿತವಾಗಿವೆ. ಕಾಶ್ಮೀರದ ಇತಿಹಾಸಕ್ಕೆ ಸಂಬಂಧಿಸಿದಂತೆ ಕಲ್ಹಣನ 'ರಾಜತರಂಗಿಣಿ' ಇಂತಹ ಒಂದು ಗ್ರಂಥ. ಕರ್ನಾಟಕಕ್ಕೇ ಸಂಬಂಧಿಸಿದಂತೆ ೧೧ನೆಯ ಶತಮಾನದಲ್ಲಿ ರಚಿತವಾದ ಬಿಲ್ಹಣನ 'ವಿಕ್ರಮಾಂಕದೇವಚರಿತ' ಎಂಬ ಒಂದು ಕೃತಿ ಒಂದು ಇತಿಹಾಸ ಗ್ರಂಥ. ಇದನ್ನು ಆಧರಿಸಿ ಕಲ್ಯಾಣದ ಚಾಲುಕ್ಯ ಮನೆತನದ ಮುಮ್ಮಡಿ ಸೋಮೇಶ್ವರ 'ವಿಕ್ರಮಾಂಕಾಭ್ಯುದಯ'ವನ್ನು ರಚಿಸಿದ ಇದಕ್ಕೂ ಮೊದಲೇ ಕರ್ನಾಟಕದ ಆದಿಕವಿ ಎನ್ನಿಸಿದ ಪಂಪನು 'ವಿಕ್ರಮಾರ್ಜುನವಿಜಯ'ವೆಂಬ ಹೆಸರಿನ 'ಪಂಪಭಾರತ'ವೆಂದೇ

ಖ್ಯಾತಿಹೊಂದಿದ ಕೃತಿಯಲ್ಲಿ ತನ್ನ ಆಶ್ರಯದಾತನಾದ ಆಂಧ್ರಪ್ರದೇಶದ ವೇಮುಲವಾಡದಲ್ಲಿ ಆಳಿದ ಚಾಲುಕ್ಯವಂಶದ ಇಮ್ಮಡಿ ಅರಿಕೇಸರಿಯ ಸಾಧನೆಗಳನ್ನು ವರ್ಣಿಸಿದ್ದಾನೆ. ಈತನನ್ನು ಆ ಕೃತಿಯ ಕಥಾನಾಯಕನಾದ ಅರ್ಜುನನೊಡನೆ ಹೋಲಿಸಿ ಪ್ರಾಸಂಗಿಕವಾಗಿ ಅರಿಕೇಸರಿಯ ಸಾಧನೆಗಳನ್ನು ನಿರೂಪಿಸಿದ್ದಾನೆ. ಇದು ಕ್ರಿಸ್ತಶಕ ೯೪೧ರಲ್ಲಿ. ಕ್ರಿ.ಶ. ೯೭೮ರಲ್ಲಿ ಗಂಗರ ದೊರೆ ಇಮ್ಮಡಿ ಮಾರಸಿಂಹನ ಮಂತ್ರಿಯಾದ ಚಾವುಂಡರಾಯನ 'ಚಾವುಂಡರಾಯಪುರಾಣ'ವೆಂಬ ಗ್ರಂಥದಲ್ಲಿ ಮಾರಸಿಂಹನು ಆತನ ಸ್ವಾಮಿಯಾದ ರಾಷ್ಟ್ರಕೂಟ ಮನೆತನದ ಯುವರಾಜ ಇಂದ್ರನನ್ನು ಅಧಿಕಾರಕ್ಕೆ ತರಲು ಮಾಡಿದ ಯತ್ನಗಳ ಉಲ್ಲೇಖಗಳಿವೆ. ಕವಿ ರನ್ನನ 'ಗದಾಯುದ್ಧ'ವೆಂಬ ಚಂಪೂಕಾವ್ಯ (ಕ್ರಿ.ಶ.೧೦೦೫ ನಂತರದ್ದು) ಕಲ್ಯಾಣ ಚಾಲುಕ್ಯ ಅರಸುಮನೆತನದ ಇಮ್ಮಡಿ ತೈಲಪ ಹಾಗೂ ಆತನ ಮಗ ಇಱಿವಬೆಡಂಗ ಸತ್ಯಾಶ್ರಯನ ಸಾಧನೆಗಳನ್ನು ಚಿತ್ರಿಸಿದೆ. ರಾಜಾದಿತ್ಯನ 'ವ್ಯವಹಾರಗಣಿತ' (೧೨ನೆಯ ಶತಮಾನ)ದಲ್ಲಿ ಯಾದವರ ಐದನೆಯ ಭಿಲ್ಲಮ ಹಾಗೂ ಹೊಯ್ಸಳ ಇಮ್ಮಡಿ ಬಲ್ಲಾಳರ ನಡುವೆ ಸೊರಟೂರಿನಲ್ಲಿ ನಡೆದ ಭೀಕರ ಕಾಳಗಕ್ಕೆ ಸಂಬಂಧಿಸಿದ ವಿವರಗಳು ಅಂಕಿಅಂಶಗಳೊಡನೆ ಲಭಿಸಿವೆ. ನಂಜುಂಡಕವಿಯ 'ಕುಮಾರರಾಮನ ಕಥೆ' (ಕ್ರಿ.ಶ. ಸುಮಾರು ೧೫೨೫) ೧೪ನೆಯ ಶತಮಾನದ ತುಂಗಭದ್ರಾ ನದಿಯ ಪ್ರದೇಶಕ್ಕೆ ಸೇರಿದ ಕುಮ್ಮಟದಲ್ಲಿ ಕಂಪಿಲರಾಯ ಹಾಗೂ ಆತನ ಮಗ ಕುಮಾರರಾಮರು ದೆಹಲಿಯ ಸುಲ್ತಾನರ ವಿರುದ್ಧ ಹೂಡಿದ ಹೋರಾಟಗಳ ವಿವರಗಳನ್ನೊಳಗೊಂಡ ಕೃತಿ. ಇವುಗಳನ್ನು ಸಂಪೂರ್ಣವಾಗಿ ಚಾರಿತ್ರಿಕ ಕೃತಿಗಳೆನ್ನಲಾಗದಿದ್ದರೂ ಚಾರಿತ್ರಿಕ ವಿವರಗಳನ್ನು ನಿರೂಪಿಸುವ ಅರೆಚಾರಿತ್ರಿಕ ಕೃತಿಗಳೆಂದು ಪರಿಗಣಿಸಬಹುದು. ಇವುಗಳಲ್ಲಿ ಕಂಡುಬರುವ ವಿವರಗಳೆಲ್ಲವನ್ನೂ 'ನೈಜವಾದವುಗಳೆಂದು

ಪರಿಗಣಿಸಬಹುದು. ಅನ್ಯ ಆಧಾರಗಳ ಮೂಲಕ ಆ ವಿವರಗಳ ಸತ್ಯಾಸತ್ಯತೆಯನ್ನು ಒರೆಗಲ್ಲಿಗೆ ಹಚ್ಚಿ ನೋಡಬೇಕಾಗುತ್ತದೆ.

ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಸ್ಥಾನ ಕವಿಯಾದ ವಿಜ್ಞಾನೇಶ್ವರನು 'ಮಿತಾಕ್ಷರ' ಎಂಬ ಧರ್ಮಶಾಸ್ತ್ರದ ಕರ್ತೃ. ಇದರಲ್ಲಿ ಸಮಕಾಲೀನ ಸಾಮಾಜಿಕ ಪರಿಸ್ಥಿತಿಗಳ ಒಂದು ವಿಹಂಗಮ ನೋಟವನ್ನು ಕಾಣಬಹುದು. ಮುಮ್ಮಡಿ ಸೋಮೇಶ್ವರನ 'ಅಭಿಲಷಿತಾರ್ಥ ಚಿಂತಾಮಣಿ' (ಅಥವಾ 'ಮಾನಸೋಲ್ಲಾಸ') ಒಂದು ವಿಶ್ವಕೋಶ. ಅಂದಿನ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಪರಿಚಯ ನಮಗೆ ಅದರಲ್ಲಿ ಉಂಟಾಗುತ್ತದೆ. ಹೇಮಾದ್ರಿಯ 'ಚಾತುರ್ವರ್ಗಚಿಂತಾಮಣಿ'ಯ ರಾಜಪ್ರಶಸ್ತಿಯ ಭಾಗದಲ್ಲಿ ಸೇಉಣರ ವಂಶಾವಳಿ ಹಾಗೂ ಇತರ ಕೆಲವು ಅನ್ಯಥಾ ತಿಳಿದುಬಾರದ ವಿವರಗಳಿವೆ. ಗುಜರಾತಿನ ಸಂಸ್ಕೃತ ಕೃತಿಗಳಾದ ಸೋಮೇಶ್ವರನ 'ಕೀರ್ತಿಕೌಮುದಿ', ಬಾಲಚಂದ್ರಸೂರಿಯ 'ವಸಂತವಿಲಾಸ್ಮ, ಜಯಸಿಂಹನ 'ಹಮ್ಮೀರ ಮದಮರ್ದನ', ಮುಂತಾದವುಗಳಲ್ಲಿ ಕರ್ನಾಟಕದ ೧೧-೧೨ನೆಯ ಶತಮಾನಗಳಿಗೆ ಸಂಬಂಧಿಸಿದ ಅನೇಕ ಅಂಶಗಳು ಲಭಿಸುತ್ತವೆ. ಆದರೂ ಇಲ್ಲಿ ನಮಗೆ ತಿಳಿದು ಬರುವ ವಿಷಯಗಳು ಕೇವಲ ತುಣುಕುಗಳು. ನಮ್ಮ ಪ್ರಾಚೀನ ಇತಿಹಾಸವನ್ನು ಸಮಗ್ರವಾಗಿ ಅರಿಯಲು ಇವು ನೆರವಾಗುವುದಿಲ್ಲ.

ಎಂತಲೇ ನಾವು ಇತರ ಆಧಾರಗಳನ್ನು ಪರಿಶೀಲಿಸಿ ಇತಿಹಾಸವನ್ನು ಪುನಾರಚಿಸಬೇಕಾಗಿದೆ. ಈ ಆಧಾರ ಸಾಮಗ್ರಿಗಳು ಪುರಾತತ್ವಾನ್ವೇಷಣೆಯಿಂದ ಲಭಿಸುವುದು. ಅಲ್ಲದೆ ಇತರ ಸಾಹಿತ್ಯ ಕೃತಿಗಳಿಂದಲೂ ವಿವರಗಳನ್ನು ಸ್ಥೂಲವಾಗಿ ತಿಳಿಯಬಹುದಾಗಿದೆ. ಪುರಾತತ್ವ ಶಾಸ್ತ್ರವು ವಿಶೇಷವಾಗಿ ಇತಿಹಾಸ ಪೂರ್ವಕಾಲಕ್ಕೆ ಸಂಬಂಧಿಸಿದುದು. ಆ ಕಾಲದ ಉಪಕರಣಗಳು, ಆಯುಧಗಳು, ಮಡಕೆಗಳ ಚೂರುಗಳು, ಅವರು ವಾಸಿಸುತ್ತಿದ್ದ ಗೃಹಗಳ ಅವಶೇಷಗಳು

ಇತ್ಯಾದಿಗಳ ಪರಿಶೀಲನೆಯಿಂದ ಅಂದಿನ ಜನಜೀವನದ ಸಾಮಾನ್ಯ ಸ್ಥಿತಿಗತಿಗಳನ್ನು ಅರಿಯಬಹುದಾಗಿದೆ. ಕರ್ನಾಟಕದಲ್ಲಿ ಕೆಲವೆಡೆ (ಉದಾ: ಮಲಪ್ರಭಾ ನದೀ ತೀರದ ಹಲವು ಗ್ರಾಮಗಳು ಮತ್ತು ಮೈಸೂರು ಜಿಲ್ಲೆಯ ಕಿಬ್ಬನಹಳ್ಳಿ) ಪುರಾತನ ಶಿಲಾಯುಗದ ಪಳೆಯುಳಿಕೆಗಳು ದೊರೆತಿವೆ. ಈ ಪ್ರಾಚೀನ ಶಿಲಾಯುಗದ ಮಾನವನು ಮೂಲತಃ ಆಫ್ರಿಕಾ ಖಂಡದವನಾಗಿದ್ದು ಹಿಂದೊಮ್ಮೆ ದಕ್ಷಿಣಭಾರತ, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳು ಕೂಡಿಕೊಂಡು ಒಂದೇ ಭೂಭಾಗವಾಗಿದ್ದ ಸಮಯದಲ್ಲಿ ಅವರು ಭಾರತಕ್ಕೆ ವಲಸೆ ಬಂದಿರಬಹುದೆಂದು ಊಹಿಸಲಾಗಿದೆ. ಬಳ್ಳಾರಿ, ರಾಯಚೂರು, ಧಾರವಾಡ, ಕಾರವಾರ, ಮೈಸೂರು ಜಿಲ್ಲೆಗಳಲ್ಲಿ ಕೆಲವು ಸ್ಥಳಗಳಲ್ಲಿ ದೊರೆತ ವಿಶಿಷ್ಟ ರೀತಿಯಲ್ಲಿ ಕೊರೆದ ರೇಖಾಚಿತ್ರಗಳುಳ್ಳ (rouletted) ಮಡಕೆಯ ಚೂರುಗಳು, ರೋಮ್ ಸಾಮ್ರಾಜ್ಯದ ಅರಸರಾದ ಆಗಸ್ಟಸ್, ಟೈಬೀರಿಯಸ್ ಮುಂತಾದವರ ದಿನಾರಿ ಎಂಬ ನಾಣ್ಯಗಳು ಸಾತವಾಹನರ ಮಾಂಡಲಿಕರಾಗಿದ್ದ ಚುಟುಕುಲದ ಸಾಮಂತ ಪೊಟಿನ್ ನಾಣ್ಯಗಳು ನವಶಿಲಾಯುಗದ ಕುರುಹುಗಳು.

ಆದರೆ ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಕಟ್ಟಡದ ಅವಶೇಷಗಳು, ನಾಣ್ಯಗಳು, ವರ್ಣಚಿತ್ರಗಳು ಸಾಮಾಜಿಕ, ಆರ್ಥಿಕ, ಕಲಾತ್ಮಕ ಜೀವನದ ಬಗೆಗೆ ಬೆಳಕು ಚೆಲ್ಲುತ್ತವೆಯಾದರೂ ಇವುಗಳ ನೆರವಿನಿಂದ ಖಚಿತವಾದ ಇತಿಹಾಸ ವಿಷಯಗಳನ್ನು ತಿಳಿಯಲಾಗದು. ಸಾಹಿತ್ಯ ಕೃತಿಗಳು ರಾಜರ ಕೃಪಾಪೋಷಿತರಾದ ಕವಿಗಳ ರಚನೆಗಳಾಗಿದ್ದು, ಅವುಗಳಲ್ಲಿ ಬಹಳಷ್ಟು ಉತ್ಪ್ರೇಕ್ಷೆಗಳನ್ನು ಕಾಣುತ್ತೇವೆ. ಅರಸರ ವಂಶಾವಳಿಯ ಬಗೆಗೆ ಕೆಲವು ವಿಷಯಗಳು ತಿಳಿದುಬರಬಹುದು. ಈ ದೃಷ್ಟಿಯಲ್ಲಿ ೧೪ನೆಯ ಶತಮಾನದಲ್ಲಿ, ಗಂಗಾದೇವಿ ರಚಿಸಿದ 'ಮಧುರಾವಿಜಯಂ' ಅಥವಾ 'ವೀರಕಂಪರಾಯಚರಿತಮ್', ಹಾಗೂ ೧೮ನೆಯ ಶತಮಾನದಲ್ಲಿ ಲಿಂಗಣ್ಣ ಕವಿ ರಚಿಸಿದ 'ಕೆಳದಿನೃಪ ವಿಜಯ',

ಮೈಸೂರಿನ ಒಡೆಯರ ಕಾಲದ, ತಿರುಮಲ ಕವಿಯ 'ಚಿಕ್ಕದೇವರಾಯ ವಂಶಾವಳಿ' ಮತ್ತು ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ಗಳನ್ನು ಸ್ವಲ್ಪ ಮಟ್ಟಿಗೆ ಐತಿಹಾಸಿಕ ಕೃತಿಗಳೆಂದು ಪರಿಗಣಿಸಬಹುದಾಗಿದೆ.

ಈ ಸಂದರ್ಭದಲ್ಲಿ ಪರದೇಶಗಳಿಂದ ಯಾತ್ರಾರ್ಥಿಗಳಾಗಿ, ರಾಯಭಾರಿಗಳಾಗಿ, ದರೋಡೆಕಾರರಾಗಿ ಬಂದ ಅನ್ಯದೇಶದವರು ತಾವು ಇಲ್ಲಿ ಕಂಡ, ಕೇಳಿದ ವಿಷಯಗಳನ್ನು ಸಾಹಿತ್ಯರೂಪದಲ್ಲಿ ಬಿಟ್ಟುಹೋಗಿರುವುದನ್ನು ಪರಿಗಣಿಸಬಹುದು. ಇವುಗಳನ್ನು ಪ್ರವಾಸಿ ಸಾಹಿತ್ಯವೆಂಬ ಶೀರ್ಷಿಕೆಯಲ್ಲಿ ಸೇರಿಸಬೇಕು. ಕರ್ನಾಟಕದಲ್ಲಿ ಕ್ರಿ.ಶ. ಎರಡನೆಯ ಶತಮಾನದ ಮಧ್ಯದಲ್ಲಿ ಈಜಿಪ್ಟ್‌ದೇಶದ ಅಲೆಕ್ಸಾಂಡ್ರಿಯದಲ್ಲಿದ್ದ ಭೂಗೋಳಜ್ಞನಾದ ಟೊಲೆಮಿ (ಕ್ಲಾಡಿಯಸ್ ಟೊಲೆಮಿಯೊಸ್) ಯಿಂದ ಆರಂಭವಾಗಿ ೧೭-೧೮ನೆಯ ಶತಮಾನದವರೆಗಿನ ಹಲವಾರು ಪ್ರವಾಸಿಗರು ಬರೆದಿಟ್ಟು ಹೋದ ಸಾಹಿತ್ಯ ಲಭ್ಯವಾಗಿದೆ. ಆದರೆ ನಮ್ಮ ಸಂಸ್ಕೃತಿ-ಸಂಪ್ರದಾಯಗಳ ಪರಿಚಯವಿಲ್ಲದವರು ನಮ್ಮ ಇತಿಹಾಸವನ್ನು ಕಲುಷಿತ ದೃಷ್ಟಿಯಿಂದ ಅಪಾರ್ಥಮಾಡಿಕೊಂಡು ಬರೆದಿದ್ದಾರೆ. ತಿರಸ್ಕಾರ ಮನೋಭಾವವನ್ನೂ ಈ ಬರಹಗಳಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಇಂತಹ ಸಾಹಿತ್ಯವನ್ನು ಬಳಸುವಾಗ ಬಹಳ ಎಚ್ಚರ ವಹಿಸಬೇಕಾಗುತ್ತದೆ.

ಶಾಸನಾಧ್ಯಯನದ ಪ್ರಯೋಜನ.

ಈ ಎಲ್ಲ ದೃಷ್ಟಿಗಳಿಂದಲೂ ಕರ್ನಾಟಕದಲ್ಲಿ ದೊರೆತಿರುವ ಸಹಸ್ರಾರು ಶಾಸನಗಳು ನಮ್ಮ ನಾಡಿನ ಇತಿಹಾಸವನ್ನರಿಯುವ ಖಚಿತವಾದ ಸಾಧನ ಸಾಮಗ್ರಿಗಳಾಗಿವೆ. ಕ್ರಿಸ್ತಪೂರ್ವ ಮೂರನೆಯ ಶತಮಾನದಿಂದ ಕರ್ನಾಟಕದ ಇತಿಹಾಸ ಆರಂಭವಾಗುತ್ತದೆನ್ನಬಹುದು. ಅಂದಿನಿಂದ ಕರ್ನಾಟಕದ ರಾಜಕೀಯ-ಸಾಮಾಜಿಕ ಪರಿಸ್ಥಿತಿಗಳ ಚಿತ್ರ

ಸ್ಪಷ್ಟವಾಗುತ್ತ ಹೋಗಲು ನಾಡಿನಲ್ಲೆಲ್ಲಾ ತುಂಬಿರುವ ಶಾಸನಗಳು ಮೂಲ ಸಾಮಗ್ರಿಗಳಾಗಿವೆ. ಶಾಸನ ಎಂದರೆ ಆಜ್ಞೆ-ರಾಜಾಜ್ಞೆ. ಅರಸನು ತಾನು ರೂಪಿಸಿದ ನೀತಿ-ನಿಯಮಗಳು, ಮಾಡಿದ ದಾನಗಳು, ಇಂತಹವುಗಳನ್ನು ಶಿಲೆಯ ಮೇಲೆಯೋ, ತಾಮ್ರ ಅಥವಾ ಅಂತಹ ಇತರ ಲೋಹಗಳ ಮೇಲೋ ಬರೆಸಿಡುತ್ತಿದ್ದ. ಇದು ಪ್ರಜೆಗಳಿಗೆ ತಿಳಿದಿರಲಿ, ಅವರು ಇವುಗಳನ್ನು ಮೀರಿ ನಡೆಯದಿರಲಿ, ದಾನಗಳನ್ನು ದುರ್ವಿನಿಯೋಗ ಮಾಡದಿರಲಿ ಎಂಬುದು ಇದರ ಉದ್ದೇಶ.

ಕರ್ನಾಟಕದಲ್ಲಿ ಇಂತಹ ಶಾಸನಗಳಿಗೆ ಉತ್ತಮ ನಿದರ್ಶನಗಳೆಂದರೆ ಮೌರ್ಯ್ಯವಂಶದ ಅಶೋಕನು ಕೆತ್ತಿಸಿಟ್ಟ ಶಾಸನಗಳು. ಇವು ಭಾರತದಾದ್ಯಂತವೂ ಲಭಿಸಿವೆ. ಲಭಿಸುತ್ತಲೇ ಇವೆ. ಕರ್ನಾಟಕದಲ್ಲಿ ರಾಯಚೂರು ಜಿಲ್ಲೆಯ ಮಾಸ್ಕಿ ಮತ್ತು ಕೊಪ್ಪಳಗಳಲ್ಲಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಹಾಗು ಜಟಿಂಗ ರಾಮೇಶ್ವರಗಳಲ್ಲಿ, ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದೆಗೊಳ್ಳಗಳಲ್ಲಿ ಆತನ ಲಘುಪ್ರಸ್ತರ ಶಾಸನಗಳು (Minor rock edicts) ಲಭಿಸಿವೆ. ನಿಟ್ಟೂರು ಮತ್ತು ಉದೆಗೊಳ್ಳಗಳಲ್ಲಿ ತಲಾ ಎರಡೆರಡು ಶಾಸನಗಳಿವೆ. ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯಲ್ಲಿನ ಬೌದ್ಧನಿವೇಶನವಾಗಿದ್ದ ಸನ್ನತಿಯಲ್ಲೂ ಈತನ ಒಂದು ಶಾಸನ ಹಾಗೂ ಇನ್ನು ಕೆಲವು ತುಂಡು ಶಾಸನಗಳು ಕಾಣಿಸಿಕೊಂಡಿವೆ. ಅಶೋಕನ ಶಾಸನಗಳು ದೊರಕದಿದ್ದಲ್ಲಿ ಬೌದ್ಧ ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟ ಅಶೋಕನಿಗೆ ಸಂಬಂಧಿಸಿದ ಕತೆಗಳನ್ನೇ ನಿಜವೆಂದು ಪರಿಗಣಿಸಬೇಕಾಗುತ್ತಿತ್ತು. ಕರ್ನಾಟಕದ ಆತನ ಶಾಸನಗಳಿಂದ ಆತನ ಸಾಮ್ರಾಜ್ಯ ಕರ್ನಾಟಕದ ಉತ್ತರ ಭಾಗಗಳಿಗೆ (ಚಿತ್ರದುರ್ಗ ಜಿಲ್ಲೆಯೊಳಗೊಂಡಂತೆ) ಹಬ್ಬಿತೆಂಬುದು ಸ್ಪಷ್ಟವಾಗುತ್ತದೆ. ಬಳ್ಳಾರಿ ಜಿಲ್ಲೆಯ ಮ್ಯಾಕದೋಣಿ ಶಾಸನ ಮತ್ತು ಹಿರೇ ಹಡಗಲಿಯಲ್ಲಿ ದೊರೆತ ತಾಮ್ರ ಶಾಸನಗಳಿಂದ ಇಲ್ಲಿಯವರೆಗಿನ ಪ್ರದೇಶ ದಕ್ಷಿಣಭಾರತದಲ್ಲಿ

ಮೌರ್ಯರ ಉತ್ತರಾಧಿಕಾರಿಗಳಾದ ಸಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗುತ್ತದೆ.

ಕರ್ನಾಟಕದ ಮೊದಲ ಅರಸು ಮನೆತನ ಕದಂಬರದು. ಮಯೂರಶರ್ಮ ಈ ವಂಶದ ಮೂಲಪುರುಷ. ಈತನ ತಂದೆ ಬಂಧುಷೇಣ ಕ್ಷಾತ್ರಧರ್ಮವನ್ನವಲಂಬಿಸಿದ್ದನಾದರೂ, ತಾತ ವೀರಶರ್ಮ ವೈದಿಕಬ್ರಾಹ್ಮಣ. ಮಯೂರಶರ್ಮನು ಕಾಂಚೀಪುರಕ್ಕೆ ಹೋಗಿದ್ದಾಗ, ಅಲ್ಲಿ ಪಲ್ಲವರಿಂದ ಅವಮಾನಿತನಾಗಿ ಬ್ರಾಹ್ಮಣ ಧರ್ಮಕ್ಕಿಂತ ಕ್ಷಾತ್ರಧರ್ಮವೇ ಹೆಚ್ಚು ಗೌರವಾನ್ವಿತವೆಂದು ಮನಗಂಡು ಮಯೂರವರ್ಮನಾಗಿ ಕದಂಬ ರಾಜ್ಯವನ್ನು ಸ್ಥಾಪಿಸಿದ. ಶಿವಮೊಗ್ಗ ಜಿಲ್ಲೆಯ ತಾಳಗುಂದದ ಕಾಕುತ್ಸ್ಥವರ್ಮನ ಹಾಗೂ ಉತ್ತರ ಕನ್ನಡ ಜಿಲ್ಲೆಯ ಬನವಾಸಿಗೆ ಹೊಂದಿಕೊಂಡ ಗುಡ್ನಾಪುರದಲ್ಲಿ ದೊರೆತ ರವಿವರ್ಮನ ಶಾಸನಗಳಿಂದಷ್ಟೇ ಈ ವಿವರಗಳು ನಮಗೆ ತಿಳಿದಿರುವುದು. ಇವರ ಸಮಕಾಲೀನರಾಗಿ ದಕ್ಷಿಣ ಕರ್ನಾಟಕದಲ್ಲಿ ಗಂಗರು ಆಳಿದರು. ತಲಕಾಡು ಇವರ ಮೊದಲ ರಾಜಧಾನಿ. ಇವರ ಇತಿಹಾಸವೂ ನಮಗೆ ತಿಳಿದಿರುವುದು ಇವರ ಶಾಸನಗಳಿಂದಲೇ.

ಬಾದಾಮಿಯ ಚಾಲುಕ್ಯ ಅರಸರ ಮೊದನೆಯ ಪುಲಕೇಶಿ ಬಾದಾಮಿಯಲ್ಲಿ ಅಜೇಯವಾದ ದುರ್ಗವನ್ನು ಕ್ರಿ.ಶ. ೫೪೩ರಲ್ಲಿ ಕಟ್ಟಿಸಿದ. ಈತನ ಮೊಮ್ಮಗ ಮಂಗಲೇಶ ವಿಜಯಯಾತ್ರೆಯನ್ನು ಕೈಗೊಂಡ. ಉತ್ತರಾಪಥೇಶ್ವರನೆನಿಸಿದ ಕನೌಜಿನ ಶ್ರೀಹರ್ಷನನ್ನು ಇಮ್ಮಡಿ ಪುಲಕೇಶಿ ಸೋಲಿಸಿದ. ಕಂಚಿಯನ್ನು ಗೆದ್ದುಕೊಂಡ ಇಮ್ಮಡಿ ವಿಕ್ರಮಾದಿತ್ಯ ಅಲ್ಲಿನ ದೇವಾಲಯದ ಅಮೂಲ್ಯ ಭಂಡಾರವನ್ನು ಕಂಡು, ಸಂತಸಪಟ್ಟು, ದೋಚದೆ ತಾನೇ ಸ್ವತಃ ಇನ್ನಷ್ಟು ದಾನಗಳನ್ನು ನೀಡಿದ. ಇಂತಹ ವಿವರಗಳು ನಮಗೆ ತಿಳಿದಿರುವುದು ಅವರ ಶಾಸನಗಳಿಂದಲೇ.

ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟ ಮನೆತನದ ದಂತದುರ್ಗನು ಮಹಾನದೀ ಮತ್ತು ರೇವಾನದೀ ತೀರಪ್ರದೇಶಗಳನ್ನು

ತನ್ನ ಗಜಬಲದಿಂದ ಆಕ್ರಮಿಸಿದ. ಆ ಮನೆತನದ ಮೊದಲನೆಯ ಕೃಷ್ಣನು ಎಲ್ಲೋರಾದಲ್ಲಿ ಸುಪ್ರಸಿದ್ಧವಾದ ಕೈಲಾಸ ಗುಹಾಲಯವನ್ನು-ಕೃಷ್ಣೇಶ್ವರ ದೇವಾಲಯವನ್ನು ಕೊರೆಯಿಸಿದ ವಿಷಯ ನಂತರದ ತಾಮ್ರ ಶಾಸನವೊಂದರಿಂದ ತಿಳಿದಿದೆ. ಕಲ್ಯಾಣದ ಪಶ್ಚಿಮ ಚಾಲುಕ್ಯವಂಶದ ಇಮ್ಮಡಿತೈಲಪನ ಚಿಕ್ಕೆರೂರು ಶಾಸನವು ಕ್ರಿ.ಶ. ೯೯೫ರಲ್ಲಿ ಪರಮಾರಮುಂಜನೊಡನೆ ಅಂತಿಮ ಕದನ ಹೂಡಿದುದನ್ನು ತಿಳಿಸುತ್ತದೆ. ರನ್ನನ 'ಗದಾಯುದ್ಧ' ಕೃತಿಯ ಕಾಲನಿರ್ಣಯವನ್ನು ಖಚಿತಗೊಳಿಸಿರುವುದೂ ಶಾಸನವೇ. ಕ್ರಿ.ಶ. ೧೦೭೭ನೆಯ ಫೆಬ್ರವರಿ ೨೬ರಂದು ಆರ್ವಡಿ ವಿಕ್ರಮಾದಿತ್ಯ ಪಟ್ಟಕ್ಕೆ ಬಂದನೆಂದೂ ಅಂದಿನಿಂದ ಚಾಲುಕ್ಯ-ವಿಕ್ರಮ ಶಕೆಯ ಕಾಲಗಣನೆ ಆರಂಭವಾಯಿತೆಂದೂ ವಡಗೇರಿ ಶಾಸನದಿಂದ ತಿಳಿದುಬಂದಿದೆ. ಹೊಯ್ಸಳರ ಇಮ್ಮಡಿ ವೀರಬಲ್ಲಾಳ ಸೇಉಣ (ಯಾದವ)ರ ಐದನೆಯ ಭಿಲ್ಲಮನನ್ನು ಸೊರಟೂರಿನ ಭೀಕರ ಕದನದಲ್ಲಿ ಸೋಲಿಸಿದನೆಂಬುದು ಸಹ ಶಾಸನೋಕ್ತ ವಿಷಯವೇ.

ವಿಜಯನಗರದ ಅರಸರ ಶಾಸನಗಳು ದಕ್ಷಿಣ ಭಾರತದಲ್ಲೆಲ್ಲ ಸಹಸ್ರಾರು ಸಂಖ್ಯೆಯಲ್ಲಿ ದೊರೆತಿವೆ. ಸಂಸ್ಕೃತ, ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ರಚಿತವಾಗಿವೆ. ಅಂದಿನ ರಾಜಕೀಯ ಇತಿಹಾಸವಲ್ಲದೆ, ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು, ಅವುಗಳಲ್ಲಿ ಕಂಡುಬರುತ್ತಿದ್ದ ಬದಲಾವಣೆಗಳು, ಆರ್ಥಿಕ ಅಭಿವೃದ್ಧಿಯ ಪರಿಣಾಮವಾಗಿ ಸಾಮಾಜಿಕವಾಗಿ ಕಂಡುಬಂದ ಬದಲಾದ ಧೋರಣೆಗಳು ಇವುಗಳೆಲ್ಲವೂ ಆ ಶಾಸನಗಳಿಂದ ತಿಳಿದುಬರುತ್ತವೆ. ಪ್ರವಾಸೀ ಸಾಹಿತ್ಯ ಇದಕ್ಕೆ ಪೋಷಕ ಸಾಮಗ್ರಿಯಾಗಿದೆ. ವಿಜಯನಗರದ ಸ್ಥಾಪನೆಯ ನಂತರ ಹರಿಹರ-ಬುಕ್ಕಾದಿ ಐವರು ಸೋದರರು ತಮ್ಮ ಆಪ್ತರೊಂದಿಗೆ ಶೃಂಗೇರಿಗೆ ಹೋಗಿ ಅಲ್ಲಿನ ಶಾರದಾಪೀಠದ ಯತಿವರ್ಯರಿಂದ ಆಶೀರ್ವಾದ ಪಡೆದುದು, ಶ್ರೀವೈಷ್ಣವರಿಗೂ ಜೈನರಿಗೂ ನಡುವೆ ಒಮ್ಮೆ 'ಸಂವಾಜ'ವಾದ ಸಂದರ್ಭದಲ್ಲಿ ಅರಸನಾದ

ಬುಕ್ಕನು ಅವರ ಮುಖ್ಯಸ್ಥರನ್ನು ಬರಮಾಡಿಕೊಂಡು 'ನಾವೆಲ್ಲರೂ ಒಂದೇ, ಪರಮತನಿಂದನೆ ಪಾಪ, ಅಶಾಂತಿಗೆ ಹೇತು' ಎಂದೆಲ್ಲಾ ಬೋಧಿಸಿ ಅವುಗಳನ್ನು ಶಾಸನದಲ್ಲಿ ಶಾಶ್ವತವಾಗಿರುವಂತೆ ಬರೆಸಿಟ್ಟುದೂ ಗಮನಾರ್ಹ ಶಾಸನಸ್ಥ ಅಂಶಗಳು. ಬುಕ್ಕನ ಈ ಕಾರ್ಯ ಆತನ, ಅಂದಿನ ಅರಸರ ಸರ್ವಧರ್ಮ ಸಮನ್ವತೆಯ ಸಾಕ್ಷಿಯಾಗಿದೆ. ಕೃಷ್ಣದೇವರಾಯನ ದಂಡಯಾತ್ರೆಗಳ ವಿವರಗಳನ್ನೊಳಗೊಂಡ ಹಲವಾರು ಶಾಸನಗಳಿವೆ. ಆ ಕಾಲದಲ್ಲಿ ಸಾಮಾನ್ಯ ಜನರ ಮೇಲೆ ಹೇರಲಾದ ತೆರಿಗೆಗಳನ್ನು ಭರಿಸಲಾಗದ ಜನ ವಲಸೆಹೋಗತೊಡಗಿದಾಗ ಅರಸರು ಅವರನ್ನು ಅಂತಹ ಕರಭಾರಗಳಿಂದ ಮುಕ್ತಗೊಳಿಸಿದರೆಂಬ ಅಂಶವೂ ನಮಗೆ ಶಾಸನಗಳಿಂದ ತಿಳಿದುಬಂದದ್ದಷ್ಟೆ.

೧೭ನೆಯ ಶತಮಾನದ ನಂತರ ಬರವಣಿಗೆಗೆ ಕಾಗದವನ್ನು ಬಳಸತೊಡಗಿದಂತೆಲ್ಲಾ ಶಾಸನಗಳು ತಮ್ಮ ಮೌಲ್ಯಗಳನ್ನು ಕಳೆದುಕೊಂಡವು. ಆದರೂ ಕೆಳದಿ ನಾಯಕರ, ಚಿತ್ರದುರ್ಗದ ಪಾಳೆಯಗಾರರ, ಮೈಸೂರಿನ ಒಡೆಯರ ಆರಂಭದ ಚರಿತ್ರೆಯನ್ನು ರೂಪಿಸಲು ಶಾಸನಗಳೇ ಮುಖ್ಯ ಆಧಾರಗಳು. ಹೀಗೆ ಶಾಸನಗಳು ನಮ್ಮ ನಾಡಿನ ರಾಜಕೀಯ ಇತಿಹಾಸ, ಸಾಮಾಜಿಕ- ಆರ್ಥಿಕ ಪರಿಸ್ಥಿತಿಗಳು, ಅಂದಿನ ಕಲೆ, ಜನಜೀವನ ಮುಂತಾದ ಹತ್ತು ಹಲವು ಅಂಶಗಳ ಮೇಲೆ ವಿಶಿಷ್ಟವಾದ ಬೆಳಕನ್ನು ಚೆಲ್ಲುತ್ತವೆ.

ಶಾಸನಾಧ್ಯಯನದ ಇತಿಹಾಸ

ಶಾಸನಗಳ ಅಧ್ಯಯನ ಈಗ ಸುಮಾರು ೧೫೦ ವರ್ಷಗಳಿಗೂ ಹಿಂದೆಯೇ ಆರಂಭವಾಯಿತು. ವಾಸ್ತವಿಕವಾಗಿ ವಿಲಿಯಮ್‌ಜೋನ್ಸ್ (William Jones) ಎಂಬಾತ ನಮ್ಮ ದೇಶದ ಸಂಸ್ಕೃತ ಭಾಷೆ, ಸಂಸ್ಕೃತಿಗಳಲ್ಲಿ ಆಸಕ್ತಿ ತಳೆದು ಅದರ ಅಧ್ಯಯನಕ್ಕಾಗೆಂದೇ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂಬ ಸಂಸ್ಥೆಯನ್ನು ಕ್ರಿ.ಶ. ೧೭೮೪ರಲ್ಲಿ

ಆರಂಭಿಸಿದರು. ಮೊದಮೊದಲು ಭಾಷಾಶಾಸ್ತ್ರ ಹಾಗೂ ಸಾಹಿತ್ಯ ಕೃತಿಗಳ ಅಧ್ಯಯನಕ್ಕೆ ಮಾತ್ರ ಸೀಮಿತಗೊಂಡಿದ್ದ ಈ ಸಂಸ್ಥೆ ಕ್ರಮೇಣ ಇತರ ಕ್ಷೇತ್ರಗಳಲ್ಲಿ ಸಹ ಆಸಕ್ತಿ ವಹಿಸಿತು. ಅಂದಿನ ಈಸ್ಟ್ ಇಂಡಿಯಾ ಕಂಪೆನಿಯು ಭಾರತದ ಸಂಸ್ಕೃತಿ, ಸಾಹಿತ್ಯ, ಪುರಾತತ್ವಗಳಿಗೆ ಅವಶ್ಯಕವಾಗುವಂತೆ ಕ್ಷೇತ್ರ ಪರಿವೀಕ್ಷಣ-ಸಂಶೋಧನ ಕಾರ್ಯವನ್ನು ಆರಂಭಿಸಿತು. ಬುಕನನ್ ಹ್ಯಾಮಿಲ್ಟನ್ (Buchanan Hamilton) ಎಂಬಾತ ಅಂದಿನ ಮೈಸೂರು ಸಂಸ್ಥಾನ, ದಕ್ಷಿಣ ಭಾರತ, ಬಿಹಾರ, ಬಂಗಾಲ, ಅಸ್ಸಾಮ್‌ಗಳಲ್ಲಿ ಕಾರ್ಯರಂಭ ಮಾಡಿದ. ಆ ಸಂದರ್ಭದಲ್ಲಿಯೇ ಪಶ್ಚಿಮ ಭಾರತದ ಅಜಂತಾ, ಎಲಿಫಾಂಟಾ, ಕನ್ಹೇರಿ ಮುಂತಾದ ಗುಹೆಗಳು ಸಹ ಬೆಳಕಿಗೆ ಬಂದವು.

ಇಲ್ಲೆಲ್ಲಾ ಹಲವಾರು ಶಾಸನಗಳು ಲಭಿಸಿದವು. ಭಾರತದ ಟಂಕಸಾಲೆಯಲ್ಲಿ ಮುಖ್ಯಸ್ಥನಾಗಿದ್ದ ಜೇಮ್ಸ್ ಪ್ರಿನ್ಸೆಪ್ (James Princep) ಈ ಶಾಸನಗಳ ಅಧ್ಯಯನಕ್ಕೆ ತೊಡಗಿದರು. ಅವರು ಏಷ್ಯಾಟಿಕ್ ಸೊಸೈಟಿಯ ಕಾರ್ಯದರ್ಶಿಗಳಾಗಿದ್ದರು. ಹಲವಾರು ಬ್ರಾಹ್ಮೀ ಶಾಸನಗಳನ್ನು ಪರಿಶೀಲಿಸುತ್ತಿದ್ದಾಗ, ಸಾಂಚಿಸ್ತೂಪದಲ್ಲಿ ಹರಕೆಗಳಿಗೆ ಸಂಬಂಧಿಸಿದಂತಹ ಕೆಲವು ಸಣ್ಣ ಒಂದೇ ಮಾದರಿಯ ಶಾಸನಗಳು ಎರಡು ಅಕ್ಷರಗಳೊಂದಿಗೆ (ᑐ⊥) ಮುಗಿಯುತ್ತಿದ್ದುದನ್ನು ಅದಕ್ಕೆ ಹಿಂದೆ ಸ ಎಂಬ ಅಕ್ಷರವಿರುತ್ತಿದ್ದುದನ್ನು ಗಮನಿಸಿದ ಪ್ರಿನ್ಸೆಪ್ ಅವರು ಅದು ಸವದಾನಂ (ಸ್ಯ ದಾನಂ - ಇಂತಹದರ ದಾನ) ಎಂಬುವುದನ್ನು ಓದುವುದರಲ್ಲಿ ಯಶಸ್ವಿಯಾದರು. ಅದು ಜ್ಞಾನ ಭಂಡಾರವನ್ನೇ ತೆರೆದಿಟ್ಟಿತು. ಕ್ರಮೇಣ ಒಂದೊಂದೇ ಅಕ್ಷರವನ್ನು ಗುರುತಿಸಲಾಯಿತು. ಇದು ಬ್ರಾಹ್ಮೀಲಿಪಿ.

೧೯ನೆಯ ಶತಮಾನದ ಮಧ್ಯದಲ್ಲಿ (೧೮೬೨) ಸೈನ್ಯಾಧಿಕಾರಿಯಾಗಿದ್ದ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್‌ರವರು (Alexander Cunningham) ಮೊದಲ ಬಾರಿಗೆ ಪುರಾತತ್ವ ಇಲಾಖೆಯ ಮೊದಲ ಅನ್ವೇಷಕರಾಗಿ ನೇಮಕಗೊಂಡರು. ಇದು ಅಂದಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಕ್ಯಾನಿಂಗ್‌ನ (Lord Canning) ಆಸಕ್ತಿ ಹಾಗೂ ಪ್ರಯತ್ನಗಳ ಫಲ. ಆ ವೇಳೆಗಾಗಲೇ Asiatic Researches. ಹಾಗೂ Journal of the Asiatic Society of Bengal ಎಂಬ ನಿಯತಕಾಲಿಕೆಗಳು ಆರಂಭವಾಗಿದ್ದು ಅವುಗಳಲ್ಲಿ ಪುರಾತತ್ವ, ಇತಿಹಾಸ, ಸಂಸ್ಕೃತಿಗಳಿಗೆ ಸಂಬಂಧಿಸಿದ ಹಲವಾರು ಲೇಖನಗಳು ಪ್ರಕಟಗೊಂಡವು. ಈ ನಂತರ ಪ್ರಕಟಣೆಗೆ ತೊಡಗಿದ ಇಂಡಿಯನ್ ಆಂಟಿಕ್ವೆರಿ (Indian Antiquary (೧೮೭೨) ಹಾಗೂ ಇತರ ನಿಯತ ಕಾಲಿಕಗಳು-Madras Journal of Literature and Science, Journal of the Royal Asiatic Society of Bengal (Lonon), Journal of the Bombay Branch of the Royal Asiatic Society, Transactions of the Literary Society of Bombay - ಇತ್ಯಾದಿಗಳು ಹೆಸರಿಸಬಹುದಾದವುಗಳು.

ಭಾರತ ಸರ್ಕಾರದ ಪುರಾತತ್ವ ವಿಭಾಗ ಸಂಗ್ರಹಿಸಿದ ಶಾಸನಗಳಲ್ಲಿ ಅಶೋಕನ ಶಾಸನಗಳನ್ನು Corpus Inscriptionum Indicarum ಎಂಬ ಒಂದು ಸಂಪುಟದಲ್ಲಿ (೧೮೭೭) ಕನ್ನಿಂಗ್‌ಹ್ಯಾಮ್ ಪ್ರಕಟಿಸಿದರು. ಇದರ ಪರಿಷ್ಕೃತ ಸಂಪುಟವನ್ನು ಹುಲ್ಷ್ (Hultzsch) ಎಂಬ ಜರ್ಮನಿಯ ವಿದ್ವಾಂಸರು ೧೯೨೫ರಲ್ಲಿ ಪ್ರಕಟಿಸಿದರು. ಭಾರತ ಸರ್ಕಾರದ ಶಾಸನತಜ್ಞರಾಗಿ (Epigraphist to the Govt. of India) ನೇಮಕಗೊಂಡ ಜೆ. ಎಫ್. ಫ್ಲೀಟರು ಗುಪ್ತರ ಶಾಸನಗಳನ್ನು

ಕ್ರೋಢೀಕರಿಸಿ ಅದೇ CI I ಮಾಲೆಯ ಮೂರನೆಯ ಸಂಪುಟದಲ್ಲಿ ೧೮೮೮ರಲ್ಲಿ ಪ್ರಕಟಿಸಿದರು. ಕನ್ನಿಂಗ್‌ಹ್ಯಾಮ್‌ರ ನಂತರ ಪುರಾತತ್ತ್ವ ವಿಭಾಗದ ಪ್ರಧಾನ ನಿರ್ದೇಶಕರಾಗಿ ಜೇಮ್ಸ್ ಬರ್ಗೆಸ್ (James Burgess) ನೇಮಕಗೊಂಡರು. ಇವರು ೧೮೮೭ರಲ್ಲಿ ಎಪಿಗ್ರಾಫಿಯ (Epigraphia Indica) ಇಂಡಿಕ ಎಂಬ ದ್ವೈವಾರ್ಷಿಕ (ಮೂರು ತಿಂಗಳುಗಳಿಗೊಂದರಂತೆ ಎಂಟು ಭಾಗಗಳನ್ನೊಳಗೊಂಡದ್ದು) ಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಿದರು. ಅಂದಿನಿಂದ ಈವರೆಗೆ ಇದರ ೪೨ ಸಂಪುಟಗಳು ಪ್ರಕಟಗೊಂಡಿವೆ.

ಮದರಾಸ್ ಸರ್ಕಾರ ಹುಲ್ಷರನ್ನು ಶಾಸನ ತಜ್ಞರಾಗಿ ನೇಮಕ ಮಾಡಿದ ನಂತರ ಅವರು ಆ ಪ್ರಾಂತದ ಶಾಸನಗಳನ್ನೆಲ್ಲ ಸಂಗ್ರಹಿಸುವ ಕಾರ್ಯವನ್ನು ಆರಂಭಿಸಿದರು. ವಾರ್ಷಿಕ ವರದಿಗಳಲ್ಲಿ (Annual Report on (South Indian) Epigraphy) ಇವುಗಳನ್ನೆಲ್ಲಾ ಪಟ್ಟಿಮಾಡಲಾಯಿತು. ಇದು ೧೯೨೧ ರಿಂದ . ೧೮೮೭ರಿಂದ ಈ ವರ್ಷದವರೆಗಿನ ಶಾಸನಗಳನ್ನು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಮಾತ್ರ ನಮೂದಿಸಲಾಗುತ್ತಿತ್ತು. ೧೯೪೫ - ೪೬ರಿಂದ. ಈ ವಾರ್ಷಿಕ ವರದಿಗಳು Annual Report on Indian Epigraphy ಎಂಬ ಹೆಸರಿನಿಂದ ಪ್ರಕಟವಾಗುತ್ತಿವೆ. ೧೯೭೯-೮೦ರವರೆಗಿನ ವಾರ್ಷಿಕ ವರದಿಗಳು ಇದೀಗ ಪ್ರಕಟವಾಗಿವೆ. ದಕ್ಷಿಣ ಭಾರತದ ಶಾಸನಗಳು South Indian Inscriptions ಎಂಬ ಹೆಸರಿನಲ್ಲಿ ಪ್ರಕಟವಾಗತೊಡಗಿ ಈವರೆಗೆ ೨೫ ಸಂಪುಟಗಳು ಪ್ರಕಟವಾಗಿವೆ. ಇವುಗಳಲ್ಲಿ ಶಾಸನಪಾಠಗಳು ಕೆಲವೊಮ್ಮೆ ಸಾರಾಂಶಗಳೊಡನೆ, ಕೆಲವಲ್ಲಿ ಸಾರಾಂಶಗಳಿಲ್ಲದೆ, ಹಾಗೆಯೇ ಪೀಠಿಕೆಗಳು ಕೆಲವು ಸಂಪುಟಗಳಲ್ಲಿ ಸೇರ್ಪಡೆಯಾಗಿ, ಕೆಲವೊಮ್ಮೆ ಅವುಗಳಿಲ್ಲದೆ, ಪ್ರಕಟವಾಗಿವೆ.

ಕರ್ನಾಟಕಕ್ಕೆ ಸಂಬಂಧಿಸಿದ ಶಾಸನಗಳು ಈ ಮಾಲೆಯ ೯,೧೧,೧೨,೧೫,೧೮ ಮತ್ತು ೨೦ನೆಯ ಸಂಪುಟಗಳಲ್ಲಿ ಕನ್ನಡ ಶಾಸನಗಳು, ಅವುಗಳ ಸಂಪೂರ್ಣ ಪಾಠ ಟಿಪ್ಪಣಿಗಳು ಇತ್ಯಾದಿಗಳೊಡನೆ ಪ್ರಕಟವಾಗಿವೆ. ೯ನೆಯ ಸಂಪುಟದ ಮೊದಲ ಎರಡು ಭಾಗಗಳನ್ನು ಆರ್. ಶ್ಯಾಮಶಾಸ್ತ್ರಿ ಹಾಗೂ ಎನ್. ಲಕ್ಷ್ಮೀನಾರಾಯಣರಾಯರು ಸಂಪಾದಿಸಿದ್ದಾರೆ. ೧೧ನೆಯ ಸಂಪುಟ ಮುಂಬಯಿ-ಕರ್ನಾಟಕದ ಶಾಸನಗಳ ಮೊದಲ ಸಂಪುಟ. ಇದರಲ್ಲಿ ಎರಡು ಭಾಗಗಳಿದ್ದು ಮೊದಲನೆಯ ಭಾಗವನ್ನು ಸಿ.ಆರ್. ಕೃಷ್ಣಮಾಚಾರ್ಲು, ಆರ್.ಎಸ್. ಪಂಚಮುಖಿ ಮತ್ತು ಎನ್. ಲಕ್ಷ್ಮೀನಾರಾಯಣರಾಯರು ಎರಡನೆಯ ಭಾಗವನ್ನು ಎನ್. ಲಕ್ಷ್ಮೀನಾರಾಯಣರಾಯರು, ಸಂಪಾದಿಸಿದ್ದಾರೆ. ೧೫ನೆಯ ಸಂಪುಟವನ್ನು ಪಿ.ಬಿ. ದೇಸಾಯರೂ ಸಂ. ೧೮ನ್ನು ಎನ್. ಲಕ್ಷ್ಮೀನಾರಾಯಣರಾಯರೂ ೨೦ನ್ನು ಜಿ. ಎಸ್. ಗಾಯಿಯವರೂ ಸಂಪಾದಿಸಿದ್ದಾರೆ.

ಕನ್ನಡ ಶಾಸನಗಳ ಅಧ್ಯಯನ ಆರಂಭವಾದುದು ಕ್ರಿ.ಶ. ೧೭೯೧ರಲ್ಲಿ ಎನ್ನಬೇಕು. ಆ ವರ್ಷ ಕಲ್ಕತ್ತೆಯಲ್ಲಿ ಪ್ರಕಟವಾದ 'Asatick Researches' ಪತ್ರಿಕೆಯಲ್ಲಿ 'A Royal Grant of Land in Canara' ಎಂಬ ಲೇಖನ ಪ್ರಕಟವಾಯಿತು. ಅಲೆಕ್ಸಾಂಡರ್ ಮ್ಯಾಕ್ಲಿಯೋಡ್ (Alexandar Mcleod) ಎಂಬ ಗಣಿಕೆಲಸದಲ್ಲಿ ತೊಡಗಿದ್ದ, ಆಂಗ್ಲ ಅಧಿಕಾರಿಯೊಬ್ಬರು ಕಾಂಚೀಪುರದ ದೇವಸ್ಥಾನದಲ್ಲಿದ್ದ ತಾಮ್ರಪಟಗಳ ಪ್ರತಿಯನ್ನು ವಿಲಿಯಮ್ ಜೋನ್ಸ್‌ರಿಗೆ ಕಳುಹಿಸಿದಾಗ ಅವರು ಅದನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿದರು. ವಾಸ್ತವವಾಗಿ ಅದು ವಿಜಯನಗರದ ಅರಸನ ದಾನ ಶಾಸನ. ಅವರು ಕರ್ನಾಟಕದ ಅರಸರಾಗಿದ್ದ ಕಾರಣ ಅದು 'ಕೆನರಾ' (ಕರ್ನಾಟಕ)ದ ಶಾಸನವೆನಿಸಿಕೊಂಡಿತ್ತು. ದೇವನಾಗರೀ (ನಂದಿ

ನಾಗರೀ) ಲಿಪಿಯ ಈ ಶಾಸನದ ಭಾಷೆ ಸಂಸ್ಕೃತ. ನಂತರದ ಹೆಜ್ಜೆ ವಾಲ್ಟರ್ ಇಲಿಯಟ್ ಮಹಾಶಯರದು. Royal Asiatic Society ಯ ನಿಯತಕಾಲಿಕದಲ್ಲಿ ಅವರು ೧೮೭೭ರಲ್ಲಿ Hindu Inscriptions ಎಂಬ ಲೇಖನವನ್ನು ಪ್ರಕಟಿಸಿದರು. ಇದರಿಂದ ನಮ್ಮ ರಾಜ್ಯದ ರಾಜಕೀಯ ಸಂಸ್ಕೃತಿ- ಇತಿಹಾಸಗಳ ಮೇಲೆ ವಿಶಿಷ್ಟವಾದ ಬೆಳಕನ್ನು ಚೆಲ್ಲಿದಂತಾಯಿತು.

ಕರ್ನಲ್ ಕಾಲಿನ್ ಮೆಕಂಜಿಯವರು ಹತ್ತು ವರ್ಷಗಳ ಕಾಲ (೧೭೯೯-೧೮೦೯) ಮೈಸೂರು ರಾಜ್ಯದಲ್ಲಿ ಭೌಗೋಲಿಕ ಪರಿವೀಕ್ಷಣಾಕಾರ್ಯವನ್ನು ಮಾಡಿದ್ದರು. ತಮ್ಮ ಗಮನಕ್ಕೆ ಬಂದ ಸುಮಾರು ೩೦೦೦ಕ್ಕೂ ಮೇಲ್ಪಟ್ಟ ಶಾಸನಗಳು, ತಾಮ್ರಪಟಗಳು ಇವರ ಗಮನವನ್ನು ಸೆಳೆದುವು. ಇವರಿಗೆ ಕವೆಲಿ ವೆಂಕಟ ಬೋರಯ್ಯ (Cavelly Venkata Boriah Brahmin) ಎಂಬಾತ ನೆರವು ನೀಡಿದರು. ಈತನನ್ನು Brahmin ಎಂದು ಕರೆದಿದ್ದರೂ ಬ್ರಾಹ್ಮಣರು ಇಂತಹ ಹೆಸರುಗಳನ್ನು ಹೊಂದಿದ್ದ ಬಗೆಗೆ ಸಂದೇಹ ವ್ಯಕ್ತಪಡಿಸಲಾಗಿದೆ. ಬೋರಯ್ಯ ಒಬ್ಬ ತೆಲುಗು ಕವಿ, ವಿದ್ವಾಂಸರಾಗಿದ್ದರೆಂಬುದು ಈಗ ತಿಳಿದಿದೆ. ಮೆಕೆಂಜಿಯ ಮರಣಾನಂತರ ಪ್ರೊ. ವಿಲ್ಸನ್‌ರವರು ಅವರ ಬರವಣಿಗೆಗಳ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಆತನ ಸಂಗ್ರಹದಲ್ಲಿ ೮೦೨೬ ಶಾಸನಗಳ ನಕಲುಗಳು (ಹಸ್ತಪ್ರತಿಗಳು!) ಸೇರಿದ್ದು ಈ Mackenzie Collections ಈಗ ಮದರಾಸಿನ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿವೆ.

ಮಹಾರಾಷ್ಟ್ರದ ಬಾಲಗಂಗಾಧರಶಾಸ್ತ್ರಿ ಹಾಗೂ ಡಾ॥ ಭಾವುದಾಜಿ ಎಂಬುವವರು ಪ್ರಾಚೀನ ಕನ್ನಡ ಶಾಸನಗಳನ್ನು ಓದಲು ಯತ್ನಿಸಿದರಾದರೂ ಸಫಲವಾಗಿರಲಿಲ್ಲ. ಉತ್ತರ ಕರ್ನಾಟಕದ ಶಾಸನಗಳನ್ನು ಓದಿ ಪ್ರಕಟಿಸಿದ ಕೀರ್ತಿ ಜಾನ್ ಫೈತ್‌ಪುಲ್ ಫ್ಲೀಟ್ (John

Faithful Fleet) ರವರಿಗೆ ಸಲ್ಲಬೇಕು. ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆ ಹೊರಡಿಸುತ್ತಿದ್ದ ನಿಯತಕಾಲಿಕೆ (Journal of the Bombay Branch of the Royal Asiatic Society) ಯ ೯ನೆಯ ಸಂಪುಟದಲ್ಲಿ On Some Copper Plates found in the Belgaum Collectorate. ಈ ದಿಶೆಯಲ್ಲಿ ಇವರ ಮೊದಲ ಪ್ರಯತ್ನ ಇದು. ನಂತರದ ಇವರ ಲೇಖನಗಳನ್ನು ಪ್ರಕಟಿಸುವಲ್ಲಿ ಇವರಿಗೆ ವೆಂಕಟರಂಗೋ ಕಟ್ಟಿ ಮತ್ತು ಮಡಿವಾಳೇಶ್ವರ ತುರುಮುರಿ ಎಂಬುವವರು ಬಹಳ ಸಹಾಯ ಮಾಡಿದರು. Indian Antiquary ಯಲ್ಲಿಯೂ ಇವರು ಬಹಳ ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರವಾಸ ಹೊರಟಾಗ ಶಾಸನಗಳನ್ನು ಇವರೇ ಪ್ರತಿಮಾಡಿಕೊಂಡು ನಂತರ ಇವುಗಳನ್ನು ಅಭ್ಯಾಸಮಾಡುತ್ತಿದ್ದರು. ತೇದಿಗಳ ವಿವರಗಳು ಅರಸರ ಹೆಸರುಗಳು ಇತ್ಯಾದಿಗಳು ಬಂದ ಸಂದರ್ಭದಲ್ಲಿ ಕೆಂಪುಶಾಯಿ (ಅಥವಾ ಪೆನ್ಸಿಲ್) ಗಳಲ್ಲಿ ಅಲ್ಲಲ್ಲಿ ಗುರುತಿಸಿದ್ದರು. ಬಹುಶಃ ಮೂರು ಪ್ರತಿಗಳನ್ನು ತೆಗೆದು ಒಂದು ಅವರ ಸ್ವಂತ ಸಂಗ್ರಹದಲ್ಲಿದ್ದು, ಇನ್ನೊಂದನ್ನು ಪುಣೆಯ ಡಕ್ಕನ್ ಎಜುಕೇಷನ್ ಸೊಸೈಟಿಯ ಗ್ರಂಥಾಲಯದಲ್ಲಿಟ್ಟಿದ್ದರು. ಪುಣೆಯಲ್ಲಿದ್ದ ಪ್ರತಿಗಳನ್ನು ಬಹಳ ಶ್ರಮವಹಿಸಿ ಲಕ್ಷ್ಮೀನಾರಾಯಣರಾಯರು ಆಗ ಉದಕಮಂಡಲದಲ್ಲಿದ್ದ ಪ್ರಧಾನ ಶಾಸನ ತಜ್ಞರ ಕಛೇರಿಗೆ ತರಿಸಿಕೊಂಡರು. ಅದನ್ನು ನಾನೂ ಸ್ವತಃ ನೋಡಿದ್ದೇನೆ. ನಂತರ ಅದೇ ಶಾಸನಗಳನ್ನು ಪ್ರತಿ ಮಾಡಲು ಹೋದಾಗ ಆ ಶಾಸನಕಲ್ಲುಗಳು ಒಡೆದೋ, ಸವೆದುಹೋಗಿದ್ದೋ ಆಗಿ ಫ್ಲೀಟ್‌ರವರ ಪ್ರತಿಗಳಲ್ಲಿ ಶುದ್ಧ ಸಮಗ್ರಪಾಠಗಳು ದೊರೆಯುತ್ತವೆ. ಅದನ್ನು ನಾನೂ ಬಳಸಿದ್ದೇನೆ. ಆದರೆ ಈಗ ಅವುಗಳ ಪರಿಸ್ಥಿತಿ ಹೇಗಿದೆಯೋ ತಿಳಿಯದು. ೧೮೭೮ರಲ್ಲಿ ಅವರು Pali, Sanskrit and Old Canarese Inscriptions

from the Bombay Presidency and parts of the Madras Presidency and Mysore ಎಂಬ ಸುದೀರ್ಘ ಹೆಸರಿನಲ್ಲಿ ಪ್ರಕಟಿಸಿದರು. ಮುಂಬಯಿ ಗೆಜೆಟಿಯರ್‌ನ ಭಾಗವಾಗಿ Dynastic History of Kannarese ಎಂಬ ಗ್ರಂಥವನ್ನು ಬರೆದರು. ಇದು ಅತ್ಯಂತ ಅಧಿಕೃತವಾಗಿ ಬರೆದಿರುವ ಇತಿಹಾಸಗ್ರಂಥ, ಈಗಲೂ ಒಂದು ಆಕರ ಗ್ರಂಥವಾಗಿದೆ.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ಮೊದಲ ಪುರಾತತ್ತ್ವ ನಿರ್ದೇಶಕರಾಗಿ ನೇಮಕಗೊಂಡ ಬೆಂಜಮಿನ್ ಲೂಯಿಸ್ ರೈಸ್ (Benjamin Lewis Rice) ರವರು ೧೮೭೯ರಲ್ಲಿಯೇ ಮೈಸೂರು ಇನ್‌ಸ್ಕ್ರಿಪ್ಷನ್ಸ್ (Mysore Inscriptions) ಎಂಬ ಗ್ರಂಥವನ್ನು ಪ್ರಕಟಿಸಿದ್ದರು. ೧೮೮೬ರಲ್ಲಿ ಎಪಿಗ್ರಾಫಿಯ ಕರ್ನಾಟಕ (Epigraphia Carnatica) ಎಂಬ ಗ್ರಂಥಮಾಲೆಯಲ್ಲಿ ಹಿಂದಿನ ಕೊಡಗಿನ ಶಾಸನಗಳನ್ನು ಮೊದಲ ಸಂಪುಟದಲ್ಲಿ ಪ್ರಕಟಿಸಿದರು. ನಂತರ ೧೮೮೯ರಲ್ಲಿ ಶ್ರವಣಬೆಳಗೊಳದ ಶಾಸನಗಳನ್ನೊಳಗೊಂಡ ಎರಡನೆಯ ಸಂಪುಟ ಹೊರಬಂದಿತು. ಆ ಬಳಿಕ ಹಳೆಯ ಮೈಸೂರು ಸಂಸ್ಥಾನಕ್ಕೆ ಸೇರಿದ್ದ ಜಿಲ್ಲೆಗಳಲ್ಲಿನ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದರು. ಹನ್ನೆರಡು ಸಂಪುಟಗಳಲ್ಲಿ ಅವರು ಪ್ರಕಟಿಸಿರುವ ಶಾಸನಗಳ ಸಂಖ್ಯೆ ೮೮೬೯. ಈ ಸಂಪುಟಗಳಲ್ಲಿ ಕನ್ನಡದಲ್ಲಿ ಶಾಸನ ಪಾಠಗಳಲ್ಲದೆ ಭಾಗಶಃ ಲಿಪ್ಯಂತರ ಹಾಗೂ ಭಾಷಾಂತರಗಳೂ ಇವೆ. ಆದರೆ ಇವೆರಡೂ ಅಸಮಗ್ರ; ದೋಷಯುಕ್ತ. ಕನ್ನಡ ಶಾಸನ ಪಾಠಗಳಿಗೂ ಲಿಪ್ಯಂತರಗಳಲ್ಲಿನ ಶಾಸನ ಪಾಠಗಳಿಗೂ ಹೊಂದಾಣಿಕೆ ಅನೇಕ ಸಂದರ್ಭಗಳಲ್ಲಿ ಕಂಡು ಬಂದಿಲ್ಲ. ಆದರೂ ರೈಸ್‌ರವರು ಅಂದು ಹಾಕಿದ ಬುನಾದಿಯ ಮೇಲೆಯೇ ಕನ್ನಡ ಸಾಹಿತ್ಯ, ಇತಿಹಾಸ, ಸಂಸ್ಕೃತಿಗಳ ಪರಿಚಯ ನಿಂತಿರುವುದು. ನಂತರದವೆಲ್ಲವೂ ಅದಕ್ಕೆ ಪೂರಕಗಳೆನ್ನಬೇಕು.

ರೈಸ್‌ರವರ ಉತ್ತರಾಧಿಕಾರಿಗಳಾಗಿದ್ದ ಶ್ಯಾಮಶಾಸ್ತ್ರಿಗಳು ಪ್ರಕಾಂಡ ಪಂಡಿತರು. ಆದರೆ ಅವರಿಗೆ ಸಂಸ್ಕೃತದ ಮೇಲೆ ಹೆಚ್ಚಿನ ಒಲವು. ಎಂತಲೇ ಅವರು ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದ ಶಾಸನಗಳೆಲ್ಲವೂ ಬಹುಮಟ್ಟಿಗೆ ಸಂಸ್ಕೃತ ಶಾಸನಗಳೇ. ಕನ್ನಡ ಶಾಸನಗಳ ಉಲ್ಲೇಖಗಳು ಮಾತ್ರ ಇವೆ. ಆದರೆ ಅವರು ಸಂಗ್ರಹಿಸಿದ ಎಲ್ಲ ಶಾಸನಗಳನ್ನೂ ಪಟ್ಟಿಮಾಡಿದಂತೆ ಕಂಡುಬರುವುದಿಲ್ಲ. ನಂತರ ಅಧಿಕಾರಕ್ಕೆ ಬಂದ ಆರ್. ನರಸಿಂಹಾಚಾರ್ಯರು ಕನ್ನಡ ಹಾಗೂ ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯ ಪಡೆದವರು. ಅವರು ಹೊರತಂದ ಕವಿಚರಿತೆಯ ಮೂರು ಸಂಪುಟಗಳು ಇದಕ್ಕೆ ಸಾಕ್ಷಿ. ತಮ್ಮ ೧೬ ವರ್ಷಗಳ ಅಧಿಕಾರಾವಧಿಯಲ್ಲಿ ಇವರು ಸುಮಾರು ೫೦೦೦ ಶಾಸನಗಳನ್ನು ಹೊಸದಾಗಿ ಪತ್ತೆಹಚ್ಚಿದರು. ಅವುಗಳನ್ನು (ಎಲ್ಲವನ್ನೂ ಅಲ್ಲದಿದ್ದರೂ) ವಾರ್ಷಿಕವರದಿಗಳಲ್ಲಿ ಪ್ರಕಟಿಸಿದರು. ಎಫಿಗ್ರಾಫಿಯ ಕರ್ನಾಟಿಕದ ೨ನೆಯ ಸಂಪುಟದ ಶ್ರವಣಬೆಳಗೊಳದ ಪರಿಷ್ಕೃತ ಆವೃತ್ತಿಯನ್ನು ೧೯೨೩ರಲ್ಲಿ ಹೊರತಂದರು. ಅವರ ನಂತರದ ಕೊಡುಗೆ ಎಂ. ಎಚ್. ಕೃಷ್ಣರವರದು. ಇವರು ಇಲಾಖೆಯ ವಾರ್ಷಿಕ ವರದಿಗಳಿಗೆ ಹೊಸ ರೂಪ ತಂದರು. ಶಾಸನಗಳ ಪಾಠಗಳನ್ನು ನೀಡುವಲ್ಲಿ ಹೊಸ ಹೆಜ್ಜೆ ತುಳಿದರು. ಅವುಗಳಿಗೆ ಟೀಕೆ-ಟಿಪ್ಪಣಿಗಳನ್ನು ಜೋಡಿಸಿದರು. ಎಪಿಗ್ರಾಫಿಯ ಕರ್ನಾಟಿಕದ ೧೨ ಸಂಪುಟಗಳಿಗೆ ಪದಸೂಚಿ ಇರಲಿಲ್ಲ. ಇವರು ಅಂತಹ ಪದಸೂಚಿಯನ್ನು ಸಿದ್ಧಗೊಳಿಸಿದರು. A ಇಂದ ಹಿಡಿದು K ವರೆಗಿನ ಪದಗಳ ಸೂಚಿಯನ್ನೊಳಗೊಂಡ ೧೩ನೆಯ ಸಂಪುಟವನ್ನು ಹೊರತಂದರು. ಇದರ ಮುಂದಿನ ಭಾಗ, K ಇಂದ Z ವರೆಗಿನ ಪದಸೂಚಿಗಳ ಭಾಗ ಹೊರಬರಲು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಬೇಕಾಯಿತು. ನಂತರ ಇಲಾಖೆಗೆ ಇನ್ನೊಮ್ಮೆ ಗ್ರಹಣಕಾಲ. ಶ್ಯಾಮಶಾಸ್ತ್ರಿಗಳು ಓರಿಯೆಂಟಲ್

ಲೈಬ್ರರಿಯ ನಿರ್ದೇಶಕರಾಗಿದ್ದು ಪುರಾತತ್ವ ವಿಭಾಗದ ಆಡಳಿತವನ್ನೂ ವಹಿಸಿಕೊಂಡಿದ್ದರು. ಕೃಷ್ಣರವರು ಮೈಸೂರು ವಿಶ್ವವಿದ್ಯಾಲಯ ಇತಿಹಾಸ ಪ್ರಾಧ್ಯಾಪಕರಾಗಿದ್ದು ಈ ಇಲಾಖೆಯ ಹೊಣೆಗಾರಿಕೆಯನ್ನು ಸಮರ್ಥವಾಗಿ ಹೊತ್ತರು. ಅವರು ತೀರಿಕೊಂಡ ಬಳಿಕ ಕೆಲವು ಕಾಲ ಪೂರ್ಣಾವಧಿಯ ನಿರ್ದೇಶಕರೇ ಇರದೆ, ಪುನಃ ಅದನ್ನು ಪ್ರಾಚೀನ ಭಾರತೀಯ ಇತಿಹಾಸ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಗೊಂಡ ಸುಪ್ರಸಿದ್ಧ ಇತಿಹಾಸಕಾರರಾಗಿದ್ದ ಕೆ. ಎ. ನೀಲಕಂಠಶಾಸ್ತ್ರಿಗಳ ನೇತೃತ್ವಕ್ಕೇ ಒಪ್ಪಿಸಲಾಯಿತು. ಅವರ ಸಹಾಯಕರಾಗಿದ್ದ ಖ್ಯಾತ ಪುರಾತತ್ವಜ್ಞರಾದ ಎಂ. ಶೇಷಾದ್ರಿಯವರು ಎಲೆಯ ಮರೆಯ ಕಾಯಿಯಂತೆ ದುಡಿದರು. ಈ ಅವಧಿಯಲ್ಲಿ ಹಾಸನ, ಶಿವಮೊಗ್ಗ, ಕೋಲಾರ ಜಿಲ್ಲೆಗಳಲ್ಲಿ ಹೊಸದಾಗಿ ಸಿಕ್ಕಿದ್ದ, ಹಾಗೂ ಪರಿಷ್ಕೃತ ಪಾಠಗಳನ್ನೊಳಗೊಂಡ ಎ. ಕ. ಸಂಪುಟಗಳು ೧೪ ರಿಂದ ೧೬ ಪ್ರಕಟವಾದವು. ಶೇಷಾದ್ರಿಗಳು ಪ್ರಾಧ್ಯಾಪಕರೂ ಪದಾಧಿಕಾರಿ ನಿರ್ದೇಶಕರು ಆಗಿ ಹಲವಾರು ಪುರಾತತ್ವ ನಿವೇಶನಗಳಲ್ಲಿ - ಕಿಬ್ಬನಹಳ್ಳಿ, ಚಂದ್ರವಳ್ಳಿ, ಟಿ. ನರಸೀಪುರ ಇತ್ಯಾದಿಗಳು- ಅಗೆತದ ಕಾರ್ಯ ಆರಂಭಿಸಿ ಪ್ರಾಚೀನ, ನವಶಿಲಾಯುಗಗಳ ಪಳೆಯುಳಿಕೆಗಳನ್ನು ಬಯಲಿಗೆ ತಂದರು. ಆದರೆ ಶಾಸನದ ಸಂಗ್ರಹ, ಪ್ರಕಟಣೆಗಳ ಕೆಲಸಕ್ಕೆ ಮಂಕುಕವಿದಂತಾಗಿದ್ದು ಈಗಿನ ನಿರ್ದೇಶಕರಾಗಿರುವ ಇತ್ತೀಚೆಗೆ ನೇಮಕಗೊಂಡ ಡಿ. ದೇವರಾಜರು ಅದಕ್ಕೆ ನವಚೇತನ ಕೊಡುವ ದಿಶೆಯಲ್ಲಿ ಕಾರ್ಯಮಗ್ನರಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಈ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಮತ್ತೊಮ್ಮೆ ಪರಿಷ್ಕರಿಸಿ ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡಿತು. ಕಳೆದ ಒಂದು ಶತಮಾನದಲ್ಲಿ ಕನ್ನಡ ಸಾಹಿತ್ಯ, ಇತಿಹಾಸ, ಸಂಸ್ಕೃತಿಗಳ ಬಗೆಗೆ ಆಸಕ್ತಿ,

ಸಂಶೋಧನೆಯನ್ನು ಕುರಿತಂತೆ ಉತ್ಸಾಹಗಳು ಹೆಚ್ಚಾದಂತೆಲ್ಲ ಶಾಸನಾಧ್ಯಯನದ ಕಥೆ ಒಲವು ಹೆಚ್ಚಾಯಿತು. ಹಳೆಯ ಎಪಿಗ್ರಾಫಿಯ ಕರ್ನಾಟಿಕಗಳಲ್ಲಿನ ಶಾಸನಗಳು ಸಂಶೋಧನೆಗೆ ಮೂಲ ಸಾಮಗ್ರಿಗಳಾದುವಾದರೂ ಆ ಸಂಪುಟಗಳೇ ಸಿಗುತ್ತಿರಲಿಲ್ಲ. ಆ ವೇಳೆಗೆ ಒಂಭತ್ತು ದಶಕಗಳು ಕಳೆದು ಲಭ್ಯವಿದ್ದ ಸಂಪುಟಗಳೂ ಶಿಥಿಲ ಪರಿಸ್ಥಿತಿಯಲ್ಲಿದ್ದುವು. ಕುಲಪತಿಗಳಾಗಿದ್ದ ದೇ. ಜವರೇಗೌಡರು ಇದರಲ್ಲಿ ಆಸಕ್ತಿವಹಿಸಿ, ಸರ್ಕಾರದ ಆರ್ಥಿಕ ನೆರವನ್ನು ಪಡೆಯುವಲ್ಲಿ ಯಶಸ್ವಿಯಾಗಿ ಯೋಜನೆ ೧೯೭೨ರಲ್ಲಿ ಕಾರ್ಯರೂಪಕ್ಕೆ ಬಂದಿತು. ೧೯೧೪ರಲ್ಲಿ ಕೊಡಗಿನ ಶಾಸನಗಳನ್ನು ಪರಿಷ್ಕರಿಸಿ ಹೊಸದಾಗಿ ಲಭಿಸಿದ ಶಾಸನಗಳನ್ನು ಸೇರಿಸಿ ಪರಿಷ್ಕೃತ ಮೊದಲ ಸಂಪುಟವನ್ನು ಪ್ರಕಟಿಸಲಾಗಿತ್ತು. ಅದರಲ್ಲಿ ೭೫ ಶಾಸನಗಳಿದ್ದುವು. ಕನ್ನಡ ಅಧ್ಯಯನ ಸಂಸ್ಥೆ ೧೯೭೨ರ ಆಗಸ್ಟ್‌ನಲ್ಲಿಯೇ ೧೦೬ ಶಾಸನಗಳುಳ್ಳ ಎರಡನೆಯ ಬಾರಿ ಪರಿಷ್ಕರಿಸಲ್ಪಟ್ಟ ಮೊದಲ ಸಂಪುಟವನ್ನು ಪ್ರಕಟಿಸಿತು. ೧೯೭೭ರ ವೇಳೆಗೆ ೭ ಸಂಪುಟಗಳು ಹೊರಬಂದು ನಂತರ ಕಾರಣಾಂತರಗಳಿಂದ ಕೆಲಸ ಕುಂಠಿತವಾಯಿತು. ಹೇಗೂ ೧೯೯೦ರಲ್ಲಿ ೯ನೆಯ ಪರಿಷ್ಕೃತ ಸಂಪುಟ ಹೊರಬಂದಿದೆ. ಬಾ.ರಾ. ಗೋಪಾಲರ ಸಂಪಾದಕತ್ವದಲ್ಲಿ ಪರಿಷ್ಕೃತಗೊಂಡು ಪ್ರಕಟವಾದ ಸಂಪುಟಗಳಲ್ಲಿ ರೈಸರು ಬರೆದಿದ್ದ ಪೀಠಿಕೆಗಳಿಗೆ ಬದಲಾಗಿ ಹೊಸ ಪೀಠಿಕೆಗಳನ್ನು ಬರೆಯಲಾಗಿದೆ. ಪ್ರತಿಯೊಂದು ಶಾಸನಕ್ಕೂ ಅದರ ಸಾರಾಂಶವನ್ನೊಳಗೊಂಡ ಪರಿಚಯದ ಟಿಪ್ಪಣಿ ಅಂಗ್ಲಭಾಷೆಯಲ್ಲಿದೆ. ಕನ್ನಡದ್ದಲ್ಲದ, ಅನ್ಯ ಭಾಷೆಗಳ ಶಾಸನಗಳಿಗೆ ಮಾತ್ರ ಲಿಪ್ಯಂತರವನ್ನು ಕೊಡಲಾಗಿದೆ. ೨ನೆಯ ಸಂಪುಟದಿಂದ ಆವೃತ್ತಿಗಳ ಸಮೀಕೃತ ಪಟ್ಟಿಯನ್ನು ಸೇರಿಸಲಾಗಿದ್ದು ಭಾಷಾಂತರಗಳು ಸಂಪೂರ್ಣವಾಗಿದೆ. ಪ್ರತಿಯೊಂದು

ಸಂಪುಟದಲ್ಲಿಯೂ ಸುದೀರ್ಘವಾದ ಪದಸೂಚಿಯನ್ನು ಸೇರಿಸಲಾಗಿದೆ. ಹಿಂದಿನ ೫ ಸಂಪುಟಗಳು ಈಗ ೧೦ ಸಂಪುಟಗಳಿಗೆ ವಿಸ್ತರಿಸಿವೆ. ಈಗ ಕೊಡಗು, ಮೈಸೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಶಾಸನಗಳು ಪ್ರಕಟವಾಗಿವೆ. ಇನ್ನುಳಿದ ೫ ಜಿಲ್ಲೆಗಳ ಶಾಸನಗಳು ಪ್ರಕಟವಾಗಬೇಕಿವೆ.

ಕನ್ನಡಿಗರ ಕೋರಿಕೆಯನ್ನು ಮನ್ನಿಸಿ ೧೯೩೬ರಲ್ಲಿ ಅಂದಿನ ಮುಂಬಯಿ ಪ್ರಾಂತದ ಸರ್ಕಾರ ಕನ್ನಡ ಭಾಷೆ, ಸಾಹಿತ್ಯ, ಇತಿಹಾಸಗಳಲ್ಲಿ ಸಂಶೋಧನೆ ಕೈಗೊಳ್ಳಲು ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ (Kannada Research Institute)ಯನ್ನು ಆರಂಭಿಸಿತು. ಅಂದಿನಿಂದ ಆ ಸಂಸ್ಥೆ ಉತ್ತರ ಕರ್ನಾಟಕದ ಶಾಸನಗಳನ್ನು ಸಂಗ್ರಹಿಸಿ, ಪ್ರಕಟಿಸುವ ಹೊಣೆಯನ್ನು ಹೊತ್ತಿತ್ತು. ಇದರ ಮೊದಲ ನಿರ್ದೇಶಕರಾಗಿ ಆ ಮೊದಲು ಉದಕಮಂಡಲದಲ್ಲಿನ ಕೇಂದ್ರ ಶಾಸನ ಇಲಾಖೆಯಲ್ಲಿದ್ದ ಆರ್. ಎಸ್. ಪಂಚಮುಖಿಯವರು ನೇಮಕಗೊಂಡರು. ೧೯೩೯-೪೦ನೆಯ ವಾರ್ಷಿಕ ವರದಿಯಲ್ಲಿ ೧೦೨ ಶಾಸನಗಳ ಸಾರಾಂಶಗಳನ್ನು ಪ್ರಕಟಿಸಲಾಯಿತು. ೧೯೪೧ ರಿಂದ ೪೩ ರ ವರೆಗಿನ ವರದಿ ೧೯೬೧ರಲ್ಲಿ ಪ್ರಕಟವಾಯಿತು. ಇದರಲ್ಲಿ ೨೫೫ ಶಾಸನಗಳ ಸಾರಾಂಶಗಳು ಪ್ರಕಟಗೊಂಡುವು. ಇವೆಲ್ಲವು ಆರ್. ಎಸ್. ಪಂಚಮುಖಿಯವರು ಪ್ರಕಟಿಸಿದವುಗಳು. ನಂತರ ನಿರ್ದೇಶಕರಾಗಿ ಹಾಗೂ ಪ್ರಾಚೀನ ಭಾರತೀಯ ಇತಿಹಾಸದ ಪ್ರಾಧ್ಯಾಪಕರಾಗಿ ಬಿ. ಎ. ಸಾಲತೊರೆಗಳು ನೇಮಕಗೊಂಡರು. ಆ ವೇಳೆಗಾಗಲೇ ಆ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯದ ಒಂದು ಅಂಗವಾಗಿ ವಿಶ್ವವಿದ್ಯಾಲಯದಲ್ಲಿ ಸೇರ್ಪಡೆಯಾಗಿತ್ತು. ನಂತರ ಪಿ. ಬಿ. ದೇಸಾಯಿಯವರು ನಿರ್ದೇಶಕರೂ ಪ್ರಾಧ್ಯಾಪಕರೂ ಆದರು. ಇವರು ನಾಲ್ಕಾರು ವರ್ಷಗಳ ಕಾಲ ಸ್ಥಗಿತಗೊಂಡಿದ್ದ ಕೆಲಸಕ್ಕೆ ಮತ್ತೆ ಚಾಲನೆ ಕೊಟ್ಟರು. ೧೯೪೩-೪೪ರಿಂದ

೪೯-೫೦ ರವರೆಗೆ ಶೇಖರಿಸಿದ್ದ ೨೨೬ ಶಾಸನಗಳನ್ನು ಬಾ. ರಾ. ಗೋಪಾಲ ಮತ್ತು ಎಸ್. ಎಚ್. ರಿತ್ತಿಯವರು "Summaries of Inscriptions (1943-44 to 1949-50)" ಎಂಬ ಹೊತ್ತಿಗೆಯಲ್ಲಿ ಪಿ.ಬಿ. ದೇಸಾಯರ ನೇತೃತ್ವದಲ್ಲಿ ಪ್ರಕಟಿಸಿದರು. ಈ ಶಾಸನಗಳ ಪಾಠಗಳನ್ನು Karnataka Inscriptions ಎಂಬ ಮಾಲಿಕೆಯಲ್ಲಿ, ಆರ್. ಎಸ್. ಪಂಚಮುಖಿಯವರು ಮೂರು ಸಂಪುಟಗಳಲ್ಲೂ, ಎ. ಎಂ. ಅಣ್ಣಿಗೇರಿಯವರು ೪ನೆಯ ಸಂಪುಟದಲ್ಲೂ, ಬಾ.ರಾ. ಗೋಪಾಲರು ೫-೬ನೆಯ ಸಂಪುಟಗಳಲ್ಲೂ ಸಂಶೊಧನ ಸಂಸ್ಥೆಯ ಮೂಲಕ ಪ್ರಕಟಿಸಿದ್ದಾರೆ. ಕದಂಬ ಸಂಸ್ಕೃತಿಯ ಅಧ್ಯಯನ ಸಂಸ್ಥೆಯನ್ನು ಎಲ್. ಟಿ. ಶರ್ಮರು ಆರಂಭಿಸಿ, ಅದರ ಮೂಲಕ ಬಾ.ರಾ. ಗೋಪಾಲರ 'ಬನವಾಸಿಯ ಕದಂಬರು' ಎಂಬ ಹೊತ್ತಿಗೆಯನ್ನು, Corpus of Kadamba Inscriptions ಎಂಬ ಇನ್ನೊಂದು ಸಂಪುಟವನ್ನು ಪ್ರಕಟಿಸಿದ್ದಾರೆ. ಇಂಗ್ಲಿಷ್ ಭಾಷೆಯ ಸಂಪುಟದಲ್ಲಿ ಆದಿಕದಂಬರ ಎಲ್ಲಾ ಶಾಸನಗಳನ್ನೂ ದೀರ್ಘವಾದ ಪೀಠಿಕೆಯೊಡನೆ ಪ್ರಕಟಿಸಲಾಗಿದೆ. Karnataka Inscriptions ಸಂಪುಟಗಳಲ್ಲಿ ಮಹಾರಾಷ್ಟ್ರದಲ್ಲಿ ದೊರೆತ ಕರ್ನಾಟಕದ ಕೆಲವು ಶಾಸನಗಳನ್ನೂ ಸೇರಿಸಲಾಗಿದೆ. ಕರ್ನಾಟಕದ ಹೊರಗೆ ಮಹಾರಾಷ್ಟ್ರದ ನಾಂದೇಡ ಹಾಗೂ ಷೋಲಾಪುರ ಜಿಲ್ಲೆಗಳಲ್ಲಿನ ಕನ್ನಡದ ಹಾಗೂ ಕನ್ನಡದ ಅರಸು ಮನೆತನಗಳಿಗೆ ಸೇರಿದ ಸಂಸ್ಕೃತ ಶಾಸನಗಳನ್ನು ಎಸ್. ಎಚ್. ರಿತ್ತಿಯವರು ಎರಡು ಸಂಪುಟಗಳಲ್ಲಿ Inscriptions from Nanded District ಹಾಗೂ Inscriptions from Sholapur District - ಪ್ರಕಟಿಸಿದ್ದಾರೆ. ಆದರೆ ಈ ಸಂಸ್ಥೆಗಳು ಸಂಪೂರ್ಣವಾಗಿ ಶಾಸನ ಸಂಗ್ರಹಗಳ ಕಾರ್ಯವನ್ನು ಮಾಡಿಲ್ಲ. ಕೇಂದ್ರ ಸರ್ಕಾರದ ಇಲಾಖೆ ಸಂಗ್ರಹಿಸಿದ ಮುಂಬಯಿ-ಕರ್ನಾಟಕ ಶಾಸನಗಳು - Bombay Karnatak Inscriptions ದಕ್ಷಿಣ ಭಾರತದ ಶಾಸನ ಸಂಪುಟಗಳ XI, XV, XVIII ಹಾಗೂ XX

ರಲ್ಲಿ ಸೇರ್ಪಡೆಯಾಗಿವೆ. ಒಂಭತ್ತನೆಯ ಸಂಪುಟದಲ್ಲಿ ಬಳ್ಳಾರಿ ಜಿಲ್ಲೆಯ, ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳಿವೆ. ಅಂದು ಈ ಎರಡು ಜಿಲ್ಲೆಗಳೂ ಮದರಾಸ್ ಪ್ರಾಂತದ ಭಾಗಗಳಾಗಿದ್ದುದೊಂದು ಕಾರಣ.

ಆಂಧ್ರಪ್ರದೇಶದಲ್ಲಿರುವ ಕನ್ನಡ ಶಾಸನಗಳನ್ನು South indian Inscriptions ಸಂಪುಟಗಳಲ್ಲಿ ಕೆಲವಲ್ಲಿ ಪ್ರಕಟಿಸಲಾಗಿದೆ. ಆದರೆ ಹಿಂದಿನ ಹೈದರಾಬಾದಿನ ನಿಜಾಮರ ಸಂಸ್ಥಾನದ ಶಾಸನಗಳನ್ನು Hyderabad Archaeological Series ನಲ್ಲಿ ಹೈದರಾಬಾದ್ ಸಂಸ್ಥಾನದ ಕನ್ನಡ ಜಿಲ್ಲೆಗಳ ಶಾಸನಗಳ - A Corpus of Inscriptions in the Kannada Districts of Andhra Pradesh - ಸಂಪುಟವನ್ನು ಪಿ.ಬಿ. ದೇಸಾಯರು ಸಂಪಾದಿಸಿಕೊಟ್ಟಿದ್ದಾರೆ. ಅಂಧ್ರಪ್ರದೇಶ ರಾಜ್ಯ ಅಸ್ತಿತ್ವಕ್ಕೆ ಬಂದ ಬಳಿಕ ಈ ಮಾಲಿಕೆ Andhra Pradesh Archeological Series ಎಂದು ಕರೆಯಲ್ಪಟ್ಟಿತು. ಈ ಮಾಲಿಕೆಯಲ್ಲಿ Select Stone Inscriptions of Andhra Pradesh ಎಂಬ ಸಂಪುಟವನ್ನು ಪಿ.ಬಿ. ದೇಸಾಯರೇ ಸಂಪಾದಿಸಿ, ಆ ಇಲಾಖೆ ಪ್ರಕಟಿಸಿದೆ. ಇದೇ ಸರಣಿಯಲ್ಲಿ ಬಿ. ಎಸ್. ಗಾಯಿಯವರ Select Epigraphs of Andhra Pradesh ಎಂಬ ಸಂಪುಟವೂ ಹೊರಬಂದಿದೆ. ಚಿತ್ತೂರು ಜಿಲ್ಲೆಯ ತಿರುಮಲೆ-ತಿರುಪತಿ, ಭಾರತದಲ್ಲಿಯೇ ಸುಪ್ರಸಿದ್ಧ ಯಾತ್ರಾಸ್ಥಳ. ಬೆಟ್ಟದ-ತಿರುಮಲೆಯ-ಮೇಲಿನ ಶ್ರೀ ವೆಂಕಟೇಶ್ವರನ ಅಲಯದ ಗೋಡೆಗಳ ತುಂಬಾ, ಹಾಗೂ ಹೊರಗೆ ಕೆಲವು ಸ್ಥಳಗಳಲ್ಲಿ, ಮತ್ತು ಬೆಟ್ಟದ ಕೆಳಗೆ ತಿರುಪತಿಯ ಗೋವಿಂದರಾಜನ ಆಲಯ, ತಿರುಚಾನೂರು ಆಲಯಗಳಲ್ಲಿರುವ, ಹಾಗೂ ಸುತ್ತಲಿನ ಸ್ಥಳಗಳಲ್ಲಿರುವ ೧೧೫೦ ಶಾಸನಗಳನ್ನು ತಿರುಮಲೆ-ತಿರುಪತಿ ದೇವಸ್ಥಾನದವರೇ ೬ ಸಂಪುಟಗಳಲ್ಲಿ

ಪ್ರಕಟಿಸಿದ್ದಾರೆ. ಅಲ್ಲದೆ ಒಂದು ಸಂಪುಟದಲ್ಲಿ ಆ ಶಾಸನಗಳಿಗೆ ಸಂಬಂಧಿಸಿದಂತೆ, ದೇವಸ್ಥಾನದ ಇತಿಹಾಸಕ್ಕೆ ಸಂಬಂಧಿಸಿದಂತೆ ವಿಸ್ತಾರವಾದ ಮುನ್ನುಡಿಯನ್ನು ಕೆ. ಎ. ನೀಲಕಂಠಶಾಸ್ತ್ರಿಗಳು ಬರೆದಿದ್ದಾರೆ. ಈ ಸಂಪುಟಗಳಲ್ಲಿಯೂ ನೂರಾರು ಕನ್ನಡ ಶಾಸನಗಳಿವೆ.

ಇಷ್ಟೆಲ್ಲಾ ಶಾಸನಗಳಿದ್ದರೂ ನೇರವಾಗಿ ಇತಿಹಾಸಕ್ಕೆ, ಐತಿಹಾಸಿಕ ಘಟನೆಗಳಿಗೆ ಸಂಬಂಧಪಟ್ಟಂತಹ ಶಾಸನಗಳು ಬಹಳ ಕಡಿಮೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಕೆಲವು ಶಾಸನಗಳನ್ನು ಮೇಲೆ ಉಲ್ಲೇಖಿಸಲಾಗಿದೆ. ಅಶೋಕನ ಶಾಸನಗಳದ್ದೇ ಒಂದು ಪ್ರತ್ಯೇಕತೆ ಇದೆ. ಒಂದು ವಿಧದಲ್ಲಿ ಆತನು ಹಾಕಿಸಿದ ಶಾಸನಗಳು ಆತ್ಮ ಕಥನಗಳಂತಿವೆ. ಕಳಿಂಗದ ವಿರುದ್ಧ ಹೂಡಿದ್ದ ಆತನ ಮೊದಲ- ಹಾಗೂ ಕೊನೆಯ- ಕದನ ಘೋರಸ್ವರೂಪ ತಾಳೀತೆಂದು ಆತನೇ ಸ್ವತಃ ಭಾವಿಸಿರಲಿಲ್ಲ. ಕಳಿಂಗದ ಅರಸು - ಪ್ರಜೆಗಳು ಆತನನ್ನು ದಿಟ್ಟತನದಿಂದ ಎದುರಿಸಿದರು. ಪರಿಣಾಮವಾಗಿ ಅವರು ಸೋಲನ್ನೇ ಅಲ್ಲದೆ, ಅಪಾರ ಸಂಖ್ಯೆಯಲ್ಲಿ ಸಾವು- ನೋವುಗಳನ್ನು ಅನುಭವಿಸಬೇಕಾಯಿತು. ಆತನದೇ ಹೇಳಿಕೆಯ ಪ್ರಕಾರ ಒಂದು ಲಕ್ಷ ಜನ ಸಾವನ್ನಪ್ಪಿದರು. ಇವರು ಕೊಲ್ಲಲ್ಪಟ್ಟವರು. ನೋವುಗಳಿಗೊಳಗಾಗಿ ಪರೋಕ್ಷವಾಗಿ ಸತ್ತವರು ೧೨ ಲಕ್ಷ ಜನ. ಈ ಸಂಖ್ಯೆಯಲ್ಲಿ ಉತ್ಪ್ರೇಕ್ಷೆ ಇರಬಹುದಾದರೂ ಯುದ್ಧ ತೀವ್ರ ಭಯಂಕರಸ್ವರೂಪದ್ದಾಗಿತ್ತು ಎಂಬುದು ನಿಜ. ಇದನ್ನು ಕಂಡ ಅಶೋಕ ಪಶ್ಚಾತ್ತಾಪದಿಂದ ಬೆಂದ. ಹಿಂಸೆಯನ್ನು ತ್ಯಜಿಸಿ ಅಹಿಂಸಾ ಮಾರ್ಗವನ್ನಪ್ಪಿಕೊಂಡು ತನ್ನ ಸಾಮ್ರಾಜ್ಯದ ಮೂಲೆ ಮೂಲೆಗಳಲ್ಲಿ, ಸಾಮ್ರಾಜ್ಯದ ಗಡಿ ಪ್ರದೇಶಗಳಲ್ಲಿ ಹಾಗೂ ಕೆಲವನ್ನು ಹೊರಗೆ ಸಹ ಶಾಸನಗಳನ್ನು ಕೊರೆಯಿಸಿಟ್ಟ. ತನ್ನ ಅಳಲನ್ನು ತೋಡಿಕೊಂಡ. ತನ್ನನ್ನೇ ತಾನು ದೂರಿಕೊಂಡ. ಪ್ರಜೆಗಳಿಗೆ ಯುದ್ಧದಿಂದ ಉಂಟಾಗುವ

ಹಾನಿಯನ್ನು ತೋರಿಸಿ ಅವರು ಶಾಂತಿ ಮಾರ್ಗವನ್ನನುಸರಿಸಲು ಬೋಧಿಸಿದ. ಅದು ಸುಖದ ಮಾರ್ಗ, ಸ್ವರ್ಗದ ಮಾರ್ಗ ಎಂದ ಪ್ರಜೆಗಳ ಹಿತಕ್ಕಾಗಿ ತದನಂತರ ತಾನು ಕೈಗೊಂಡ ಕಾರ್ಯಗಳನ್ನು ವಿವರಿಸಿದ. ಪ್ರಜಾಹಿತವೇ ಅರಸನ ಹಿತ, ರಾಜ್ಯದ ಹಿತ ಎಂದು ಸಾರಿದ. ನೆರೆಹೊರೆಯ ಅರಸರೂ ಇಂತಹ ಸನ್ಮಾರ್ಗ ಅನುಸರಿಸಬೇಕೆಂದು ಅನುನಯದಿಂದ ಬೇಡಿಕೊಂಡ. ಇದು ತನ್ನ ದೌರ್ಬಲ್ಯದ ಕುರುಹಲ್ಲ; ದುಷ್ಟರನ್ನು ಎದುರಿಸಬಲ್ಲೆ, ದಮನಿಸಬಲ್ಲೆ ಎಂಬ ಎಚ್ಚರಿಕೆಯನ್ನೂ ನೀಡಿದ.

ಶಾಸನ ಸಾಮಗ್ರಿಗಳು

ಶಾಸನಗಳನ್ನು ಸಾಮಾನ್ಯವಾಗಿ ಕಲ್ಲಿನ ಮೇಲೆ ಕೊರೆದಿರಲಾಗುತ್ತದೆ. ಶಾಸನ ಸಾಮಗ್ರಿಗಳನ್ನು ಸಾಮಾನ್ಯವಾಗಿ ನಶ್ವರ - ಎಂದರೆ ಬೇಗನೆ ಹಾಳಾಗುವ, ನಶಿಸುವ - ಸಾಮಗ್ರಿಗಳೆಂದೂ, ಶಾಶ್ವತ - ಬಹುಕಾಲ ಬಾಳುವ ಸಾಮಗ್ರಿಗಳೆಂದೂ ವಿಂಗಡಿಸಬಹುದು. ತಾಳೆಯ ಪತ್ರಗಳ (ತಾಡವೋಲೆಗಳ) ಮೇಲೆ ಸಾಮಾನ್ಯವಾಗಿ ಸಾಹಿತ್ಯ ಕೃತಿಗಳನ್ನು ಬರೆದಿಡಲಾಗುತ್ತಿತ್ತು. ಇವು ಅಶಾಶ್ವತವಾದ ಕಾರಣ ಆಗಿಂದಾಗ್ಗೆ ಇವುಗಳನ್ನು ಪುನಃ ಹೊಸದಾಗಿ ಪ್ರತಿಮಾಡಿಡಲಾಗುತ್ತಿತ್ತು. ತಾಡವೋಲೆಗಳನ್ನು ಭಾರತದಲ್ಲಿ ಲೇಖನ ಸಾಮಗ್ರಿಗಳಾಗಿ ಬಳಸುತ್ತಿದ್ದರೆಂಬುದನ್ನು ೭ನೆಯ ಶತಮಾನದಲ್ಲಿ ಹ್ಯೂಯೆನ್‌ತ್ಸಾಂಗ್ ದಾಖಲಿಸಿದ್ದಾನೆ. ಆದರೆ ಇವುಗಳಲ್ಲಿ ಬರೆದಿಟ್ಟ, ಅತಿ ಪ್ರಾಚೀನವೆನಿಸಿದ, ಕೃತಿಗಳು ಭಾರತದ ಹೊರಗೇ ದೊರೆತಿವೆ. ತುರ್ಫಾನ್‌ನಲ್ಲಿ ಅಶ್ವಘೋಷನ 'ಸಾರೀಪುತ್ರಕರಣ' ಎಂಬ ಸಂಸ್ಕೃತನಾಟಕದ ಭಾಗಗಳು ಲಭಿಸಿವೆ. ೭ನೆಯ ಶತಮಾನದಲ್ಲಿ ಪ್ರತಿಮಾಡಲ್ಪಟ್ಟ 'ಸ್ಕಂದಪುರಾಣ'

ಬಹುಶಃ ೮೫೯ರ ಸುಮಾರಿಗೆ ಪ್ರತಿಮಾಡಲಾದ 'ಪರಮೇಶ್ವರ ತಂತ್ರ' ಇತ್ಯಾದಿಗಳು ನೇಪಾಳದಲ್ಲಿ ಸಿಕ್ಕಿವೆ. ನಮ್ಮ ದೇಶದಲ್ಲಿ ಗುಜರಾತ್, ರಾಜಾಸ್ಥಾನಗಳಲ್ಲಿ ೧೧ನೆಯ ಶತಮಾನದ ತಾಡವೋಲೆ ಗ್ರಂಥಗಳು ದೊರೆತಿವೆ. ದಕ್ಷಿಣ ಭಾರತದಲ್ಲಿ ೧೪-೧೫ಯ ಶತಮಾನಗಳಿಗೆ ಹಿಂದಿನ ಇಂತಹ ಗ್ರಂಥಗಳು ಸಿಕ್ಕಿಲ್ಲ. ಭೂರ್ಜ ಪತ್ರಗಳೂ ದಕ್ಷಿಣ ಭಾರತದಲ್ಲಿ ಕಂಡು ಬಂದಿಲ್ಲ. ಇವು ಮಧ್ಯ ಹಾಗೂ ಉತ್ತರ ಭಾರತಗಳಿಗೆ ಸೀಮಿತವಾಗಿವೆ.

ಹತ್ತಿ ಬಟ್ಟೆಯ ಮೇಲೆ ಅಕ್ಕಿ ಅಥವಾ ಗೋಧಿ ಹಿಟ್ಟನ್ನು ನಯವಾಗಿ ಕಲಿಸಿ ತಕ್ಕ ಆಕಾರಕ್ಕೆ ಕತ್ತರಿಸಿಟ್ಟುಕೊಂಡ ಬಟ್ಟೆಗಳ ಮೇಲೆ ಅವುಗಳನ್ನು ಲೇಪಿಸಿ, ಕವಡೆ ಅಥವಾ ಶಂಖದಿಂದ ಅದು ಎಲ್ಲ ಕಡೆಗೂ ನಯವಾಗಿ ಹಬ್ಬುವಂತೆ ಮಾಡಿ ಅದರ ಮೇಲೆ ಬರೆಯುತ್ತಿದ್ದ ಪದ್ಧತಿಯೂ ಇದ್ದಿತು. ಇದನ್ನು ಪಟ ಅಥವಾ ಕಾರ್ಪಾಸಿಕ ಪಟ ಎಂದು ಕರೆಯಲಾಗಿದೆ. ಕರ್ನಾಟಕದಲ್ಲಿನ ವರ್ತಕರು, ವಿಶೇಷವಾಗಿ ಜೈನ ಅಥವಾ ಗುಜರಾತಿನವರೂ ಈ ಪದ್ಧತಿಯ ಮೂಲಕ ತಮ್ಮ ಲೆಕ್ಕ ಪತ್ರಗಳನ್ನು ಬರೆದಿಡುತ್ತಿದ್ದರು. ಆದರೆ ಇವರು ಆ ಬಟ್ಟೆ ಮೇಲೆ ಹುಣಿಸೇ ಬೀಜವನ್ನು ಪುಡಿ ಮಾಡಿಕೊಂಡು ಅದಕ್ಕೆ ಕಲ್ಲಿದ್ದಲು ಪುಡಿಯನ್ನು ಸೇರಿಸಿ ಕಪ್ಪಾಗಿಸಿ ಅದನ್ನು ಬಟ್ಟೆಯ ಮೇಲೆ ಲೇಪಿಸಿ ಅದರ ಮೇಲೆ ಬರೆಯುತ್ತಿದ್ದರು. ಇದಕ್ಕೆ ಕಡಿತಂ (ಕಡತ) ಎಂಬ ಹೆಸರಿದೆ. ಶೃಂಗೇರಿಯ ಮಠದಲ್ಲಿ ಇಂತಹ ಕಡತಗಳು ಅನೇಕವು ಇವೆ. ೮ನೆಯ ಶತಮಾನದ ಶಿಲಾಶಾಸನ ಅದೊಂದು 'ಕ್ರಯಚಿರಿಕಾ' - ಬಟ್ಟೆಯ ಮೇಲೆ ಬರೆಯಲಾದ ಕ್ರಯ ಪತ್ರ- ಎಂದಿದೆ. ಮೊದಲು ಬಟ್ಟೆಯ ಮೇಲೆ ಬರೆಯಲಾಗಿದ್ದ ಕ್ರಯ ಪತ್ರವನ್ನು ಅನಂತರ ಶಿಲೆಯ ಮೇಲೆ ಕೆತ್ತಲಾಯಿತೆಂದು ಊಹಿಸಲಾಗಿದೆ.

ಚರ್ಮದ ಮೇಲೂ ಬರಹಗಳಿದ್ದುವೆಂಬ ವಿಷಯ ಸುಬಂಧುವಿನ ವಾಸವದತ್ತಳು ಅಜಿನ (ಜಿಂಕೆ ಅಥವಾ ಹುಲಿಯ ಚರ್ಮ) ವನ್ನು ಬರಹ ಸಾಮಗ್ರಿಯಾಗಿ ಬಳಸುತ್ತಿದ್ದಳೆಂದು ಹೇಳಿರುವುದರಿಂದ ತಿಳಿದು ಬರುತ್ತದೆ. ಬೌದ್ಧ ಸಾಹಿತ್ಯದಲ್ಲಿ ಇದರ ಪ್ರಸ್ತಾಪ ಬಂದಿದೆ. ಕಾಗದದ ಉಪಯೋಗ ಚೀನೀಯರಿಗೆ ಕ್ರಿ.ಶ. ಮೊದಲನೆಯ ಶತಮಾನದ ಅಂತ್ಯದ ವೇಳೆಗೆ ತಿಳಿದಿದ್ದಿತು. ಸುಮಾರು ಕ್ರಿ.ಶ. ೧೦೫ರಲ್ಲಿ ಅವರು ಕಾಗದವನ್ನು ಮೊದಲ ಬಾರಿಗೆ ಬಳಸಿದರೆಂದು ಹೇಳಲಾಗಿದೆ. ಆದರೆ ನಮ್ಮ ದೇಶದಲ್ಲಿ ಮೊದಲ ಬಾರಿಗೆ ಕಾಗದದ ಬಳಕೆ ಆದುದು ಕ್ರಿ.ಶ. ೧೨೨೩-೨೪ರಲ್ಲಿ. ಆ ವರ್ಷದ ಹಸ್ತಪ್ರತಿಯಲ್ಲಿ, ಗುಜರಾತಿನಲ್ಲಿ ಇದನ್ನು ಮೊದಲು ಬಳಸಲಾಯಿತು ಎಂದು ಹೇಳಬಹುದಾಗಿದೆ. ಕಪ್ಪುಹಲಗೆಯನ್ನು ಬರವಣಿಗೆಗೆ ಬಳಸುವುದಕ್ಕೂ ಮೊದಲೇ ಮರದ ಹಲಗೆಗಳ ಪ್ರಯೋಜನ ಪಡೆಯಲಾಯಿತು. ಇಟ್ಟಿಗೆಯ ಪುಡಿಯನ್ನು ನಯವಾಗಿ ಬಳಿದ ಹಲಗೆಯ ಮೇಲೆ ಸೀಮೆಸುಣ್ಣ ಅಥವಾ ಮಣ್ಣಿನ ಪುಡಿಯನ್ನು ಸವರಿ ಅದರ ಮೇಲೆ ಮೊಂಡಾದ ಕಟ್ಟಿಗೆಯ ತುಂಡಿನಿಂದ (ರಾಜಾಸ್ಥಾನ ರಾಜ್ಯದಲ್ಲಿ ಇದನ್ನು ಬರ್ತನಾ ಎನ್ನುತ್ತಾರೆ) ಬರೆಯುತ್ತಿದ್ದರು. ಜಾತಕ ಕಥೆಗಳಲ್ಲಿ ಉಲ್ಲೇಖಿಸಲ್ಪಟ್ಟ ಫಲಕ ಇಂತಹ ಹಲಗೆಗಳೇ. ಇವೆಲ್ಲವೂ ನಶ್ವರವಾದ ಸಾಮಗ್ರಿಗಳು.

ಕಲ್ಲು ಹಾಗೂ ಲೋಹಗಳಿಗೆ ಸಂಬಂಧಿಸಿದವುಗಳು ಶಾಶ್ವತವಾಗಿ ನಿಲ್ಲುವಂತಹ ಸಾಮಗ್ರಿಗಳು. ಇವನ್ನು ಚಿರಸ್ಥಿತಿಕ - ಚಿರವಾಗಿ ನಿಲ್ಲುವವುಗಳು - ಗಳೆಂದು ಕರೆಯಲಾಗಿದೆ. ಶಿಲಾಶಾಸನಗಳಲ್ಲಿಯೂ ಹಲವಾರು ನಮೂನೆಗಳಿವೆ. ಸಾಮಾನ್ಯವಾಗಿ ಶಿಲೆಗಳನ್ನು ಫಲಕಗಳಂತೆ ಒಡೆದು ಶಾಸನ ಬರೆಯುವ ಮುಖವನ್ನು ನುಣುಪುಗೊಳಿಸಿ ಬರಹಕ್ಕೆ ಅಣಿಮಾಡಲಾಗುತ್ತದೆ. ಹಲವಾರು ಬಾರಿ ಇಡೀ ಬಂಡೆಗಲ್ಲುಗಳನ್ನೇ

ಶಾಸನಗಳನ್ನು ಕೊರೆಯಲು ಬಳಸಿದುದುಂಟು. ಅತಿ ಪ್ರಾಚೀನವಾದ ಅಶೋಕನ ಶಾಸನಗಳೆಲ್ಲವೂ ಬಹುಮಟ್ಟಿಗೆ ಇಂತಹ ಸ್ವಾಭಾವಿಕ ಬಂಡೆಗಳ ಮೇಲೆ ಬರೆಯಲ್ಪಟ್ಟವುಗಳೇ. ಎಂತಲೇ ಅವುಗಳನ್ನು ಬಂಡೆಗಲ್ಲಿನ ಶಾಸನಗಳೆಂದೇ (rock edicts) ಕರೆಯಲಾಗಿದೆ-ಕರೆಯಲಾಗುತ್ತದೆ. ನಯಗೊಳಿಸಿದ ಕಲ್ಲಿನ ಮೇಲೆ ಕೊರೆದ ಈ ಶಾಸನ ಮಾಲೆಯ ಏಕೈಕ ಉದಾಹರಣೆಯೆಂದರೆ ಸನ್ನತಿಯಲ್ಲಿ ದೊರಕಿರುವ ಅಶೋಕನ ಶಾಸನವೊಂದೇ. ಈತನ ಕೆಲವು ಶಾಸನಗಳನ್ನು ಕಂಬಗಳ ಮೇಲೆ (Pillar Edicts) ಕೊರೆಯಲಾಗಿದೆ.

ಕರ್ನಾಟಕದಲ್ಲಿ ಶಾಸನಗಳನ್ನು ನಯಗೊಳಿಸಿದ ಬಿಡಿಕಲ್ಲುಗಳ ಮೇಲೆಯೇ ಬರೆದಿಡಲಾಗುತ್ತಿತ್ತು. ದೇವಾಲಯದ ಹೊರ ಗೋಡೆಗಳನ್ನು ಅಲಂಕರಣಗಳು ಆಕ್ರಮಿಸಿದ್ದ ಕಾರಣ ಬಿಡಿಗಲ್ಲುಗಳ ಮೇಲೆ ಬರೆದು ದೇವಾಲಯದ ಹೊರ- ಒಳ ಆವರಣಗಳಲ್ಲಿ, ಇಲ್ಲವೇ ಗ್ರಾಮಗಳ ಮುಂಭಾಗದಲ್ಲೋ, ಕೆರೆಗಳ ಏರಿಗಳ ಮೇಲೋ ಸ್ಥಾಪಿಸಲಾಗುತ್ತಿತ್ತು. ಗೋಡೆಗಳ ಮೇಲೆ ಬರೆದ ಶಾಸನಗಳು ವಿರಳ. ಕರ್ನಾಟಕದಲ್ಲಿ ತಮಿಳುನಾಡಿನ ಅರಸುಮನೆತನದವರು ಕಟ್ಟಿಸಿದ ದೇವಾಲಯುಗಳಲ್ಲಿ ಅಥವಾ ಅವರ ಅಧೀನಕ್ಕೊಳಪಟ್ಟ ಪ್ರದೇಶಗಳಲ್ಲಿರುವ ದೇವಾಲಯಗಳಲ್ಲಿ (ಉದಾ : ಕೋಲಾರದಲ್ಲಿ ಕೋಲಾರಮ್ಮನ ದೇವಾಲಯ, ನಂದಿಯಲ್ಲಿ ಭೋಗನಂದೀಶ್ವರಾಲಯ, ತೊಣ್ಣೂರಿನಲ್ಲಿ ಕೃಷ್ಣನ ಆಲಯ ಇತ್ಯಾದಿ) ಇಂತಹ ಭಿತ್ತಿ ಶಾಸನಗಳು ಕಂಡು ಬಂದಿವೆ. ವಿಗ್ರಹಗಳ ಕೆಳಗಿನ ಪಟ್ಟಿ ಅಥವಾ ಅವುಗಳ ಪೀಠದ ಮೇಲೆ ಸಣ್ಣ ಶಾಸನಗಳಿದ್ದು ಅವು ವಿಗ್ರಹವನ್ನು ಕಂಡರಿಸಿದ ರೂವಾರಿಯ ಹೆಸರನ್ನೋ, ವಿಗ್ರಹದಲ್ಲಿನ ದೇವತೆಯ ಹೆಸರನ್ನೋ ವಿಗ್ರಹವನ್ನು ಕಡೆಸಿದಾತನ ಹೆಸರನ್ನೋ ಒಳಗೊಂಡಿರುತ್ತಿತ್ತು. ಒಂದು ಪದದ

(ಹೆಸರಿನ) ಒಂದು ಸಾಲಿನ ಅಥವಾ ಎರಡು ಮೂರು ಸಾಲುಗಳ ಸಣ್ಣ ಶಾಸನಗಳಿವು.

ವೀರಗಲ್ಲು, ನಿಷಿದಿಗಲ್ಲು ಅಥವಾ ಸತೀ (ಮಹಾಸತಿ - ಮಾಸ್ತಿ) ಕಲ್ಲುಗಳು ಇನ್ನೊಂದು ವಿಧಕ್ಕೆ ಸೇರಿದವುಗಳು. ಇವುಗಳೆಲ್ಲವೂ ಸ್ಮಾರಕಶಿಲೆಗಳು. ಕದನಗಳಲ್ಲಿ, ತುಱು ಗಾಳಗಳಲ್ಲಿ, ಗ್ರಾಮದ ದರೋಡೆಯ ಸಂದರ್ಭಗಳಲ್ಲಿ, ಸೀಮಾ ಸಂಬಂಧವಾದ ಜಗಳಗಳಲ್ಲಿ ಮಡಿದವರ ನೆನಪಿಗಾಗಿ ಹಿಂದೆ ವೀರಗಲ್ಲುಗಳನ್ನು ನೆಡಿಸುವುದು ಕರ್ನಾಟಕದಲ್ಲಿ ಕಂಡು ಬಂದ ವಿಶಿಷ್ಟ ಪದ್ದತಿ. ಇಂತಹ ವೀರಗಲ್ಲುಗಳು ಕರ್ನಾಟಕದಲ್ಲಿ ಸಿಗುವಷ್ಟು ಸಂಖ್ಯೆಯಲ್ಲಿ ಬೇರಾವ ರಾಜ್ಯಗಳಲ್ಲಿಯೂ ಕಂಡುಬಂದಿಲ್ಲ. ಸತೀಕಲ್ಲುಗಳು ಗಂಡನ ಜೊತೆಯಲ್ಲಿ ಪ್ರಾಣಾರ್ಪಣೆ ಮಾಡಿದ ಸ್ತ್ರೀಯರ ನೆನಪಿಗಾಗಿ ನಟ್ಟವುಗಳು. ಆದರೆ ಬಹಳಷ್ಟು ಸತೀಕಲ್ಲುಗಳಲ್ಲಿ ಶಾಸನಗಳಿರುವುದಿಲ್ಲ. ವೀರಗಲ್ಲುಗಳಲ್ಲಿ ೩-೪ ಪಟ್ಟಿಗಳಿರುತ್ತವೆ. ಅವುಗಳಲ್ಲಿ ಕಾಳಗದ - ತುಱುಗಾಳಗ, ಗೋಗ್ರಹಣ, ದರೋಡೆ, ಹೆಣ್ಣಿನ ಮಾನಭಂಗ- ಇತ್ಯಾದಿಗಳನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಿ, ಎರಡನೆಯ ಹಾಗೂ ನಂತರದ ಮೇಲಿನ ಪಟ್ಟಿಗಳು ಪ್ರಾಣತ್ಯಾಗ ಮಾಡಿದ ವೀರನ ಹೋರಾಟ, ಈತನ ಶೌರ್ಯವನ್ನು ಮೆಚ್ಚಿದ ದೇವತೆಗಳು ವೀರನನ್ನು ಸ್ವರ್ಗಕ್ಕೆ ಒಯ್ಯುತ್ತಿರುವುದು - ಇತ್ಯಾದಿ ದೃಶ್ಯಾವಳಿಗಳಿದ್ದು, ಈ ದೃಶ್ಯಾವಳಿಗಳ ನಡುವಣ ಪಟ್ಟಿಗಳಲ್ಲಿ ಅದರ ವಿವರಗಳು ಬರೆಯಲ್ಪಟ್ಟಿರುತ್ತವೆ. ಇಂತಹ ವೀರರು ಸಮಾಜದಲ್ಲಿ ಮಾನ್ಯರು, ಬದುಕಿದ್ದರೆ ಲಕ್ಷ್ಮಿ (ನಾರಿ) ಒಲಿಯುತ್ತಾಳೆ; ಸತ್ತರೆ ಸುರಾಂಗನೆಯರು. ಕ್ಷಣದಲ್ಲಿ ನಾಶಹೊಂದುವ ಈ ದೇಹವನ್ನು ರಣರಂಗದಲ್ಲಿ ಮುಡಿಪಿಡಲು ಯೋಚಿಸಬೇಕೇ ಎಂಬ, ಅಥವಾ ಅಂತಹುದೇ ಇತರ ಹೇಳಿಕೆಗಳೂ ಕಾಣಿಸಿಕೊಳ್ಳುತ್ತವೆ.

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇ ರಣೇ

ಎಂಬುದೊಂದು ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಶ್ಲೋಕ- ಒಮ್ಮೊಮ್ಮೆ ಇವು ಕಾವ್ಯರೂಪವನ್ನು ತಾಳುವುದೂ ಉಂಟು. ದೇಕಬ್ಬೆಯ ಶಾಸನ ಎಂದು ಹೆಸರಾಂತ ನಿಷಿದಿಗಲ್ಲಿನ ಶಾಸನವನ್ನು ಇಲ್ಲಿ ಉದಾಹರಿಸಬಹುದು. ಕ್ರಿ. ಶ. ೧೦೭೩ನೆಯ ವರ್ಷದ, ಹೆಗ್ಗಡದೇವನಕೋಟೆಯ ಬೆಳತೂರು ಗ್ರಾಮದಲ್ಲಿ ದೊರೆತ ಈ ಶಾಸನದ ವಿವರ ಸ್ಥೂಲವಾಗಿ ಹೀಗಿದೆ. ನುಗುನಾಡಿನ ಅಧಿಪತಿ ರವಿಗ ಎಂಬಾತ. ಈತನ ಮಗಳು ದೇಕಬ್ಬೆ. ಏಚ ಎಂಬಾತ ನವಿಲೆನಾಡಿನಧಿಪತಿ, ದೇಕಬ್ಬೆಯ ಪತಿ. ಆತನ ದಾಯಾದಿಗಳೊಡನೆ ಕಾದುವ ಪ್ರಸಂಗ ಏರ್ಪಟ್ಟು ಅದರಲ್ಲಿ ಮಡಿದ. ದೇಕಬ್ಬೆ 'ಸತಿ' ಆಗ ಬಯಸಿದಳು. ಆದರೆ ಆಕೆಯ ತಂದೆ-ತಾಯಿಗಳು, ಬಂಧು-ಬಾಂಧವರೂ ಆಕೆಯನ್ನು ಸತಿಯಾಗದಂತೆ ತಡೆದರು. ಆದರೆ ಆಕೆಯದು ದೃಢನಿರ್ಧಾರವಾಗಿತ್ತು. ಆಕೆ ತನ್ನವರಿಗೆ ಹೇಳುತ್ತಾಳೆ:

ತಂದೆಯುಮಬ್ಬೆಯುಮೊಡನೆಯೆ
ಬಂಧುಗಳುಂ ಬಂದು ಮಗಳೆ ಸಾಯದೆ ಮಾಣ್ ನೀ
ನೆಂದೆಲ್ಲಂ ಕಾಲ್ವಿಡಿದಡ
ನಿಂದಿರೆ ದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್
ನುಗುನಾಡಧಿಪತಿ ರವಿಗನ
ಮಗಳಾಗಿಯುಮಂತೆ ನವಿಲೆನಾಡಧಿಪತಿಗಾಂ
ನೆಗಳೆ ಸತಿಯಾಗಿ ಬಾಳ್ವುದು
ಬಗೆದರ್ಪನೆ ಕೊಟ್ಟು ಕೊಂಡ ಮನೆಯಶಮಳಿಯಲ್

ಮಾಸ್ತಿ ಎಂಬ ಪದ ಸಂಸ್ಕೃತದ 'ಮಹಾಸತಿ' ಇಂದ ಬಂದುದು, ಅದರ ಸಂಕ್ಷಿಪ್ತ ರೂಪ. ಸತ್ತ ಗಂಡನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರೀ ಆಕೆ. ಈ ಮಾಸ್ತಿಕಲ್ಲುಗಳಲ್ಲಿ ಸಾಮಾನ್ಯವಾಗಿ ಸ್ತ್ರೀ ಕೈಯನ್ನು ಮೇಲಕ್ಕೆ ಚಾಚಿ, ಎಡಗೈಯಲ್ಲಿ ಕಲಶವೊಂದನ್ನು ಹಿಡಿದಿರುತ್ತಾರೆ. ಬಲಗೈಯ ಹೆಬ್ಬೆರಳು ಮತ್ತು ಇತರ ಬೆರಳುಗಳ ನಡುವೆ ಒಂದು ನಿಂಬೆಹಣ್ಣು. ಕೈಗಳ ತುಂಬಾ ಬಳೆಗಳು. ಹಿಂದೆ ಜ್ವಾಲೆ - ಪ್ರಭಾವಳಿಯಂತೆ ಕಾಣಿಸುತ್ತಿರುತ್ತದೆ. ಒಮ್ಮೊಮ್ಮೆ ಶಾಸನಗಳಲ್ಲಿ ಇದನ್ನು ತೋಳು ಕೈ ಶಾಸನಗಳೆಂದು ಕರೆದಿರಲಾಗುತ್ತದೆ. ಹೊಯ್ಸಳರ ಕಾಲದಲ್ಲಿ ಅರಸರ ರಕ್ಷಣೆಗಾಗಿ ಗರುಡರೆಂಬ ವೀರರು ಆತನ ಸುತ್ತ ಇರುತ್ತಿದ್ದರು. ಅರಸ ಸತ್ತಾಗ ಅವರೂ ಸಹ ಪ್ರಾಣತ್ಯಾಗವಮಾಡುತ್ತಿದ್ದರೆಂಬ ಅಂಶ ಹಲವಾರು ಶಾಸನಗಳಿಂದ ತಿಳಿದು ಬಂದಿದೆ. ನಿಷಿದಿಗಲ್ಲುಗಳು ಜೈನಯತಿಗಳು ಅಥವಾ ಶ್ರಾವಕ-ಶ್ರಾವಕಿಯರು ಪ್ರಾಣತ್ಯಾಗ ಮಾಡಿರುವುದನ್ನು ದಾಖಲಿಸಿರುತ್ತದೆ. ಸಾಮಾನ್ಯವಾಗಿ ಇಂತಹ ಕಲ್ಲುಗಳ ಮೇಲೆ ಧ್ಯಾನಾಸಕ್ತ ಜಿನಮುನಿಯ ವಿಗ್ರಹವನ್ನು ಕಡೆದಿರಲಾಗುತ್ತದೆ.

ಶಿಲಾಶಾಸನದ ನಂತರದ ಸ್ಥಾನ ತಾಮ್ರಶಾಸನಗಳದ್ದು. ವೈಯಕ್ತಿಕ ದಾನಗಳನ್ನೂ ದೇವಾಲಯಗಳಿಗೆ ದತ್ತಿಗಳನ್ನೂ ನೀಡಿದಾಗ ದಾನ ಪಡೆದಾತನ ಹಕ್ಕುಪತ್ರದ ಪಾತ್ರಗಳನ್ನು ಈ ತಾಮ್ರ ಶಾಸನಗಳು ವಹಿಸುತ್ತಿದ್ದುವು. ವಿಶೇಷವಾಗಿ ಭೂದಾನಗಳಿಗೆ ಸಂಬಂಧಿಸಿದ ಈ ಶಾಸನಗಳಲ್ಲಿ ಒಬ್ಬ ವ್ಯಕ್ತಿಗೋ, ಅಗ್ರಹಾರದ ಮಹಾಜನಗಳಿಗೋ ನೀಡಿದ ಉಲ್ಲೇಖಗಳಿದ್ದು ದಾನ ಸ್ವೀಕರಿಸಿದಾತನ (ಪ್ರತಿಗ್ರಹಿ-ಪ್ರತಿಗ್ರಹಿಗಳು) ಕುಲ, ಗೋತ್ರ, ಶಾಖೆ ಅವರ ವಿದ್ವತ್ತು ಇತ್ಯಾದಿಗಳ ಉಲ್ಲೇಖವಿರುತ್ತಿತ್ತು. ಈ ಪ್ರತಿಗ್ರಹಿಗಳು 'ಯಜನಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಷಟ್ಕಮ್ಮ ನಿರತ 'ರೆಂದು ಸಾಮಾನ್ಯವಾಗಿ

ಶಾಸನಗಳು ಇವರನ್ನು ಬಣ್ಣಿಸುತ್ತವೆ. ಒಂದು ಅಗ್ರಹಾರವನ್ನೇ ನೆಲೆಗೊಳಿಸಿದಾಗ ಅಥವಾ ಗ್ರಾಮವನ್ನೇ ಅಗ್ರಹಾರವಾಗಿ ಪರಿವರ್ತಿಸಿದಾಗ, ಅದಕ್ಕೆ ಸೇರಿದ ಭೂಮಿಗಳನ್ನು ವೃತ್ತಿಗಳಾಗಿ ವಿಂಗಡಿಸಿ, ಒಬ್ಬೊಬ್ಬ ಮಹಾಜನರಿಗೂ ಇಂತಿಷ್ಟು ವೃತ್ತಿಗಳು ಎಂಬ ವಿವರಗಳನ್ನು ನೀಡಲಾಗುತ್ತಿತ್ತು. ಆಯಾಕಾರದ ಅಡ್ಡವಾದ ತಾಮ್ರಶಾಸನದ ಒಂದು ಪಕ್ಕದಲ್ಲಿ ಮಧ್ಯೆ ತೂತು ಕೊರೆದು ಅದರಲ್ಲಿ ಒಂದು ಉಂಗುರವನ್ನು ತೂರಿಸಿ, ಉಂಗುರದ ಎರಡು ತುದಿಗಳನ್ನು ಅರಸನ ಮುದ್ರೆಯೊಡನೆ ಸೇರಿಸಿ ಬೆಸಗೆ ಹಾಕಲಾಗುತ್ತಿತ್ತು. ಉತ್ತರ ಭಾರತದಲ್ಲಿ ಸಾಮಾನ್ಯವಾಗಿ ಒಂದೇ ತಾಮ್ರದ ಹಲಗೆಯ ಎರಡೂ ಮುಖಗಳಲ್ಲೂ ಕೊರೆದ ಶಾಸನಗಳು ಹೆಚ್ಚಾಗಿವೆ. ಆದರೆ ದಕ್ಷಿಣ ಭಾರತದಲ್ಲಿ ಒಂದಕ್ಕೂ ಹೆಚ್ಚು ಹಲಗೆಗಳನ್ನು ಬಳಸಲಾಗುತ್ತಿತ್ತು. ಎರಡು ತಾಮ್ರಪಟಗಳಿದ್ದಾಗ ಅವುಗಳ ಒಳಮುಖಗಳಲ್ಲಿ ಮಾತ್ರ ಬರಹವಿದ್ದು ಮೊದಲನೆಯ ಹಲಗೆಯ ಮೇಲು ಮುಖ ಹಾಗೂ ಎರಡನೆಯದರ ಹಿಮ್ಮುಖಗಳು ಬರಹವನ್ನೊಳಗೊಂಡಿರುತ್ತಿರಲಿಲ್ಲ. ಅಕ್ಷರಗಳು ಸವೆದು ಹೋಗದೆ ಇರಲೆಂದು ಹೀಗೆ ಮಾಡಲಾಗುತ್ತಿತ್ತು. ಎರಡಕ್ಕೂ ಹೆಚ್ಚಿನ ತಾಮ್ರ ಪಟಗಳಿದ್ದಾಗ ಒಳಗಿನ ಪಟಗಳಲ್ಲಿ ಮಾತ್ರ ಎರಡೂ ಕಡೆ ಬರಹಗಳನ್ನು ಕಂಡರಿಸಲಾಗಿರುವ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. ಸಾಮಾನ್ಯವಾಗಿ ವಿಜಯನಗರದ ತಾಮ್ರಶಾಸನ ಪಟಗಳು ಆಯಾಕಾರದಲ್ಲಿ ಉದ್ದುದ್ದವಾಗಿದ್ದು ಮೇಲುಗಡೆ ಕಮಾನಿನಂತಹ ಬಾಗಿನ ಮಧ್ಯೆ ತೂತು ಕೊರೆದು ಬಳೆಯನ್ನೂ ಆ ಪಟಗಳಲ್ಲಿ ಪೋಣಿಸಲಾಗುತ್ತಿತ್ತು. ಹೊಯ್ಸಳರ ತಾಮ್ರ ಶಾಸನಗಳು ದೊಡ್ಡವೂ ತೂಕ ಉಳ್ಳವುಗಳು ಆಗಿರುತ್ತವೆ. ವಿಜಯನಗರದ ಶಾಸನಗಳಲ್ಲಿ ಸಾಮಾನ್ಯವಾಗಿ ಮೂರು ಮೂರು ಹಲಗೆಗಳಿರುತ್ತವೆ. ಹೆಚ್ಚು ಹಲಗೆಗಳ

ಶಾಸನಗಳೂ ಉಂಟು. ಕರ್ನಾಟಕದಲ್ಲಿ ಅತಿದೊಡ್ಡ ತಾಮ್ರ ಶಾಸನ ತಿರುಮ ಕೂಡಲು ನರಸೀಪುರದ ೧೬ ಹಲಗೆಗಳ ಮೈಸೂರು ಒಡೆಯರಾಗಿದ್ದ ಇಮ್ಮಡಿ ಕೃಷ್ಣರಾಜರ ಕ್ರಿ.ಶ. ೧೭೪೯ ನೆಯ ವರ್ಷದ, ದಳವಾಯಿದೇವರಾಜನದೆಂದು ಪ್ರಸಿದ್ಧಿ ಹೊಂದಿದ ತಾಮ್ರಶಾಸನ. ಭಾರತದಲ್ಲಿಯೇ ಅತಿದೊಡ್ಡ ತಾಮ್ರ ಶಾಸನ ತಮಿಳುನಾಡಿನ ತಂಜಾವೂರು ಜಿಲ್ಲೆಯ ಪುತ್ತೂರು ಗ್ರಾಮದಲ್ಲಿ ಹೊಲವೊಂದರಲ್ಲಿ ಹುಗಿದಿಟ್ಟಿದ್ದು, ಈಗ ಕರಂದೈ ಗ್ರಾಮದ ತಮಿಳು ಸಂಗಂನಲ್ಲಿ ಕಾಪಿಡಲಾದ ೫೭ ತಾಮ್ರಪಟಗಳ ಶಾಸನ, ಇದಕ್ಕೆ ಎರಡು ಉಂಗುರಗಳನ್ನು ಸೇರಿಸಿದೆ. ಇದು ಚೋಳರ ಅರಸನಾಗಿದ್ದ ರಾಜೇಂದ್ರ ಚೋಳನ ಶಾಸನ. ಅನೇಕ ಸಂದರ್ಭಗಳಲ್ಲಿ ಇವು ಹಕ್ಕು ಪತ್ರಗಳಾದ ಕಾರಣ ಇವುಗಳನ್ನು ಸುರಕ್ಷಿತವಾಗಿ ಕಾಪಾಡಲೆಂದು ಭೂಮಿಯ ಒಳಗೆ ಹುಗಿದಿಡಲಾಗುತ್ತಿತ್ತು. ಆಂಧ್ರಪ್ರದೇಶದ ಅಂಧವರಂ ಗ್ರಾಮದಲ್ಲಿ ನಾಲ್ಕು ಬೇರೆ ಬೇರೆ ತಾಮ್ರಪಟಗಳನ್ನು ಅವುಗಳ ಬಳೆಗಳಲ್ಲಿ ಒಂದು ಕಬ್ಬಿಣದ ಕೋಲನ್ನು ತೂರಿಸಿ, ಅದನ್ನು ದೊಡ್ಡಬಾಯುಳ್ಳ ಮಣ್ಣಿನ ಪಾತ್ರೆಯಲ್ಲಿಟ್ಟು ಭತ್ತದ ಹೊಟ್ಟನ್ನು ತುಂಬಿ ಒಂದು ಮರದ ಬುಡದಲ್ಲಿ ಹೂತಿಡಲಾಗಿತ್ತು.

ಇತರ ಲೋಹಗಳಲ್ಲಿ ಕಂಚನ್ನು ವಿಶೇಷವಾಗಿ ಬಳಸಲಾಗಿದೆ. ಆದರೆ ಇವುಗಳನ್ನು ಮೂರ್ತಿಗಳ ಪೀಠಗಳ ಮೇಲೆ, ಮುಕ್ಕಾಲು ಪೀಠಗಳ ಮೇಲೆ, ಗಂಟೆಗಳು, ಜಾಗಟೆಗಳು, ಒತ್ತಾಳೆಯ ಬಾಗಿಲುವಾಡಗಳು - ಇವುಗಳ ಮೇಲೆ ಕೆತ್ತಿರುವುದೂ ಉಂಟು. ಆದರೆ ಇವು ಒಂದು ಅಥವಾ ಎರಡು ಸಾಲುಗಳ ಕಿರುಶಾಸನಗಳು. ಬೆಳ್ಳಿಯ ಮೇಲೆ ಕೆತ್ತಿರುವ ಶಾಸನಕ್ಕೆ ಕೊಡಗಿನ ಅರಸ ಇಗ್ಗುತಪ್ಪ ದೇವಾಲಯಕ್ಕೆ ನೀಡಿದ ಬೆಳ್ಳಿಯ ಆನೆಯ

ಮೇಲೆ ಕೆತ್ತಲಾಗಿರುವ ಶಾಸನ ಉತ್ತಮವಾದ ಉದಾಹರಣೆ. ಮೇಲುಕೋಟೆಯಲ್ಲಿರುವ ವಜ್ರಕಿರೀಟ (ವೈರಮುಡಿ), ನಂಜನಗೂಡಿನಲ್ಲಿರುವ ಶ್ರೀಕಂಠ ಕಿರೀಟ (ಶ್ರೀಕಂಠ ಮುಡಿ)ಗಳು ರತ್ನ ಖಚಿತವಾದವುಗಳು. ಒಡೆಯರು ಕೂಡುತ್ತಿದ್ದ ಬಂಗಾರದ ಸಿಂಹಾಸನದ ಛತ್ರಿಯ ಮೇಲೂ ಶಾಸನವಿದೆ. ೧೫ನೆಯ ಶತಮಾನದ ನಂತರ ಫಿರಂಗಿಗಳು ಬಳಕೆಗೆ ಬಂದಾಗ ಕಬ್ಬಿಣದ ಫಿರಂಗಿಗಳ ಮೇಲೂ ಶಾಸನ (ವಿಶೇಷವಾಗಿ ಅದನ್ನು ತಯಾರಿಸಿದ ತಾರೀಖಿಗೆ ಸಂಬಂಧಿಸಿದಂತೆ)ಗಳನ್ನು ಕೊರೆಯಿಸುವ ಪದ್ಧತಿ ಬಂದಿತು. ಅತಿ ಪ್ರಾಚೀನ ಕಬ್ಬಿಣದ ಶಾಸನವೆಂದರೆ ದೆಹಲಿಯ ಸಮೀಪದ ಮೆಹರೂಲಿಯಲ್ಲಿರುವ ಚಂದ್ರನೆಂಬ ಅರಸನಿಗೆ (ಬಹುಶಃ ಗುಪ್ತವಂಶದ ಇಮ್ಮಡಿ ಚಂದ್ರಗುಪ್ತ, ಕ್ರಿ. ೩೭೬-೪೬೩) ಸೇರಿದ ಶಾಸನ. ಮರದ ತೊಲೆಗಳು, ಕಂಬಗಳ ಮೇಲೂ ಶಾಸನ ಕೆತ್ತಿರುವ ನಿದರ್ಶನಗಳಿವೆ. ಆದರೆ ಇವು ವಿಶೇಷವಾಗಿ ಉತ್ತರಭಾರತದಲ್ಲಿ ಕಂಡುಬಂದಿವೆ.

ಶಾಸನಗಳಲ್ಲಿ ವೈವಿಧ್ಯಗಳು

ಶಾಸನ ಎಂದರೆ ರಾಜಾಜ್ಞೆ ಎಂದು ಈ ಮೊದಲೇ ಹೇಳಿದ್ದೇವೆ. ತಾಮ್ರ ಶಾಸನಗಳೂ ದಾನ ಶಾಸನಗಳೇ. ಅಶೋಕನ ಶಾಸನಗಳನ್ನು ಕುರಿತು ಮೇಲೆ ಪ್ರಸ್ತಾಪಿಸಲಾಗಿದೆ. ದಾನಗಳನ್ನು ರಾಜನೇ ಕೊಡಬೇಕೆಂದೇನೂ ಇಲ್ಲ, ಆತನ ಅಧಿಕಾರಿಗಳೋ, ಸಾಮಂತರೋ, ಗ್ರಾಮಾಧಿಕಾರಿಗಳೋ ನೀಡಬಹುದು. ಇಂತಹ ಸಂದರ್ಭಗಳಲ್ಲಿ ಅವರು ರಾಜ್ಯದ ಯಾಜಮಾನ್ಯಕ್ಕೆ ಸೇರಿದ ಭೂಮಿಗಳನ್ನು ದಾನ ಮಾಡುವಾಗ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅರಸನ ಅನುಮತಿಯನ್ನು ಪಡೆದಿರುತ್ತಾರೆಂಬುದು ಇಂಗಿತವಾಗುವ ಒಂದು ಅಂಶ. ಒಂದು ರಾಜ್ಯದ

ಭೂಮಿಯ ಒಡೆತನ ತಾತ್ವಿಕವಾಗಿ ರಾಜನಿಗೆ ಸೇರಿರುತ್ತದೆಂಬ ದೃಷ್ಟಿಯಿಂದ ರಾಜನ ಅನುಮತಿ ಅವಶ್ಯವಾಗುತ್ತದೆ. ಒಮ್ಮೆ ದಾನವಾಗಿ ನೀಡಿದ ಭೂಮಿಯ ಒಡೆತನ ದಾನ ಸ್ವೀಕರಿಸಿದಾತನಿಗೆ ಸೇರಿರುತ್ತದೆ. ಆತ ಅದನ್ನು ಪರಭಾರೆಮಾಡಬಹುದು. ಅಂತಹ ಸಂದರ್ಭಗಳಲ್ಲಿ ಅರಸನ ಅನುಮತಿ ಅವಶ್ಯವೆನಿಸುವುದಿಲ್ಲ. ತನ್ನ ಭೂಮಿಯನ್ನು ದೇವಾಲಯಗಳಿಗೋ ವ್ಯಕ್ತಿಗಳಿಗೋ ದಾನಮಾಡಬಹುದು; ವಿಕ್ರಯಿಸಲೂ ಬಹುದು. ಅಂತಹ ಸಂದರ್ಭಗಳಲ್ಲಿ ಆ ಕಾಲದಲ್ಲಿ ನಿಗದಿಗೊಳಿಸಿದ ಉಚಿತವಾದ ಕ್ರಯಕ್ಕೆ ಆತ ಅದನ್ನು ಮಾರಿದನೆಂಬ ಮಾತೂ ಶಾಸನಗಳಲ್ಲಿ ಬರುತ್ತದೆ. ಇವು ಕ್ರಯಶಾಸನಗಳೆನಿಸಿ ಕೊಳ್ಳುತ್ತವೆ.

ನಿಷಿದಿಗಲ್ಲುಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳನ್ನು ಕುರಿತು ಈಗಾಗಲೇ ಪ್ರಸ್ತಾಪಿಸಿದ್ದೇವೆ. ಇಂತಹುದೇ ನಿಟ್ಟಿನಲ್ಲಿ ಸ್ತಂಭಶಾಸನಗಳೂ ಬರುತ್ತವೆ. ಅತಿ ಪ್ರಾಚೀನ ಸ್ತಂಭಶಾಸನಗಳು ಅಶೋಕನ ಕಾಲದವು. ಕರ್ನಾಟಕದಲ್ಲಿ ಲಭಿಸಿಲ್ಲ. ಇವುಗಳನ್ನು ಶಿಲಾಸ್ತಂಭಗಳೆಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಶಿವಮೊಗ್ಗ ಜಿಲ್ಲೆಯ ತಾಳಗುಂದದಲ್ಲಿನ ಪ್ರಣವೇಶ್ವರ ದೇವಾಲಯದ ಮುಂದೆ ನಿಲ್ಲಿಸಿರುವ ಶಾಸನವನ್ನು ಕೀರ್ತಿಸ್ತಂಭ ಎಂದು ಕರೆಯಬಹುದು, ಕದಂಬರ ಅರಸ ಕಾಕುತ್‌ಸ್ಥವರ್ಮನ ಮನೆತನದ ವಿವರಗಳು ಆತನ ಸಾಧನೆಗಳನ್ನೊಳಗೊಂಡ ಈ ಶಾಸನದ ಮೂಲ ಉದ್ದೇಶ ಶಿವಾಲಯದ ಸಮೀಪದಲ್ಲಿ ತಟಾಕವೊಂದನ್ನು ಕಟ್ಟಿಸಿದುದನ್ನು ದಾಖಲಿಸುವುದಾಗಿದೆ. ಆದರೆ ಪ್ರಾಸಂಗಿಕವಾಗಿ ಎಂಬಂತೆ ವಂಶದ ಪ್ರಶಸ್ತಿಯ ಮಾತು ಬಂದರೂ ಅದಕ್ಕೇ ವಿಶೇಷ ಪ್ರಾಧಾನ್ಯತೆ ನೀಡಲಾಗಿದೆ. ಬನವಾಸಿಯ ಸಮೀಪದ ಗುಡ್ನಾಪುರದಲ್ಲಿ ಸುಮಾರು ಎರಡು ದಶಕಗಳ ಹಿಂದೆ ದೊರೆತ ಈ ಕದಂಬ

ರವಿವರ್ಮನ ಶಾಸನವೂ ಸಹ ಇಂತಹುದೇ ಒಂದು ಕೀರ್ತಿಸ್ತಂಭವೆಂದು ವರ್ಣಿಸಬಹುದು. ಬಿಜಾಪುರ ಜಿಲ್ಲೆಯ ಮಹಾಕೂಟದ ಈಶ್ವರಾಲಯದ ಮುಂದೆ ಇದ್ದ, ಈಗ ಬಿಜಾಪುರದ ವಸ್ತು ಸಂಗ್ರಹಾಲಯದಲ್ಲಿರುವ ಸ್ತಂಭದಲ್ಲಿರುವುದು ಒಂದು ಕೀರ್ತಿ ಅಥವಾ ದಿಗ್ವಿಜಯ ಶಾಸನವೇ! ಅದರಲ್ಲಿ ಚಾಲುಕ್ಯ ಅರಸ ಮಂಗಲೇಶನ ದಿಗ್ವಿಜಯದ ದೀರ್ಘವರ್ಣನೆ ಇದೆ. ಮೂಲ ಉದ್ದೇಶ ಆತ ಮಕುಟೇಶ್ವರನಾಥನಿಗೆ ಹತ್ತು ಹಟ್ಟಿಗಳನ್ನು ದಾನ ಮಾಡಲು ತನ್ನ ಮಲತಾಯಿಯಾದ ದುರ್ಲಭದೇವಿಗೆ ಅಧಿಕಾರವನ್ನು ಬಿಟ್ಟುಕೊಟ್ಟ ವಿಷಯವನ್ನು ಪ್ರಸ್ತಾಪಿಸುವುದೇ ಆಗಿದೆ.

ಒಮ್ಮೊಮ್ಮೆ ಸ್ಮಾರಕ ಸ್ತಂಭಗಳನ್ನು ನೆಡಲಾಗುತ್ತಿತ್ತು. ಅಂತಹ ಸ್ತಂಭಗಳನ್ನು ಛಾಯಾಸ್ತಂಭ (ಛಾಯಾ ಥಬ) ಗಳೆಂದು ಕರೆಯಲಾಗಿದೆ. ಇವು ಮಡಿದ ವ್ಯಕ್ತಿಯ ನೆನಪಿಗಾಗಿ ನಿಲ್ಲಿಸಿದವುಗಳಾಗಿದ್ದು ಇದರಲ್ಲಿ ಮಡಿದಾತನ ಚಿತ್ರ ಸಹ ಒಮ್ಮೊಮ್ಮೆ ಇರುತ್ತದೆ. ಹರಕೆಗೆ ಸಂಬಂಧಿಸಿದಂತೆ ಸ್ತಂಭಗಳನ್ನು ನೆಡುವ ಪದ್ಧತಿ, ವಿಶೇಷವಾಗಿ ಬೌದ್ಧಸ್ತೂಪಗಳಲ್ಲಿ - ಬಾರ್ಹುತ್, ಸಾಂಚಿ, ನಾಗಾರ್ಜುನಕೊಂಡ ಇತ್ಯಾದಿ - ಕಂಡು ಬಂದಿವೆ. ಕರ್ನಾಟಕದಲ್ಲಿ ಇಂತಹ ನಿದರ್ಶನಗಳಿಲ್ಲ. ಚಿಕ್ಕಮಗಳೂರಿನಲ್ಲಿ ಜನಮೇಜಯನು ಸರ್ಪಯಾಗಮಾಡಿದನೆಂಬುದು ಒಂದು ಸಾಂಪ್ರದಾಯಿಕ ನಂಬುಗೆ. ಆದರೆ ಅಲ್ಲಿ ಕ್ರಿ. ಶ. ೨-೩ನೆಯ ಶತಮಾನದ ಪ್ರಾಚೀನ ಶಾಸನವೊಂದಿದೆ. ಅದೊಂದು ಯೂಪಸ್ತಂಭದ ಮೇಲಿದ್ದು ಅದರಲ್ಲಿ ಅಶ್ವಯೂಪದ ಪ್ರಸ್ತಾವವಿದೆ. ಶಾಸನ ಶಿಥಿಲಗೊಂಡಿರುವುದರಿಂದ ಅದರ ಬಗೆಗೆ ಹೆಚ್ಚಿಗೆ ಏನನ್ನೂ ಹೇಳಲಾಗದು. ಉತ್ತರಭಾರತದಲ್ಲಿ ಇಂತಹ ಯೂಪ ಸ್ತಂಭಗಳು ಹಲವಾರು ಕಂಡು ಬಂದಿವೆ.

ಶಾಸನಗಳ ಆರಂಭ, ಬೆಳವಣಿಗೆ

ಬೃಹತ್ ಶಿಲಾಯುಗಕ್ಕೆ ಸೇರಿದ ಹಲವಾರು ಮಡಕೆಗಳ ಚೂರುಗಳ ಮೇಲೂ (ಮಡಕೆಗಳ ಮೇಲೂ) ಕೆಲವು ಬರವಣಿಗೆಗಳು ಕಂಡು ಬಂದಿವೆ. ಇವು ಬ್ರಾಹ್ಮೀಲಿಪಿಗೂ ಹಿಂದಿನ, ಹರಪ್ಪಲಿಪಿಯ ನಂತರದ ಘಟ್ಟಕ್ಕೆ ಸೇರಿದ ಲಿಪಿಗಳಾಗಿರಬಹುದೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಆದರೆ ಅವು ಲಿಪಿಗಳೇ ಎನ್ನುವ ಬಗೆಗೂ ಹಲವಾರು ಸಂದೇಹಗಳಿವೆ. ಈ ಮೊದಲು ಹೇಳಿದಂತೆ ಕರ್ನಾಟಕದ ಅತಿ ಪ್ರಾಚೀನ ಶಾಸನಗಳು ಮೌರ್ಯ್ಯ ಅಶೋಕನದು. ಇವು ಆ ಅರಸನ ಆತ್ಮಕಥನ; ಪಶ್ಚಾತ್ತಾಪದ ನಂತರ ಧರ್ಮ ಪ್ರಚಾರಕ್ಕಾಗಿ ಅವನು ಕೈಗೊಂಡ ಯೋಜನೆಗಳಿಗೆ ಸಂಬಂಧಿಸಿದವುಗಳು. ಶಾಸನಗಳ ಇತಿಹಾಸದಲ್ಲಿಯೇ ಇದೊಂದು ವಿಶಿಷ್ಟರೀತಿಯದೆಂದು ಈಗಾಗಲೇ ಹೇಳಿದೆ. ಸನ್ನತಿಯಲ್ಲಿ ಅಶೋಕನ ಶಾಸನವಲ್ಲದೆ, ಕ್ರಿ.ಶ. ಒಂದನೆಯ ಶತಮಾನದಿಂದ ಮೂರನೆಯ ಶತಮಾನದವರೆಗಿನ ಕಿರುಶಾಸನಗಳು ಲಭಿಸಿವೆ.

ಮೌರ್ಯರ ನಂತರ ಉತ್ತರ ಕರ್ನಾಟಕದಲ್ಲಿ ಆಳಿದ ಸಾತವಾಹನರ, ಚುಟುಗಳ ಶಾಸನಗಳು ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಲಭಿಸಿವೆ. ಬನವಾಸಿಯಲ್ಲಿ ಆಳಿದ ಕದಂಬರ ಶಾಸನಗಳನ್ನು ಇಲ್ಲಿ ನೆನೆಯಬಹುದು. ಇವೆಲ್ಲವೂ ಕ್ರಿ.ಶ. ೪ನೆಯ ಶತಮಾನದವರೆಗಿನ ಶಾಸನಗಳು. ಇವು ಯಾವುದೂ ಕನ್ನಡ ಶಾಸನವಲ್ಲ, ಸಂಸ್ಕೃತ ಶಾಸನಗಳು. ಭದ್ರಬಾಹುವಿಗೆ ಸಂಬಂಧಿಸಿದುದೆನ್ನಲಾದ ಶ್ರವಣಬೆಳಗೊಳದ ಶಾಸನ, ಬಾದಾಮಿಯಲ್ಲಿ ಅಜೇಯವಾದ ದುರ್ಗವನ್ನು ಕಟ್ಟಿಸಿದನೆಂದು ತಿಳಿಸುವ ಚಾಲುಕ್ಯ ಮೊದಲ ಪುಲಕೇಶಿಯ ಶಾಸನ-- ಇವು ಸಹ ಪ್ರಮುಖವಾದ ಶಾಸನಗಳು.

ಮೊದಲ ಕನ್ನಡ ಶಾಸನ ಹಲ್ಮಿಡಿಯಲ್ಲಿದ್ದ ಕದಂಬ ಕಾಕುತ್ಸ್ಥವರ್ಮನದು. ಇದರ ಕಾಲ ಸುಮಾರು ಕ್ರಿ.ಶ. ೪೫೦. ಭಾಷೆ ಕನ್ನಡವೇ ಅಲ್ಲವೆಂದು ಹಿಂದೆ ಎನ್. ಲಕ್ಷ್ಮೀನಾರಾಯಣರಾಯರು ಪ್ರತಿಪಾದಿಸಿದ್ದರು. ಆದರೆ ಇದು ಕನ್ನಡದ್ದೇ ಶಾಸನವೆಂದು ಈಗ ಎಲ್ಲ ಪಂಡಿತರೂ ಒಪ್ಪಿದ್ದಾರೆ. ಆದರೆ ಭಾಷೆ ಕ್ಲಿಷ್ಟ, ಅಸ್ಪಷ್ಟ, ಆದಕಾರಣ ಇದಕ್ಕೆ ಹಲವಾರು ವ್ಯಾಖ್ಯಾನಗಳನ್ನು ನೀಡಿದೆ. ಶಾಸನ ಆರಂಭವಾಗುವುದು ವಿಷ್ಣುವಿನ ಸ್ತುತಿಯಿಂದ - ಇದು ಸಂಸ್ಕೃತ ಶ್ಲೋಕದಲ್ಲಿದೆ. ಉಳಿದಂತೆ ಭಾಷೆ ಕನ್ನಡ, ನೇರಾಗಿ ವಿಷಯ ಪ್ರಸ್ತಾಪಿಸುವುದು ಈ ಶಿಲಾಶಾಸನದ ಲಕ್ಷಣ. ತಾಮ್ರಶಾಸನಗಳಲ್ಲಿ ವಂಶಾವಳಿ, ಅರಸನ (ರ) ಸಾಧನೆಗಳನ್ನು ವರ್ಣಿಸಿದ್ದರೂ, ಈಗಿನ ಕಾಲದ ಶಿಲಾಶಾಸನಗಳು ಇಂತಹ ವಿವರಗಳಿಗೆ ಹೋಗದೆ ಪ್ರಾರ್ಥನಾಶ್ಲೋಕದ ನಂತರ ವಿಷಯಪ್ರಸ್ತಾವನೆಗೆ ತೊಡಗುತ್ತವೆ. ಕೊನೆಯಲ್ಲಿ ಈ ಶಾಸನದಲ್ಲಿ ಕಾಣಿಸಿಕೊಂಡಿರುವ ಶಾಪವಾಕ್ಯದಲ್ಲಿ ಸಹ ಚುಟುಕಾದದ್ದು : 'ಅದಾನ್ ಅೞಿವೋಂಗೆ ಮಹಾಪಾತಕಂ' ಎಂದಷ್ಟೇ ಇದೆ.

ಕ್ರಮೇಣ, ಗಂಗರ ರಾಷ್ಟ್ರಕೂಟರ ಕಾಲದಲ್ಲಿ ತಾಮ್ರಶಾಸನಗಳನ್ನು ವಿಶೇಷವಾಗಿ ಬಳಸಲಾಗಿದೆ. ಸ್ಥಳಾಭಾವದ ಕಾರಣ ಶಿಲಾಶಾಸನಗಳಲ್ಲಿ ಕಂಡುಬರುವಷ್ಟು ದಾನದ ವಿವರಗಳಾಗಲಿ, ಭಿನ್ನಭಿನ್ನ ಶಾಪವಾಕ್ಯಗಳಾಗಲಿ, ತಾಮ್ರಶಾಸನಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ.

ದೇವಾಲಯಗಳಿಗೋ, ಸಂಸ್ಥೆಗಳಿಗೋ, ಕೊನೆಗೆ ವ್ಯಕ್ತಿಗಳಿಗೋ ನೀಡಲಾದ ದಾನಗಳನ್ನು ದುರ್ವಿನಿಯೋಗ ಪಡಿಸುವುದು, ಸ್ವಂತಕ್ಕೆ ಕಬಳಿಸುವುದು ಮಾನವಗುಣದಲ್ಲಿ ಕಂಡು ಬರುವ ಬಲಹೀನತೆ. ಆದರೆ ಪಾಪದ ಭೀತಿ ಆರಂಭದ ಸಾವಿರಾರು ವರ್ಷಗಳಲ್ಲಿ

ಅವನನ್ನು ಕಾಡುತ್ತಿತ್ತು. ಎಂತಲೇ ದಾನ ನೀಡುವಾಗ ಕೊನೆಯಲ್ಲಿ ಶಾಪವಾಕ್ಯಗಳನ್ನು ಸಹ ಸೇರಿಸಲಾಗುತ್ತಿತ್ತು. ಈ ದಾನವನ್ನು ದುರ್ವಿನಿಯೋಗ ಪಡಿಸಿದಾತ ನರಕಕ್ಕಿಳಿಯುತ್ತಾನೆ; ಅಂತಹವನಿಗೆ ಕೇಡುಂಟಾಗುತ್ತದೆ. ದಾನ ಸ್ವೀಕಾರಕ್ಕಿಂತಲೂ ಅದರ ರಕ್ಷಣೆ ಹೆಚ್ಚು ಶ್ರೇಯಸ್ಕರ ಎಂಬಂತಹ ಹಲವಾರು ಸಂಸ್ಕೃತ ಶ್ಲೋಕಗಳು ನಮಗೆ ಕಾಣಿಸಿಕೊಳ್ಳುತ್ತವೆ. ಹಲವು ಸಂದರ್ಭಗಳಲ್ಲಿ, ಅದನ್ನೇ ಕನ್ನಡಕ್ಕೆ ಅನುವಾದ ಮಾಡಿರುವುದೂ ಗೋಚರಿಸುತ್ತದೆ. ಮೇಲೆ ಉಲ್ಲೇಖಿಸಿದ ಶಾಪವಾಕ್ಯದಲ್ಲಿ ದಾನವನ್ನು ನಾಶ ಮಾಡಿದವನಿಗೆ ಪಾತಕವುಂಟಾಗುತ್ತದೆ ಎಂಬಷ್ಟೇ ಮಾತಿದೆ.

ಏಳನೆಯ ಶತಮಾನದ ನಂತರ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತವೆ. ರಾಷ್ಟ್ರಕೂಟರ ಆಳ್ವಿಕೆಯ ಅಂತ್ಯದವರೆಗೂ - ಹತ್ತನೆಯ ಶತಮಾನದ ಅಂತ್ಯದವರೆಗೂ - ಹಬ್ಬಿವೆ. ಸಂಸ್ಕೃತ ಪ್ರಮುಖ ಭಾಷೆಯಾದರೂ ಕನ್ನಡವೂ ಜೊತೆ ಜೊತೆಯಲ್ಲಿಯೇ ಶಾಸನಭಾಷೆಯಾಗಿ ವಿಸ್ತರಿಸುತ್ತ ಹೋಗುತ್ತದೆ. ೧೧ನೆಯ ಶತಮಾನ ಮತ್ತು ಆ ನಂತರದ ಶಾಸನಗಳಲ್ಲಿ ಭಾಷಾ ಶೈಲಿಗೆ, ಸಾಹಿತ್ಯದಲ್ಲಿ ಕಂಡುಬರುವ ಕಾವ್ಯ ಶೈಲಿಗೆ ಹೆಚ್ಚು ಪ್ರಾಶಸ್ತ್ಯ ಲಭಿಸಿದೆ. ಗದ್ಯಕ್ಕಿಂತ ಪದ್ಯಕ್ಕೆ ವಿಶೇಷ ಪ್ರಾಶಸ್ತ್ಯ, ಪ್ರಶಂಸೆಗಳು, ಉತ್ಪ್ರೇಕ್ಷೆಗಳು ಈಗ ಹೆಚ್ಚಿನ ಸಂಖ್ಯೆಯಲ್ಲಿ ಲಭಿಸತೊಡಗುತ್ತವೆ. ಅರಸರ ಪ್ರಾಬಲ್ಯ ಹೆಚ್ಚಿದಂತೆಲ್ಲಾ ಕವಿಗಳು ಲೇಖಕರು, ಕಲೆಗಾರರು ರಾಜಮನ್ನಣೆಗಾಗಿ ಹಾತೊರೆಯುತ್ತಿದ್ದರು. ರಾಜಾಶ್ರಯ ದೊರಕಿದವರಂತೂ ತಮ್ಮ ಆಶ್ರಯದಾತರನ್ನು ವಿವಿಧ ರೀತಿಗಳಲ್ಲಿ ಬಣ್ಣಿಸಿ ಅವರಿಂದ ಹೆಚ್ಚು ಗೌರವ ಲಾಭಗಳನ್ನು ಪಡೆಯಲು ಮುಂದಾದರು. ಒಂದು ವಿಧದಲ್ಲಿ ಅವರಲ್ಲಿ ಈ ವಿಷಯದಲ್ಲಿ ಪೈಪೋಟಿಯೇ ಏರ್ಪಟ್ಟಿತ್ತೆನ್ನಬಹುದು. ಪರಿಣಾಮವಾಗಿ ಭಾಷೆ ಹೆಚ್ಚು ಛಂದೋಬದ್ಧವಾಗಿ, ಮನರಂಜಕವಾಗಿ

ಬೆಳೆಯಿತು. ಆದರೂ ಈ ಪ್ರಶಸ್ತಿಗಳಲ್ಲಿ ವೈವಿಧ್ಯತೆ ಇಲ್ಲದೆ ರೂಢಿ ಬದ್ಧ ಒಕ್ಕಣೆಗಳನ್ನೇ ಕಾಣುತ್ತೇವೆ.

ಅತಿ ಪ್ರಾಚೀನ ಕನ್ನಡ ಶಾಸನ ಹಲ್ಮಿಡಿಯದೆಂದು ಹೇಳಿದೆ. ಬಾದಾಮಿಯಲ್ಲಿ ಕಪ್ಪೆ ಅರಭಟ್ಟ ಎಂಬಾತನ ಪ್ರಶಸ್ತಿಯನ್ನೊಳಗೊಂಡ ಶಾಸನವಿದೆ. ಇದು ಸಂಸ್ಕೃತ ಕನ್ನಡ ಎರಡು ಭಾಷೆಗಳಲ್ಲಿದೆ. ಪರಿಶುದ್ಧವಾದ ಕನ್ನಡ ಭಾಗವನ್ನೂ ಇದರಲ್ಲಿ ಕಾಣುತ್ತೇವೆ. ಅದು ಹೀಗೆ:

ಒಳ್ಳಿತ್ತ ಕೆಯ್ವೋರಾರ್ಪ್ಪೊಲ್ಲದುಮದಱನ್ತೆ ಬಲ್ಲಿತ್ತು ಕಲಿಗೆ
ವಿಪರೀತಾ ಪುರಾಕೃತಮಿಲ್ಲಿ ಸನ್ದಿಕ್ಕುಮದು ಬನ್ದು
ಕಟ್ಟಿದಾ ಸಿಂಘಮನ್ಕೆಟ್ಟೋದೇನೆಮಗೆನ್ದು ಬಿಟ್ಟವೋಲ್ ಕಲಿಗೆ
ವಿಪರೀತಂಗಳಹಿತರ್ಕ್ಕಳ್ಕೆಟ್ಟರ್ ಮೇಣ್ ಸತ್ತರವಿಚಾರಂ

ಈ ಕಪ್ಪೆ ಅರಭಟ್ಟನನ್ನು ಶಿಷ್ಟಜನ ಪ್ರಿಯನ್, ಕಷ್ಟಜನವರ್ಜಿತನ್, ಕಲಿಯುಗವಿಪರೀತನೆಂದೆಲ್ಲಾ ಬಣ್ಣಿಸಲಾಗಿದೆ. ಇವು ಸಂಸ್ಕೃತ ಪ್ರಭಾವಿತ ಪ್ರಶಸ್ತಿಗಳಷ್ಟೆ. ಈ ಶಾಸನ ಪದ್ಯದಲ್ಲಿ ಅತಿ ಪ್ರಾಚೀನ 'ತ್ರಿಪದಿ' ಛಂದಸ್ಸನ್ನು ಬಳಸಲಾಗಿದೆ ಎಂಬುದು ಗಮನಾರ್ಹ.

೭ನೆಯ ಶತಮಾನದ ಆದಿ ಭಾಗದ ಚಾಲುಕ್ಯ ಮಂಗಲೇಶನ ಈ ಶಾಸನ ಗಮನಿಸಿ :

ಸ್ವಸ್ತಿ ಶ್ರೀಮತ್ಪ್ರಿಥ್ವೀ ವಲ್ಲಭ ಮಂಗಲೇಶನಾ ಕಲ್ಮನೆಗೆ ಇತ್ತೊಂದು
ಲಂಜಿಗೇಸರಮ್ ದೇವರ್ಕ್ಕೆ
ಪೂನಿಱಿವ ಮಾಲಕಾರರ್ಗ್ಗೆ ಅರ್ದ್ಧ ವಿಸದಿ ಇತ್ತೊದಾನಱಿವೋನ್ ಪಞ್ಚ
ಮಹಾಪಾತಕನಕ್ಕುಂ ಏಳನೆಯ ನರಕದ ಪುೞು ಅಕ್ಕುಮ್

ಇದು ಒಂದು ಶುದ್ಧ ಕನ್ನಡ ಶಾಸನ. ಶಾಪವಾಕ್ಯವೂ ಕನ್ನಡದಲ್ಲಿರುವುದು ಗಮನಾರ್ಹ.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಬಸ್ತಿಪುರದ ಶಾಸನದಲ್ಲಿ ಜೈನರ ಆಚಾರ್ಯ ಪುಷ್ಪನಂದಿಯ ಮರಣವನ್ನು ದಾಖಲಿಸಿದೆ. ೭-೮ನೆಯ ಶತಮಾನಕ್ಕೆ ಸೇರಿದ ಈ ಬಂಡೆಗಲ್ಲಿನ ಶಾಸನ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿವೆ. ಕನ್ನಡ ಭಾಷೆಯ ಶಾಸನದಲ್ಲಿ ಪುಷ್ಪನಂದಿಯು ಶಿಷ್ಯ ಬಲದೇವನು ತನ್ನ ಗುರುವಿನ ನಿಷಿದಿಯನ್ನು ಬಿಟ್ಟುಹೋಗಲಾರೆನೆಂದು ನಿರ್ಧರಿಸಿ ಒಂದು ತಿಂಗಳ ನಂತರ ತಾನೂ ಅಲ್ಲಿಯೇ ಮೃತನಾದನೆಂದು ಹೇಳುತ್ತದೆ.

ಅತಿಶಯ ಪುಷ್ಟಣಂದಿಮುನಿ ಮುಕ್ತಿಯನೆಯ್ದಿದೊಡಾ ನಿಶಿಧಿಕಾ
ಪ್ರತಿಬದ್ಧದೆ ಪವಿತ್ರಮಿದನಾನಗಲೆನ್ ಧ್ರುವಮೆನ್ದು
ವ್ರತಪರಿಭಾವಿತಾರ್ತ್ಥ ಮನದಿ ಗುರುಭಕ್ತಿಯಾಸಮೇತನುತ್ತಮೋ
ನ್ನತ ಗುಣ ಪೂರ್ಣ್ನಾರ್ಣ್ಣವ ತೞದಿ ಪುರಿಮಂಡಲಸನ್ಮುನೀಶ್ವರಮ್

ಇದೊಂದು ಜೈನ ಶಾಸನ. ಶ್ರವಣಬೆಳಗೊಳದಲ್ಲಿ ಇದೇ ಜೈನ ಧರ್ಮಕ್ಕೆ ಸಂಬಂಧಿಸಿದ ೭ನೆಯ ಶತಮಾನದ ಹಲವಾರು ಕಿರುಶಾಸನಗಳಿವೆ. ಇವುಗಳಿಂದ ಜೈನರು ಅಂದಿನಿಂದಲೇ ಕನ್ನಡ ಭಾಷೆಗೆ ಕೊಟ್ಟ ಪ್ರೋತ್ಸಾಹದ ಅರಿವಾಗುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯ ಆರಂಭದಲ್ಲಿ ನಾವು ಕಾಣುವುದು ಜೈನಯುಗದ - ಧರ್ಮದ ಸಾಹಿತ್ಯ ತಾನೇ!

ಸುಪ್ರಸಿದ್ಧವಾದ ಈ ಶಾಸನ ನೋಡಿ. ಜನ ಸಾಮಾನ್ಯರಿಗೆ ಭಾಷೆ ಕ್ಲಿಷ್ಟವೆನಿಸಬಹುದಾಗಿದೆ :

ಶ್ರೀ ಬಾಳಾಮೇಲ್ಕೆಖಿಮೇಲೆ ಸರ್ಪದ ಮಹಾದನ್ತಾಗ್ರದುಳ್ಸಲ್ವವೊಲ್
ಸಾಲಾಮ್ಬಾಲತಪೋಗ್ರದಿನ್ತು ನಡೆದೊಂ ನೂಱೆಣ್ಬು ಸಂವತ್ಸರಂ
ಕೇಳೊಯ್ಪಿನ್ಕಟವಪ್ರ ಶೈಲಮಡಱೆನಮ್ಮಾ ಕಳನ್ತೂರನಂ
ಬಾಲೇ ಪೆರ್ಗೊರವಂ ಸಮಾಧಿನೆಱೆದೂನ್ ನೋನ್ತೆಯ್ದಿದಾರ್ಸ್ಸಿದ್ಧಿಯನ್

ಕಳನ್ತೂರಿನ ಜೈನ ಗೊರವ (ಗುರು) ಕಟವಪ್ರ (ಶ್ರವಣಬೆಳಗೊಳ) ದಲ್ಲಿ ೧೦೮ ವರ್ಷಗಳು ಉಗ್ರದಿನ್ದ ತಪಗೆಯ್ದು ಸಮಾಧಿಯನ್ನು ಪಡೆದನೆನ್ನುತ್ತದೆ ಈ ಶಾಸನ. ಇದು ಶಾರ್ದೂಲವಿಕ್ರೀಡಿತ ಛಂದಸ್ಸಿನಲ್ಲಿದೆ.

ಇನ್ನೊಂದು ಶಾಸನದಲ್ಲಿ ಭದ್ರಬಾಹು-ಚಂದ್ರಗುಪ್ತರ ಪ್ರಸ್ತಾಪವಿದೆ. ಅವರೀರ್ವರ ನಂತರ ಆವರೆವಿಗೂ ಭದ್ರವಾಗಿದ್ದ ಧರ್ಮ ಸ್ವಲ್ಪ ಅಳುಕಿದಾಗ ಶಾಂತಿಸೇನ ಮುನಿ ಅದಕ್ಕೆ ಮತ್ತೆ ಜೀವ ತುಂಬಿ ಅಸುನೀಗಿದನೆಂದು ಹೇಳುತ್ತದೆ ಶಾಸನ :

ಶ್ರೀ ಭದ್ರವಾಹುಸಚನ್ದ್ರಗುಪ್ತ ಮುನೀನ್ದ್ರಯುಗ್ಮದಿನೊಪ್ಪೆವೊಲ್
ಭದ್ರಮಾಗಿದ ಧರ್ಮ ಮನ್ದುವಱಿಕ್ಕೆವನ್ದಿನಿಸಳ್ಕಲೋ
ವಿದ್ರುಮಾಧರ ಶಾನ್ತಿಸೇನಮುನೀಶ ನಾಕ್ಕಿಏ ವೆಳ್ಗೊಳ (ಳ)
ಆದ್ರಿಮೇಲಶನಾದಿವಿಟ್ಟು ಪುನರ್ಭವಕ್ಕೆಱೆ ಆಗಿ

ಇದು ಮಲ್ಲಿಕಾಮಾಲೆ ವೃತ್ತದಲ್ಲಿದೆ.

ಆದರೆ ಇವು ಜಿನಧರ್ಮದ ಶಾಸನಗಳಾಗಿದ್ದು ಕನ್ನಡದ ಶಾಸನ ಸಾಹಿತ್ಯದಲ್ಲಿ ಸ್ವಲ್ಪ ಮಟ್ಟಿಗೆ ಭಿನ್ನಗತಿಯನ್ನು ತಾಳಿದವುಗಳು. ವಿಶೇಷವಾಗಿ ಪದ್ಯ ರೂಪದಲ್ಲಿರುವುವು.

ಬಾದಾಮಿಯ ಚಾಲುಕ್ಯರ ನಂತರ ಆಳತೊಡಗಿದ ರಾಷ್ಟ್ರಕೂಟರ ಶಾಸನದಲ್ಲಿ ಕನ್ನಡ ಶಾಸನಗಳು ಹೆಚ್ಚು ಗದ್ಯಮಯವಾಗಿವೆ. ವಸ್ತುನಿಷ್ಠವಾದ ಈ ಶಾಸನಗಳಲ್ಲಿ ಅರಸನ ಹೆಸರು, ವಿಶಿಷ್ಟ ಬಿರುದು ಹಾಗೂ ಆ ವಂಶಸ್ಥರು ಸಾಮಾನ್ಯವಾಗಿ ಬಳಸುವ ಬಿರುದುಗಳು, ನಂತರ ಶಾಸನದ ಕಾಲ ಹಾಗೂ ದಾನದ ವಿವರಗಳು (ಶಾಸನದ ಉದ್ದೇಶ) ಸ್ಪಷ್ಟವಾಗಿರುತ್ತವೆ. ಬಾದಾಮಿ ಚಾಲುಕ್ಯರ ಕೊನೆಯ ಅರಸ ಇಮ್ಮಡಿ ಕೀರ್ತಿವರ್ಮನ ಈ ಶಾಸನ ನೋಡಿ :

ಕೀರ್ತಿವರ್ಮ ಸತ್ಯಾಶ್ರಯ ಶ್ರೀ ಪ್ರಿಥುವೀವಲ್ಲಭ ಮಹಾರಾಜಾಧಿರಾಜ
ಪರಮೇಶ್ವರ ಭಟಾರರಾ ರಾಜ್ಯಮೊನ್ದುತ್ತರಮಭಿವೃದ್ಧಿಸಲೆ
ಆಱನೆಯ ವರ್ಷಮ್ಪ್ರವರ್ತ್ತಮಾನಮಾಗೆ ಜೇಬುಳಗೇರಿಗೆ
ಕಲಿಯಮ್ಮ ಗಾಮುಣ್ಡು ಗೆಯ್ಯೇ ಚೇರಿಯಮಾನ್ಮ ಡಿಸಿದೋನ್
ಇದಮುನ್ದೆ ಕೊಣ್ಡೆಶುಲರ ಕುಪ್ಪ ಕೀರ್ತಿವರ್ಮ ಗೋಸಾಸಿಯನಿೞಿಸಿದಾ
ಕೀರ್ತನ ದಿಶಾಪಾಲಸ್ಯ ಲಿಖಿತಂ ಪ್ರಭುನಾಮನ್.

ದಿಶಾಪಾಲನ ಬರಹ ಎಂಬ ಮಾತು ಹೊರತುಪಡಿಸಿ ಮಿಕ್ಕದ್ದೆಲ್ಲಾ ಕನ್ನಡ ಭಾಷೆಯಲ್ಲಿದೆ. ಇಲ್ಲಿ ನಾವು ಕಾಣುವುದು ಕೋಮಲ, ಲಲಿತವಾದ ಭಾಷೆ.

ವಿಚಿತ್ರವೆಂದರೆ ಸಮಕಾಲೀನವಾದ ದಕ್ಷಿಣ ಕರ್ನಾಟಕದ ತಲಕಾಡಿನಲ್ಲಿ ಆಳಿದ ಗಂಗರ ಶಾಸನ ಭಾಷೆಯಲ್ಲಿ ಇದು ಕಾಣಿಸುವುದಿಲ್ಲ. ಇಲ್ಲಿ ಸೌಜನ್ಯ ಶೂನ್ಯ, ಜಾನಪದಕ್ಕೆ ಸಮೀಪದ, ದೇಶೀ ಎಂದು ಕರೆಯಬಹುದಾದ, ಆಡುಮಾತನ್ನೇ ಬರಹದ ರೂಪಕ್ಕೆ ಇಳಿಸಿದಂತಹ ಭಾಷೆ.

ಗಂಗರ ಶಿವಮಾರನ ಈ ಶಾಸನದಲ್ಲಿ ವೆಡಿರೂನ್ ಎಂಬಾತ ಮಡಿದಾಗ ಇೞಿಯ ಮರಿಯಾದಿಯಾಗಿ ಕೊಟ್ಟ ದಾನದಲ್ಲಿ ಕೆಲವು ಪಾಲಿಸಲೇಬೇಕಾದ ಕರಾರುಗಳನ್ನು ಸೂಚಿಸಿದೆ. ಶಾಸನದ, ಸಂದರ್ಭೋಚಿತ ಪಾಠ ಹೀಗಿದೆ.

> ''ಸ್ವಸ್ತಿಶ್ರೀಮದ್ ಶಿವಮಾರಮ್ ಪ್ರಿಥುವೀ ರಾಜ್ಯಂ ಕೆಯೆ ವೆಡಿರೂನ್
> ಸ್ವರ್ಗಸ್ತ್ರಿೞಿಯ ಮರಿಯಾದಿ ಕೊಟ್ಟಾನ್ ಸೇಬಿಗೆ ವಿಟ್ಟಾರ್.........ಅನ್ದಿನಾ
> ತೆೞಿ ಎಕೊಳ್ಗ ಅನ್ದಿನಾ ಕೆಯ್ವಸನೆ ಕೊಳ್ಗ ದೇವಮಣ್ಣು ವಾನ್ದಾರಿ ಎೞಿತ್ತನಮೆ
> .... ಒಕ್ಕಳುಲ್ಪೊತ್ತಿನಮಕಳ್ಪುಟ್ಟೆಲ್ಕ ಪುಟ್ಟಿದೊನ್ದು ಪುರೀಗ''

ಶಾಪವಾಕ್ಯದಲ್ಲಿ ಅವನ ಮನೆ ಸುಟ್ಟು ಹೋಗಲಿ, ಮಕ್ಕಳು ಹುಟ್ಟದೆ ಹೋಗಲಿ, ಹುಟ್ಟಿದ ಮಕ್ಕಳು ಸಾಯಲಿ ಎಂಬೀ ಭಾಗವನ್ನು ಗಮನಿಸಬಹುದು. ಇಲ್ಲಿ ಇನ್ನೊಂದು ಅಂಶ ಗಣನೀಯವೆಂದರೆ ಅಂದು ಚಾಲನೆಯಲ್ಲಿದ್ದ ಅನೇಕ ಕನ್ನಡ ಮಾತುಗಳು. ಈಗ ಅವುಗಳ ಅರ್ಥವೇ ತಿಳಿಯದಂತಾಗಿದೆ. ಸೇಬಿಗೆ ವಿಟ್ಟಾರ್ ಎಂಬ ಮಾತಿನ ಸ್ಪಷ್ಟ ಅರ್ಥ ತಿಳಿಯದು. ಎಱಿತ್ತನ ಎಂಬುದು ಒಡೆತನಕ್ಕೆ ಸಂಬಂಧಿಸಿದುದಾಗಿರಬಹುದು.

ಇಲ್ಲಿ ಒಂದು ವಿಷಯವನ್ನು ಗಮನಿಸಬಹುದು. ಈ ವೇಳೆಗೆ - ಅಂದರೆ, ದಕ್ಷಿಣ ಕರ್ನಾಟಕದಲ್ಲಿ ಗಂಗರು ಆಳತೊಡಗಿದ್ದಾಗ - ಉತ್ತರ ಕರ್ನಾಟಕದಲ್ಲಿ ಸಂಸ್ಕೃತಿಯ ಆರ್ಯೀಕರಣದ ಪ್ರಕ್ರಿಯೆ ಆರಂಭವಾಗಿತ್ತು. ದಕ್ಷಿಣ ಕರ್ನಾಟಕದ ಭಾಗಗಳು, ವಿಶೇಷವಾಗಿ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಜಿಲ್ಲೆಗಳು, ತಮಿಳರ ಆಡಳಿತ ಸಂಪರ್ಕದಿಂದ ತಮಿಳು ಭಾಷೆ, ಸಂಸ್ಕೃತಿಗಳ ಪ್ರಭಾವಕ್ಕೊಳಗಾಗಿತ್ತು. ಗಂಗರು ಆರಂಭದಲ್ಲಿ ಪಲ್ಲವರ ಪ್ರಭಾವಕ್ಕೊಳಪಟ್ಟಿದ್ದರು. ಇದು ಕೇವಲ ರಾಜಕೀಯಕ್ಕಷ್ಟೇ ಸೀಮಿತವಾಗಿರದೆ, ಭಾಷೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೂ ವ್ಯಾಪಿಸಿತ್ತು. ಕನ್ನಡದ ಆರಂಭದ ಸಾಹಿತ್ಯ ಕೃತಿಗಳು ಬಹುಮಟ್ಟಿಗೆ ಉತ್ತರ ಕರ್ನಾಟಕದ ಕೊಡುಗೆಗಳೆಂದರೆ ತಪ್ಪಾಗಲಾರದು. ಇದು ಜೈನ ಧರ್ಮದ ಪ್ರೇರೇಪಣೆಗೊಳಗಾದದ್ದು, ದಕ್ಷಿಣ ಕರ್ನಾಟಕದಲ್ಲಿ ಇಂತಹ ಪ್ರಭಾವ ತೀರ ಕಡಿಮೆಯದಾಗಿತ್ತು.

ಇಲ್ಲಿ ಇನ್ನೂ ಒಂದು ಅಂಶವನ್ನು ಗಮನಿಸಬೇಕು. ಗಂಗರು ಜೈನ ಧರ್ಮಾವಲಂಬಿಗಳೆಂದೂ, ಜೈನಧರ್ಮದ ಆಶ್ರಯದಾತರೆಂಬುದೂ ಸಾಮಾನ್ಯವಾಗಿ ಭಾವಿಸಲಾದ ತಪ್ಪು ಕಲ್ಪನೆ. ಗಂಗರ ರಾಜ್ಯ

ಆವಿರ್ಭವಿಸುವಲ್ಲಿ ಜೈನರ ಗುರು ಸಿಂಹನಂದಿ ವಿಶೇಷ ಪಾತ್ರವಹಿಸಿದ್ದನೆಂಬುದು ಈಗ ಸಂದೇಹಾಸ್ಪದವಾಗಿ ಕಂಡುಬಂದಿದೆ. ಗಂಗರ ಮೊದಲ ಅರಸರೆಲ್ಲರೂ ಹಿಂದೂ ಧರ್ಮೀಯರೇ ! ಅವರ ನಾಮಧೇಯಗಳು- ಮಾಧವ, ಹರಿವರ್ಮ, ವಿಷ್ಣುಗೋಪ ಇತ್ಯಾದಿ, ಹಾಗೂ ಬಿರುದುಗಳು - ನಾರಾಯಣಚರಣಾನುಧ್ಯಾತ, ಗುರುಗೋಬ್ರಾಹ್ಮಣಪೂಜಕ, ದೇವದ್ವಿಜಗುರುಪೂಜಾತತ್ಪರ ಇತ್ಯಾದಿಗಳು ಅವರು ವಿಷ್ಣುಭಕ್ತರೆಂಬುದನ್ನು ಸೂಚಿಸುತ್ತದೆ ಹಾಗೂ ಸ್ವತಃ ಅವರು ಜೈನ ಧರ್ಮಾವಲಂಬಿಗಳಾಗಿದ್ದರೆಂಬ ಊಹೆಯನ್ನು ಅಲ್ಲಗಳೆಯುತ್ತದೆ. ಅವರು ನೀಡಿದ ಹಲವಾರು ತಾಮ್ರಪಟ ಶಾಸನಗಳ ಭಾಷೆ ಸಂಸ್ಕೃತ. ಅಂದು ಸಂಸ್ಕೃತ ಆಡಳಿತ ಭಾಷೆಯಾಗಿದ್ದು ಅದನ್ನೇ ಅವರು ಬಳಸಿದರು. ಆದರೆ ಆಡುಮಾತಾದ ಕನ್ನಡ ಅವರ ಶಾಸನಗಳಲ್ಲೂ ಬಳಸಲಾಗಿದ್ದು ಅವು ಉತ್ತರ ಕರ್ನಾಟಕದ ಕನ್ನಡದಷ್ಟು ಸಂಸ್ಕೃತೀಕರಣಕ್ಕೊಳಗಾಗಿರಲಿಲ್ಲ. ಒಂದು ವಿಧದಲ್ಲಿ ಅದು ಜಾನಪದದತ್ತಲೇ ಒಲಿಯುವುದನ್ನು ಕಾಣುತ್ತೇವೆ. ಆದರೆ ಉತ್ತರ ಕರ್ನಾಟಕದ ಭಾಷೆಯಲ್ಲಿ ಮಾರ್ಗಶೈಲಿಯನ್ನು ನೋಡಬಹುದಾಗಿದೆ.

೧೧ನೆಯ ಶತಮಾನದ ಹಾಗೂ ಆ ನಂತರದ ಶಾಸನಗಳಲ್ಲಿ ಅರಸನ ಸಾಧನೆಗಳು, ವಿವರಣೆ, ಆತನ ವಂಶಾವಳಿ, ಮಾಡಿದ ಪುಣ್ಯಕಾರ್ಯಗಳು, ಪ್ರತಿಗ್ರಹಿಗಳ ದಾನಪಾತ್ರತ್ವ, ಅವರ ಕುಲಗೋತ್ರಗಳ ವಿವರಗಳು ಮುಂತಾದವು ಶಾಸನಗಳ ಭಾಗಗಳಾಗಿ ಕಂಡುಬರುತ್ತದೆ. ಇದರಿಂದ ಇತಿಹಾಸಕಾರನಿಗೆ ಸಾಮಾಜಿಕ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು ಲಭ್ಯವಾಗಿ, ಅವು ಆತನಿಗೆ ಉತ್ತಮ ಮೌಲಿಕ ಸಾಮಗ್ರಿಯಾಗಿದೆ. ಧಾರ್ಮಿಕ ಸ್ಥಿತಿಗತಿಗಳು, ಕಲೆಗೆ ಲಭಿಸಿದ ಪ್ರೋತ್ಸಾಹಗಳನ್ನೂ ಇಲ್ಲಿ ಗುರುತಿಸಬಹುದು.

ಆರಂಭದಲ್ಲಿ ಕಾಣಿಸಿಕೊಳ್ಳುವ ದೇವತಾಸ್ತುತಿಯಿಂದ ಶಾಸನ ಯಾವ ಧರ್ಮೀಯರಿಂದ, ಯಾವ ಧರ್ಮದವರಿಗೆ ನೀಡಲಾಯಿತೆಂದು ತಿಳಿಯಬಹುದು. ಆದರೆ ಇಲ್ಲೂ ಸಹ ದಾನಿ ಯಾವ ಧರ್ಮಕ್ಕೆ ಸೇರಿದಾತ ಎಂದು ಹೇಳುವುದು ಕಷ್ಟವಾಗುತ್ತದೆ. ಆರಂಭಕಾಲದ ಶಾಸನಗಳಲ್ಲಿ ಇಂತಹ ಶ್ಲೋಕಗಳು ಕಾಣಿಸಿಕೊಳ್ಳುವುದು- ಅದರಲ್ಲಿಯೂ ವಿಶೇಷವಾಗಿ ಶಿಲಾಶಾಸನಗಳಲ್ಲಿ - ಕಡಿಮೆ. ಆದರೆ ಕ್ರಮೇಣ ಇದು ಶಾಸನದ ಆರಂಭ ಪದ್ಯವಾಗಿ ಕಂಡು ಬರುತ್ತವೆ. ಇವು ಸಂಸ್ಕೃತ ಭಾಷೆಯಲ್ಲಿರುತ್ತವೆ. ಪ್ರಾಚೀನ ಕನ್ನಡ ಶಾಸನ (ಹಲ್ಮಿಡಿ)ದಲ್ಲಿ ಆರಂಭದಲ್ಲಿ ವಿಷ್ಣುವಿನ ಪ್ರಾರ್ಥನೆ ಇದೆ.

> ಜಯತಿ ಶ್ರೀ ಪರಿಷ್ವಙ್ಗ ಶ್ಶಾಙ್ರ್ಗವ್ಯಾನತಿರಚ್ಯುತ:
> ದಾನವಾಕ್ಷ್ಣೋ ರ್ಯುಗಾನ್ತಾಗ್ನಿ: ಶಿಷ್ಟಾನಾನ್ತು ಸುದರ್ಶನ:

(ದಾನವರಿಗೆ ಯುಗಾಂತಾಗ್ನಿಯಲೂ ಶಿಷ್ಟರಿಗೆ ಸುದರ್ಶನನೂ ಆಗಿರುವ ಶ್ರೀಯಿಂದ ತಬ್ಬಿಕೊಳ್ಳಲ್ಪಟ್ಟ ಶಾಙ್ರ್ಗವೆಂಬ ಬಾಗಿದ ಬಿಲ್ಲುಳ್ಳ ಅಚ್ಯುತನಿಗೆ ಜಯವಾಗಲಿ ಎಂಬುದು ಇದರ ಅರ್ಥ.) ಕ್ರಮೇಣ ಇವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಆದರೆ ಕೆಲವಂತೂ ಸರ್ವಸಾಮಾನ್ಯವಾಗಿಬಿಟ್ಟಿವೆ. ಉದಾಹರಣೆಗೆ :

> ಜಯತ್ಯವಿಷ್ಕೃತಂ ವಿಷ್ಣೋ: ವಾರಾಹಂ ಕ್ಷೋಭಿತಾರ್ಣವಂ
> ದಕ್ಷಿಣೋನ್ನತ ದಂಷ್ಟ್ರಾಂಷುಗ್ರವಿಶ್ರಾಂತ ಭುವನಂ ವಪು :

ಎಂಬ ವಿಷ್ಣು ಪರವಾದ ಶ್ಲೋಕ; ಅಷ್ಟು ಪ್ರಚಲಿತವಲ್ಲದಿದ್ದರೂ ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವ ವರಾಹರೂಪಿಯಾದ ವಿಷ್ಣುವಿನ ಪ್ರಾರ್ಥನೆ:

ಶೈವ ಶಾಸನಗಳಲ್ಲಿ ಸುಪ್ರಸಿದ್ಧವಾದ ಮಂಗಳಶ್ಲೋಕ :
ನಮಸ್ತುಂಗಶಿರಸ್ತುಂಬಿ ಚಂದ್ರಚಾಮರ ಚಾರವೇ
ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ

ವಾಸ್ತವಿಕವಾಗಿ ಇದು ಬಾಣಕವಿ ವಿರಚಿತ ಹರ್ಷಚರಿತ (ಸಂಸ್ಕೃತ)ದ ಆರಂಭದಲ್ಲಿನ ಪ್ರಾರ್ಥನಾಶ್ಲೋಕ. ಸಂಖ್ಯಾ ದೃಷ್ಟಿಯಿಂದ ದಕ್ಷಿಣ ಭಾರತದ- ಕರ್ನಾಟಕದ-ಶಾಸನಗಳಲ್ಲಿ ಈ ಶ್ಲೋಕಕ್ಕಿರುವಷ್ಟು ಪ್ರಾಶಸ್ತ್ಯ ಮತ್ತಾವ ಶ್ಲೋಕಕ್ಕೂ ಇಲ್ಲವೆನ್ನಬೇಕು. ಜೈನ ಶಾಸನಗಳು- ೧೦-೧೧ನೆಯ ಶತಮಾನಗಳ ಶಾಸನಗಳಲ್ಲಿ.

ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಮ್
ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಮ್

ಎಂದು ಆರಂಭಗೊಳ್ಳುತ್ತದೆ.

ಕರ್ನಾಟಕ ಸರ್ವಧರ್ಮಗಳಿಗೂ ಆಶ್ರಯ ನೀಡಿದೆ. ಹರಿ- ಹರರ ನಡುವೆ ಭಿನ್ನತೆ ಇಲ್ಲ. ಅಂತೆಯೇ ಜೈನ, ಬೌದ್ಧ ಧರ್ಮಗಳೂ ಒಂದೇ ತತ್ವವನ್ನು ಬೋಧಿಸುತ್ತವೆ. ಒಬ್ಬೊಬ್ಬರು ಒಬ್ಬೊಬ್ಬ ದೇವನನ್ನು ಪೂಜಿಸುತ್ತಾರೆ. ಆದರೆ ಎಲ್ಲ ನದಿಗಳೂ ಸಾಗರವನ್ನು ಸೇರುವಂತೆ ಎಲ್ಲ ಪ್ರಾರ್ಥನೆಗಳೂ ಒಬ್ಬನೇ ದೇವನಿಗೆ ಸೇರುತ್ತವೆ, ಎಂಬರ್ಥದ ಹೊಯ್ಸಳರ ಕಾಲದ ಬೇಲೂರು ಶಾಸನದ ಶ್ಲೋಕ ನಾಡಿನಲ್ಲಿಯೇ ಪರಿಚಿತವಾದುದು.

ಯಂ ಶೈವಾ: ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ: ಬುದ್ಧ ಇತಿ ಪ್ರಮಾಣ ಪಟುವ: ಕರ್ತೇತಿ ನೈಯ್ಯಾಯಿಕಾ:
ಅರ್ಹಶ್ಚೇತಿತಿ ಜೈನಶಾಸನಪರಾ: ಕರ್ಮೇತಿ ಮೀಮಾಂಸಕಾ:
ಸೋಯಂ ನೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ ||

(ಕೊನೆಯ ಪದಪುಂಜ ತ್ರೈಲೋಕ್ಯನಾಥೋಹರಿ : ಎಂದೂ ಇರುತ್ತದೆ.)

ಕೆಲವೊಮ್ಮೆ ಪ್ರಾರ್ಥನಾಶ್ಲೋಕಗಳು ಕನ್ನಡದಲ್ಲಿಯೂ ಇರುತ್ತವೆ. ಆದರೆ ಇವು ಅಪರೂಪ. ಕಲ್ಕೇರಿಶಾಸನದ ಈ ಪ್ರಾರ್ಥನೆ ನೋಡಿ:

ಶ್ರೀಮದಮರೇಂದ್ರರುಂದ್ರಶಿಖಾಮಣಿ ಗಣತರುಣಕಿರಣಪರಿವೃಢಚರಣಂ।
ಸೋಮಕ್ಕಾರ್ಕನಳನಯನಂ ಸೋಮೇಶ್ವರ ದೇವರಿಗೆ ಶಾಶ್ವತಸುಖಮಂ ॥

ಶಾಪವಾಕ್ಯಗಳ ಬಗೆಗೆ ಈ ಮೊದಲೇ ಪ್ರಸ್ತಾಪಿಸಿದ್ದೇವೆ. ಕೆಲವನ್ನು ಇಲ್ಲಿ ಮಾದರಿಗಾಗಿ ನೀಡಲಾಗಿದೆ.

1. ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾ।
ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಠಾಯಂ ಜಾಯತೇ ಕ್ರಿಮಿಃ ॥

ಬಹುಶಃ ಆ ವೇಳೆಗೆ ಜನಪ್ರಿಯವಾಗಿದ್ದ ಈ ಪದ್ಯಕ್ಕೆ ಕ್ರಿ.ಶ. ೧೦ನೆಯ ಶತಮಾನದ ಮಧ್ಯಭಾಗದ ಶಾಸನವೊಂದರಲ್ಲಿ ಪ್ರತಿಪದಾರ್ಥವನ್ನು ಕೊಟ್ಟಿರುವುದು ಸ್ವಾರಸ್ಯಕರ.-ಸ್ವದತ್ತಂ ತನ್ನಿತ್ತುದಕ್ಕೆ ಪರದತ್ತಂ ವಾ ಪೆಱಿಂತ್ತುದಕ್ಕೆ ಓ ಹರೇತು ಅಱಿವೋ ವಸುನ್ಧರಿ ಭೂಮಿ ಷಷ್ಟಿರ್ವರ್ಷಸಹಸ್ರಾಣಿ ಅರವತ್ತು ಸಾವಿರ ವರ್ಷ ವಿಷ್ಠಾಯಾಂ ಜಾಯತೇ ಕ್ರಿಮಿ ಪೇಲಪುೞುವಾಗಿ ಪುಟ್ಟುಗೆ.

2. ಬಹುಭಿರ್ವಸುಧಾ ಭುಕ್ತಾ ರಾಜಭಿಸ್ಸಗರಾದಿಭಿ: ।
ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ ।

3. ದೇವಸ್ವಂ ವಿಷಮಿತ್ಯಾಹು:-ಬ್ರಹ್ಮಸ್ವ ವಿಷಮುಚ್ಯತೇ ।
ವಿಷಮೇಕಾಕಿನಂ ಹಂತಿ ಬ್ರಹ್ಮಸ್ವಂ ಪುತ್ರ ಪೌತ್ರಿಕಂ ॥

4. ಸಾಮಾನ್ಯೋಽಯಂ ಧರ್ಮಸೇತು ರ್ನೃಪಾಣಾಂ
ಕಾಲೇ ಕಾಲೇ ಪಾಲನೀಯೋ ಭವದ್ಭಿ : ।

ಸರ್ವಾನೇತಾನ್ ಭಾವಿನಃ ಪಾರ್ಥಿವೇಂದ್ರಾಂ
ಭೂಯೋ ಭೂಯೋ ಯಚತೇ ರಾಮಚಂದ್ರ: ॥

5. ಮದ್ವಂಶಜಾ ಪರಮಹೀಪತಿ ವಂಶಜಾ ವಾ
ಪಾಪಾದಪೇತ ಮನಸೋ ಭುವಿ ಭಾವಿ ಭೂಪಾಃ ।
ಏ ಪಾಲಯಂತಿ ಮಮಧರ್ಮಮಿದಂ ಸಮಸ್ತಂ
ತೇಭ್ಯೋ ಮಯಾ ವಿರಚಿತೋಂಜಲಿ ರೇಷಮೂರ್ಧ್ನಿರ್ಹ ॥

ಇವುಗಳು ಮನುಗೀತಗಳೆಂದೋ ವೇದವ್ಯಾಸೋಕ್ತಗಳೆಂದೋ, ಧರ್ಮಶಾಸ್ತ್ರದ ಹೇಳಿಕೆಯೆಂದೋ ಶ್ರುತಿಯಲ್ಲಿ ಉಕ್ತವಾದುದೆಂದೋ ಶಾಸನಕಾರ ಹೇಳಿದ್ದರೂ ಅವು ಹಾಗಿಲ್ಲ. ಇವುಗಳಲ್ಲಿ ಕೆಲವು ಪದ್ಮ, ಭವಿಷ್ಯ, ವಿಷ್ಣು, ಧರ್ಮೋತ್ತರ ಮುಂತಾದ ಪುರಾಣಗಳಲ್ಲಿ ಕಾಣಿಸಿಕೊಂಡಿವೆ ಎಂದು ತೋರಿಸಿಕೊಡಲಾಗಿದೆ.

ಇದುವರೆವಿಗೂ ೧೨-೧೪ನೆಯ ಶತಮಾನಗಳಿಗೆ ಸೇರಿದಂತೆ ೪೦೦೦ಕ್ಕೂ ಹೆಚ್ಚು ಶಾಸನಗಳು ಲಭಿಸಿವೆ. ಪರಿಷ್ಕೃತ ಎಪಿಗ್ರಾಫಿಯ ಕರ್ನಾಟಕ ಸಂಪುಟಗಳಲ್ಲಿ ಪದ್ಯ ಅಥವಾ ಪದ್ಯ ಗದ್ಯ ಕೂಡಿದ ಶಾಸನಗಳಲ್ಲಿನ ಛಂದಸ್ಸನ್ನು ಗುರುತಿಸಲಾಗಿದೆ. ಶಾಸನದ ಕವಿತ್ವದಲ್ಲಿ ಛಂದಸ್ಸಿನ ಪಾತ್ರ, ಛಂದಸ್ಸುಗಳು ಹೇಗೆ ಹಂಚಿಕೆಯಾಗಿವೆ, ಅವುಗಳಿಂದ ತಲೆದೋರುವ ಕವಿಗಳ ವಿದ್ವತ್ತಿನ ದೃಷ್ಟಿ ಮುಂತಾದವುಗಳನ್ನು ಅರಿಯಲು ಈ ಕೆಲಸವನ್ನು ಕೈಗೊಂಡಿದೆ. ಕನ್ನಡ ಭಾಷೆಯ ರಚನೆಯ ಮೇಲೆ ಸಂಸ್ಕೃತ ಹಾಗೂ ಇನ್ನಿತರ ಭಾಷೆ ಛಂದಸ್ಸುಗಳ ಪ್ರಭಾವವನ್ನು ಈ ಮೂಲಕ ಗುರುತಿಸಬಹುದಾಗಿದೆ. ಈ ಕಾಲ ಘಟ್ಟಕ್ಕೆ ಸೇರಿದ ರಗಳೆ ಹಾಗೂ ವಚನಗಳ ಪ್ರಭಾವವೂ ವಿಶಿಷ್ಟದ್ದಾಗಿದೆ. ಕೋಗಳಿ ಶಾಸನದಲ್ಲಿ ಜೈನಗುರು ಇಂದ್ರಕೀರ್ತಿಯನ್ನು ಸ್ತುತಿಸುವ ಭಾಗ ತೋಮರ ರಗಳೆಯಲ್ಲಿದೆ ಎಂದು ಶಾಸನವೇ ಸೂಚಿಸಿದೆ.

ಬಿಜಾಪುರ ಜಿಲ್ಲೆಯ ಶಾಸನದಲ್ಲಿ (ಕ್ರಿ.ಶ.೧೧೯೦) ಸೊನ್ನಲಿಗೆಯ ಸಿದ್ಧರಾಮನ ವಚನವೊಂದು ಕಾಣಿಸಿಕೊಂಡಿದೆ. ಅದು ಹೀಗಿದೆ :

ಶ್ರೀ ಓಂ ಜಯ ಪರಮೇಶ್ವರ ಪರಮಾತ್ಮ ಈಶ್ವರನು ಪುರ್ಬ್ಬೀಪುರ್ಬ್ಬ ಯಡಂಗಿ ಕೊಂಡಿರ್ಪ್ಪನೆ ಓರ್ಬಣ್ಣಿಗೆಯಾಗಿ ಯೋಗಿಗಳ ಮನದ ಕೊನೆಯ ಜ್ಯೋತೀಶ್ವರನುಂ ವ್ರಿಷಭನ ರೂಪಾಗಿ ಯಜಮಾನನುಂ ಆಚಾರ್ಯ್ಯನು ತಾನೆಯಾಗಿ ಯೋಗದಿ ಸಂಪನ್ನ ಖಿಳೆಯಗಳೆಲ್ಲವಂ ಸಂಪಾದಿಸಿ ಯೋಗ ಮಣೀಯ ಕ್ಷೇತ್ರಮನೆ ತಳವಿಟ್ಟು ಸಲಾಖೆವಿಡಿದು ಅಭಿನವಶ್ರೀಶ್ರೈಳವನೆ ಮಾಡಿ ಕಪಿಲಸಿದ್ಧ ಮಲ್ಲೇಶ್ವರ ದೇವನೆ ನೆಲಸಿನಿಂದು ಪುಂಣ್ಯ ಪಾಪಂಗಳಂ ಬರವೇಳ್ದು ಬೆಸಂ ಪೇಳುತ್ತವಿರಲು ಯೇಂ ಬೆಸ ದೇವಾ ಯೆನಲು ಯೀ ಸ್ಥಾನದಲು ಮಾನ್ಯವಾಗಿ ಊರುಗಳಂ ಭೂಮಿಗಳಂ ಧನಂಗಳಂ ಈ ಲಿಂಗಕ್ಕೆ ಹಸ್ತೋದಕವಂ ಮಾಡಿಕೊಟ್ಟುದುವಂ ಮನಂಪೇಸದೆ ಕೆಳೆದುಕೊಂಡ ಪೆನೆಂಬಾತನ ಆತನ ಮಾತಾಮಾತಾಪಿತೃಗಳೆಲ್ಲ ಯೆಪ್ಪತ್ತೆಳು ಕೋಟಿ ವರ್ಷಂಬರಂ ಪುಳುಗೊಂದದ ನರಕದೊಳಗಿಕ್ಕಿ ನೀನಾಹುತಿಗೊಂಡಿರು ಕಂಡಾಯೆಲೆ ಪಾಪವೇ ಯೀ ದೇವನ ಭೂಮಿಧನಕ್ಕಾನಂಜುವೆನೆಂದು ಪಾವಡರ್ದನ್ತ ಮನಂ ಬೆದಱಿ ಪೊಡಪಟ್ಟಿನ ಬೇಗ ಶೀಘ್ರಂ ಕೊಣ್ಡುಬಾಯೆಲೆ ಪುಣ್ಣ್ಯವೇ ಕವಿಳಾಸಕ್ಕೆ ಯಿನ್ತರಡರ ಬೆಂಗೆ ಪುಂಣ್ಯಪಾಪಂಗಳ ಪಾರ್ದ್ದುಕೊಣ್ಡಿರ್ದ್ದುಯ್ವುದು ತಪ್ಪದು ದಿಠದಿಠ.

ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಮೇಲೆ ತಮಿಳಿನ ಪ್ರಭಾವ ಕುರಿತು ಈಗಾಗಲೇ ಪ್ರಸ್ತಾಪಿಸಲಾಗಿದೆ. ಗಂಗರ ಕಾಲದಿಂದಾರಂಭಿಸಿ ವಿಜಯನಗರದ ಅರಸರ ಕಾಲದವರೆಗೂ ಈ ಪ್ರಭಾವವನ್ನು ಗುರುತಿಸಬಹುದು. ಹೆಬ್ಬಳ್ಳಿಗುಪ್ಪೆಯ ದುಗ್ಗಮಾರನ ಶಾಸನದಲ್ಲಿ ಸ್ವಸ್ತಿಶ್ರೀ ನರಸೀಗೆರೆ ಅಪ್ಪೋಢ ದುಗ್ಗಮಾರ ಕೋಯಿಲ್

ವಸದಿಗೆ ಅಱುಗಣ್ಣುಗಬ್ಬೆದೆ ಮಣ್ ಕೊಟ್ಟಿರ್' ಎಂಬ ಮಾತಿದೆ. ಇದರಲ್ಲಿ ಕೋಯಿಲ್ ಎಂಬುದು ತಮಿಳಿನಿಂದ ಎರವಲು ಪಡೆದ ಪದ. ನಿಘಂಟುವಿನಲ್ಲಿ ಇದನ್ನು 'ದೇಶ್ಯ' ಎಂದು ಸೂಚಿಸಿದ್ದರೂ ಇದು ಶುದ್ಧ ಕನ್ನಡ ಶಬ್ದವಲ್ಲ. ೧೦ನೆಯ ಶತಮಾನದ ಮತ್ತೊಂದು ಶಾಸನದಲ್ಲಿ ಕೇಶವಭಟ್ಟರ್ ಉಳ್ಳಿಟ್ಟ ಸಭೆಯ ಎಂಬ ಪದಪುಂಜವಿದ್ದು ಉಳ್ಳಿಡು-ಸಭೆ ಸೇರಿಸು ಎಂಬುದು ತಮಿಳು ಪದ, ಪೊನ್ನ ಱಿಕೊಣ್ಡು ಮಣ್ಣಱಿ ಕೊಟ್ಟು (ಪೊನ್ (ಅರ್ಧ) ಕೊಟ್ಟು ಅರ್ಧ ಮಣ್ಣನ್ನು ತೆಗೆದುಕೊಂಡು. ಕ್ರಯದಾನ!) ಎಂಬುದೂ ಅಷ್ಟೆ. ತಮಿಳಿನಲ್ಲಿ ಇಂದಿಗೂ ಈ ಪದಗಳು ಬಳಕೆಯಲ್ಲಿವೆ; ಕನ್ನಡದಲ್ಲಿ ಕಣ್ಮರೆಯಾಗಿದೆ.

ಚೋಳ ಅರಸರು ತಮ್ಮ ಶಾಸನಗಳಲ್ಲಿ ಅರಸನನ್ನು ಹೊಗಳುವ-ಸಾಧನೆಗಳನ್ನು ಪಟ್ಟಿಮಾಡುವ-ಪದ್ಧತಿ ಆರಂಭಿಸಿದರು. ಆಳ್ವಿಕೆಯ ವರ್ಷಗಳು ಹೆಚ್ಚಿದಂತೆಲ್ಲಾ ಈ ಪ್ರಶಸ್ತಿಗಳೂ (ಇವನ್ನು ಮೈಕೀರ್ತಿ ಎನ್ನುತ್ತಾರೆ) ಬೆಳೆದುವು. ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಕಾಣಿಸಿಕೊಳ್ಳುವಂತಹುವಲ್ಲ ಇವು. ಛಂದೋಬದ್ಧವಾಗಿ ಕಾವ್ಯಮಯವಾಗಿ ಬೆಳೆದ ಇವುಗಳನ್ನು ತಮಿಳಿನಲ್ಲಿ ದಂಡಕಗಳೆನ್ನುತ್ತಾರೆ. ಹೊಯ್ಸಳರ ಶಾಸನಗಳಲ್ಲಿ ಕೆಲವುಗಳಲ್ಲಿ ಇವು ಸ್ಪಷ್ಟವಾಗಿ ಬಳಕೆಗೆ ಬಂದಿವೆ. ಹೊಯ್ಸಳ ಇಮ್ಮಡಿ ನರಸಿಂಹನ ಹಳೇಬೀಡಿನ ಶಾಸನದಲ್ಲಿ ಅಂತಹುದೊಂಡು ದಂಡಕ ಹೀಗಿದೆ :

ಸ್ವಸ್ತಿ ಸಮಸ್ತರಿಪುನೃಪಾನಮಿತ ಸೀಮಂತಿನೀ ಸೀಮನ್ತ ಸಿನ್ಧೂರರೇಣು ಘೂರ್ಣಿತನಿಜಪದಪಯೋಜ । ವಿವಿಧಾರ್ತ್ಥಿಜನಕಲ್ಪ ಭೂಜ । ನಿಜ ವಿಜಯಲಕ್ಷ್ಮೀ ಪ್ರಥಿತ ಬೃಹತ್ ಪ್ರಬಂಧ ಬನ್ಧುರ ಕಟಕ ವಿಕ್ಷೇಪಾಕ್ಷೂಣ ವಿಲಕ್ಷ್ಯ ವಿಸ್ತಾರಿತ ಭುಜದಣ್ಡ । ವಿಪಕ್ಷಕ್ಷತ್ರ ಕುಳಕುಪಿತಕಾಳದಣ್ಡ । ನಿಜವಿಜಯ ಪ್ರಯಾಣ ಸಮಯಸಮುದ್ಭೂತ ಸ್ವರ್ಣ್ಣಕೋಲಾನಿಹಿತಗಭೀರಭೂರಿಬೇರಿ ಪ್ರಣಾದಾ ಕಂಪಿತ

ಬ್ರಹ್ಮಾಣ್ಡಭಾಣ್ಡ। ಸಮರ ಪ್ರಚಣ್ಡ ಅತಿ ವಿಪುಳ ಸಕಳಪ್ರಾಜ್ಯ ಸಾಮ್ರಾಜ್ಯ ಲಕ್ಷ್ಮೀ ಸರ್ವಾಂಗ ಸಂಗತಾಂಗ । ಸಹಜಸೌಂದರ್ಯ್ಯ ನಿರ್ಜಿತಾನಂಗ । ಪರದಳಿತ ವದನಾರವಿಂದ ಪ್ರಸರದಸರಾಳ ಸಹಜಸೌಗಂಧ್ಯ ಮಂದಮಕರಂದಾಪಹಸಿತ ಮೃಗಮದಾಮೋದ । ವಾಸನ್ತಿಕಾದೇವೀ ಲಬ್ಧ ವರಪ್ರಸಾದ ತರಳತರತಾರಹಾರನೀಹಾರ ಸಾರಘನಸಾರ ಕ್ಷೀರವಾರಾಶಿಪ್ರಪೂರ ಚಾರುವಾಜಿ ಸುಧಾಸಾರಸನ್ನಿಭ ನಿಜಯಶಃಪ್ರಕಾಶ ಹರ್ಯ್ಯಕ್ಷ ಸದೃಷಮಧ್ಯಪ್ರದೇಶ । ಅತಿ ಚತುರ ಭರತಚಿತ್ರ ಚಮತ್ಕಾರತರವಿತತ । ಘನಸುಶೀಲಹೃದ್ಯವಾದ್ಯ ಲಘುಹಸ್ತಾವರ್ಯ್ಯ ಚಾತುರ್ಯ್ಯ । ಅಸಹಾಯ ಶೌರ್ಯ ....

ಇದು ಹೀಗೆಯೇ ಸಾಗುತ್ತದೆ:

ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತವನ್ನೆಲ್ಲಾ ಆಕ್ರಮಿಸಿತ್ತು. ಪರಧರ್ಮದ ಆಕ್ರಮಣದಿಂದ ಸ್ವಧರ್ಮರಕ್ಷಣೆ ಸಹ ಮುಖ್ಯ ಹೊಣೆಗಾರಿಕೆಯಾಯಿತು. ಅರಸರು ಸಂಸ್ಕೃತಿಸಂವರ್ಧನೆಗಾಗಿ ಭಾಷೆ, ಸಾಹಿತ್ಯ, ಕಲೆ ಇತ್ಯಾದಿಗಳಿಗೆ ಪ್ರೋತ್ಸಾಹ ನೀಡಿದರು. ಆದರೂ ಕ್ರಮೇಣ ಈ ಕ್ಷೇತ್ರಗಳಲ್ಲಿ ಇಳಿಮುಖವನ್ನೇ ಕಾಣುತ್ತೇವೆ. ಸಾಳುವ ನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ ಮುಂತಾದವರ ಕೆಲವು ಶಾಸನಗಳನ್ನು ಹೊರತು ಪಡಿಸಿ ಈ ಕಾಲದ ಶಾಸನ ಸಾಹಿತ್ಯ ಮೌಲಿಕವಾದುದಲ್ಲವೆಂದೇ ಹೇಳಬೇಕು. ಕನ್ನಡ ಶಾಸನಗಳು ಮೊಟಕಾಗಿ ವಸ್ತುನಿಷ್ಠ ಹೇಳಿಕೆಗಳಾಗಿ ಉಳಿಯುತ್ತವೆ.

ಕನ್ನಡ ಶಾಸನಗಳಲ್ಲಿ ನೀಡಲಾದ ದಾನಗಳ ಬಗೆಗೆ ಇಲ್ಲಿ ಒಂದು ವಿಷಯ ಸ್ಪಷ್ಟಪಡಿಸಬೇಕೆನಿಸುತ್ತದೆ. ಸಾಮಾನ್ಯವಾಗಿ ಈ ಶಾಸನಗಳಲ್ಲಿ ದಾನಿಯು ಇಂತಿಷ್ಟು ಭೂಮಿಯನ್ನು ದೇವಾಲಯಕ್ಕೋ ಸಂಸ್ಥೆಗೋ ದಾನವಾಗಿ ನೀಡಿದಾಗ ಸೂಕ್ಷ್ಮವಾಗಿ ಅದನ್ನು ಅಂಗರಂಗ ಭೋಗಗಳಿಗೆಂದೋ ಪೂಜೆಪುನಸ್ಕಾರಗಳಿಗೆಂದೋ ನೀಡುತ್ತಿದ್ದ. ಆದರೆ

ಅದನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕು ಎಂಬ ವಿವರ ಶಾಸನದಲ್ಲಿ ಕಂಡುಬರುವುದಿಲ್ಲ. ದೇವಾಲಯಗಳಲ್ಲಿ ಹಲವಾರು ಕಾರ್ಯಕರ್ತರಿರುತ್ತಿದ್ದರು. ದೀಪದ ಕಂಬಗಳನ್ನು ತಿಕ್ಕಿ ಬೆಳಗುವವರು, ದೀಪ ಉರಿಸುವವರು, ವಾದ್ಯಗಾರರು, ಸಂಗೀತಗಾರರು, ದೇವದಾಸಿಯರು, ಅರ್ಚಕರು ಹಾಗೂ ಅವರ ಪರಿವಾರ, ಮಾಲೆಕಾರರು, ಲೆಕ್ಕಿಗರು ಇತ್ಯಾದಿಗಳಲ್ಲದೆ, ಅಲ್ಲಿ ನೆಲಸಿದ್ದ ತಪೋಧನರು ಯಾತ್ರಿಕರು ಸಹ ದೇವಾಲಯದ ಆದಾಯವನ್ನು ಅವಲಂಬಿಸಿದವರೇ. ಅವರಿಗೆ ಯಾರಿಗೆ ಎಷ್ಟು ಎಂಬ ವಿವರ ಕಾಣಬಾರದು. ತಮಿಳುನಾಡಿನಲ್ಲಿ ಸಮಕಾಲೀನ ಚೋಳರ ಶಾಸನಗಳಲ್ಲಿ ಈ ಕುರಿತು ಎಲ್ಲ ವಿವರಗಳೂ ಉಲ್ಲೇಖಿಸಲ್ಪಟ್ಟಿರುತ್ತವೆ. ಅವರೊಡನೆ ಸಂಪರ್ಕ ಬೆಳೆಸಿದ್ದ ಹೊಯ್ಸಳರ ಕೆಲವು ಶಾಸನಗಳಲ್ಲಿ ಮಾತ್ರ ಈ ವಿವರಗಳು ಕಾಣಿಸಿಕೊಳ್ಳುತ್ತವೆ.

ಲಿಪಿ, ಕಾಲಗಣನೆ

ಕರ್ನಾಟಕದಲ್ಲಿ ನಮಗೆ ಕಂಡು ಬರುವ ಅತಿ ಪ್ರಾಚೀನ ಲಿಪಿ ಬ್ರಾಹ್ಮೀ ಎಂಬುದನ್ನು ಸೂಚಿಸಿದ್ದೇವೆ. ಚಿತ್ರದುರ್ಗ ಜಿಲ್ಲೆಯ ಅಶೋಕನ ಶಾಸನಗಳಲ್ಲಿ ಕೊನೆಯಲ್ಲಿ ಲಿಪಿಕಾರನ ಪ್ರಸ್ತಾಪ ಬಂದಾಗ 'ಲಿಪಿಕರೇಣ' ಎಂಬ ಪದ ಖರೋಷ್ಠೀ ಲಿಪಿಯಲ್ಲಿದೆ ಎಂದು ಗಮನಿಸಬೇಕು. ಕನ್ನಡ ಲಿಪಿಯ ಮೂಲ ಬ್ರಾಹ್ಮೀ ಲಿಪಿಯಲ್ಲಿದೆ ಎಂಬುದು ನಿಸ್ಸಂಶಯವಾದ ಮಾತು. ಆದರೆ ಶತಮಾನಗಳಲ್ಲಿ ಅದರ ರೂಪ ಬದಲಾಗುತ್ತಾ ಹೋಗಿ 'ಕನ್ನಡ' ಹುಟ್ಟಿಕೊಂಡಿದೆ. ಕರ್ನಾಟಕದಲ್ಲಿನ ಅಶೋಕ ಲಿಪಿಗಳಲ್ಲಿಯೇ ನಾವು ದಕ್ಷಿಣದ ಪ್ರಭೇದವನ್ನು ಕಾಣುತ್ತೇವೆ. ಈ ಲಿಪಿ ಹೆಚ್ಚು ಉದ್ದದ ಗೆರೆಗಳನ್ನುಳ್ಳದ್ದು - ದಕ್ಷಿಣದ ಪ್ರಭೇದದಲ್ಲಿ 'ಗ' ಎಂಬ ಅಕ್ಷರವನ್ನು ಹೊರತುಪಡಿಸಿದರೆ ಉಳಿದವುಗಳನ್ನು ನಂತರದ ಕನ್ನಡ ಲಿಪಿಯೊಂದಿಗೆ ಹೋಲಿಸುವುದು ಕಷ್ಟವಾಗುತ್ತದೆ. ಸಾತವಾಹನರು ಬ್ರಾಹ್ಮೀ ಲಿಪಿಯನ್ನು ತಮ್ಮ ಗುಹಾಶಾಸನಗಳಲ್ಲಿ ವಿಶೇಷವಾಗಿ ಬಳಸಿದರು. ಆದ ಕಾರಣ

ಅದನ್ನು ಗುಹಾಲಿಪಿ ಎಂದೂ ಕರೆಯಲಾಗಿದೆ. ಕರ್ನಾಟಕದಲ್ಲಿ ಈ ಲಿಪಿಯ ತಲೆಕಟ್ಟುಗಳು ಸ್ಪಷ್ಟವಾಗಿಲ್ಲ. ಸಾತವಾಹನರ ಈ ಲಿಪಿ ದುಂಡಾಗಿ ಆಲಂಕಾರಿಕವಾಗಿ ಇರುತ್ತವೆ. ತಲೆಕಟ್ಟುಗಳಿಲ್ಲದಿದ್ದರೂ ಮೇಲ್ಭಾಗದಲ್ಲಿ ತ್ರಿಕೋಣಾಕಾರದ ಬಾಗುಗಳನ್ನು ಕಾಣುತ್ತೇವೆ.

ಬನವಾಸಿಯ ಕದಂಬರ ಶಾಸನಗಳಲ್ಲಿ ಈ ಲಿಪಿಯ ಮುಂದಿನ ಘಟ್ಟವನ್ನು ಗುರುತಿಸಬಹುದು. ಇದನ್ನು ಕನ್ನಡ ಲಿಪಿಯ ಆರಂಭಘಟ್ಟ ಎಂದು ಭಾವಿಸಿದರೂ ತಪ್ಪಾಗಲಾರದು. ಗುಪ್ತರ ಲಿಪಿಯನ್ನು ಆದರಲ್ಲೂ ತಲೆಕಟ್ಟಿನಲ್ಲಿ, ಸ್ವಲ್ಪಮಟ್ಟಿಗೆ ಇದು ಹೋಲುತ್ತದೆ. ತಲೆಕಟ್ಟು ಪೆಟ್ಟಿಗೆಯಾಕಾರದಲ್ಲಿದ್ದು ಇದನ್ನು ಪೇಟಿಕಾ ಶಿರಲಿಪಿ ಎಂದು ಕರೆಯಲಾಗಿದೆ. ಕ್ರಮೇಣ ಈ ಪೇಟಿಕಾಶಿರವು ಶುದ್ಧವಾದ ತಲೆಕಟ್ಟಾಗಿಯೇ ಬಳಕೆಗೆ ಬಂದಿತು. ಬಾದಾಮಿಯ ಚಾಲುಕ್ಯರ ಕಾಲದ ಶಾಸನಗಳಲ್ಲಿ ಈ ತಲೆಕಟ್ಟು ಸ್ಪಷ್ಟವಾದ ರೂಪವನ್ನು ಪಡೆಯಿತು. ಉದ್ದನೆಯ ಆಕಾರಕ್ಕೆ ಬದಲು, ವರ್ಷಗಳು ಕಳೆದಂತೆ, ದುಂಡಾದ ಆಕಾರ ರೂಪುಗೊಂಡಿತು. 'ಕ', 'ರ' ಮುಂತಾದ ಕೆಲವು ಅಕ್ಷರಗಳು ಉದ್ದವಾದವು. ಇದು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಶತಮಾನಗಳು ಮುಂದುವರಿಯಿತು. ಈ ಲಿಪಿಯನ್ನು ಆಂಧ್ರದಲ್ಲಿ ಬಳಸಿದ ಕಾರಣ - ಇದೇ ತೆಲುಗು ಲಿಪಿಗೂ ಮೂಲವಾದ ಕಾರಣ ಇದನ್ನು ತೆಲುಗು - ಕನ್ನಡ ಲಿಪಿ ಎಂದೂ ಕರೆದರು. ಶಾಸನಗಳಲ್ಲಿ ನಾಗರೀಲಿಪಿಯನ್ನು ಬಳಸಲಾಯಿತು. ವಿಜಯನಗರದ ಕಾಲದ ನಾಗರೀಲಿಪಿಯನ್ನು ನಂದಿನಾಗರೀ ಎಂದೂ ಕರೆಯಲಾಗಿದೆ.

ಕಲ್ಯಾಣದ ಚಾಲುಕ್ಯರ, ಹೊಯ್ಸಳರ ಕಾಲಕ್ಕೆ ಲಿಪಿಗೆ ಒಂದು ಹೊಸ ಆಯಾಮ ಸಿಕ್ಕಿತು. ಆ ಕಾಲದ ರೂವಾರಿಗಳು ಶಿಲ್ಪಕಲೆಯಂತೆಯೇ ಶಾಸನ ಬರೆದು ಕೆತ್ತುವುದನ್ನೂ ಒಂದು ಕಲೆಯಾಗಿ ಭಾವಿಸಿದರು. 'ಸರಸತರ ಮದುವೆಂದಕ್ಕರಿಬ್ಬರ್ಣಿಪಿನಮೀಶಿಲಾ ಶಾಸನಮ.........ಮುತ್ತಿನ

ಸರಿಗೆಯನನುಸರಿಸಿ' ಬರೆದರಂತೆ. ಬಾಗಲಿಯ ಶಾಸನದಲ್ಲಿ ರೇವಣಾಚಾರ್ಯನೆಂಬ ಲಿಪಿಕಾರ ''ಚಿತ್ರದ ಕರದೊಳ್ಪಂ' ಕಣ್ಗದೊಳ್ ಬರೆಯುತ್ತಿದ್ದನೆಂದು ಹೇಳಿದೆ. ಇನ್ನೊಬ್ಬ ರೂವಾರಿ ಮುದ್ದಣನನ್ನು ''ಪೊಕ್ಕಳು ತಲೆಕಟ್ಟು ಮನನ್ತಕ್ಕರದವಯವಮನಱಿದು ಖಣ್ಡರಿಸಲುಕೀ ಇಕ್ಕುದನೆ ಬಲ್ಲ ನಱಿಯಮ್ಮಿರ್ಕ್ಕ ವರೆನೊಸೆದು ಧರಣಿ ಬಣ್ಣಿಸು'' ತ್ತಿತ್ತಂತೆ. ವಿಜಯನಗರದ ಕಾಲದ ವೇಳೆಗೆ ಲಿಪಿ ಶಾಸ್ತ್ರದಲ್ಲೂ ಇಳಿಮುಖವನ್ನು ಕಾಣುತ್ತೇವೆ.

ಕರ್ನಾಟಕದಲ್ಲಿ, ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ, ಗಂಗರು, ಹೊಯ್ಸಳರು ತಮಿಳುನಾಡಿನ ಅರಸರೊಂದಿಗೆ ಹೊಂದಿದ್ದ ಬಾಂಧವ್ಯಗಳ ಪರಿಣಾಮವಾಗಿ ತಮಿಳು ಶಾಸನಗಳು ಹಲವಾರು ಕಾಣಿಸಿಕೊಂಡಿವೆ. ಇವು ತಮಿಳು ಮತ್ತು ಗ್ರಂಥಲಿಪಿಗಳಲ್ಲಿ ಬರೆದವುಗಳಾಗಿವೆ. ಸಂಸ್ಕೃತ ಅಕ್ಷರ, ಪದ, ಪದಪುಂಜಗಳನ್ನು ಬಳಸುವಾಗ ಗ್ರಂಥಲಿಪಿಯನ್ನು ಬಳಸುತ್ತಿದ್ದರು. ಬಾದಾಮಿಯಲ್ಲಿರುವ ಪಲ್ಲವ ನರಸಿಂಹವರ್ಮನ ಸಂಸ್ಕೃತ ಶಾಸನದಲ್ಲಿ ಪಲ್ಲವ ಗ್ರಂಥಲಿಪಿಯನ್ನು ಉಪಯೋಗಿಸಲಾಗಿದೆ. ಕೆಲವು ಶಾಸನಗಳ ಭಾಷೆ ತಮಿಳು, ಲಿಪಿ ಕನ್ನಡ. ಅಂತೆಯೇ ಕನ್ನಡ ಭಾಷೆಯ ಶಾಸನಗಳು ಹಲವು ತಮಿಳು ಲಿಪಿಯಲ್ಲಿಯೂ ಇವೆ. ವಟ್ಟೆಳುತ್ತು ಎಂಬುದು ತಮಿಳುನಾಡಿನಲ್ಲಿ ಪಾಂಡ್ಯರ ಕಾಲದಲ್ಲಿ ಬಳಕೆಯಲ್ಲಿದ್ದ ಲಿಪಿ. ಈಗ ಆ ಲಿಪಿಯನ್ನು ಓದುವವರೇ ಕೈಬೆರಳೆಣಿಕೆಯಷ್ಟು ಜನ. ಈ ಲಿಪಿಯನ್ನು ಕೊಡಗಿನಲ್ಲಿರುವ ಬೋಧರೂಪ ಭಗವಾನರ ಎರಡು ಶಾಸನಗಳಲ್ಲಿ ನೋಡಬಹುದು. ಬಹಮನಿ ಅರಸರು ಕರ್ನಾಟಕದಲ್ಲಿ ಆಳಲಾರಂಭಿಸಿದ ನಂತರ ಪರ್ಷಿಯನ್ ಭಾಷೆಯನ್ನು ಶಾಸನಗಳಲ್ಲಿ ಬಳಸಲಾಯಿತು. ಇದರ ಲಿಪಿಯನ್ನು 'ನಾಸ್ತಾಲಿಕ್' ಎಂದು ಕರೆಯಲಾಗಿದೆ. ಕೊರಾನಿನಲ್ಲಿನ

ಹೇಳಿಕೆಗಳನ್ನು ಉಲ್ಲೇಖಿಸುವ ಸಂದರ್ಭಗಳಲ್ಲಿ ಅಲಂಕಾರಿಕ ನಾಸ್ತಾಲಿಕ್ ಲಿಪಿಯನ್ನು ಬಳಸಿದ್ದಾರೆ.

ಶಾಸನಗಳ ಕೊನೆಯಲ್ಲಿ ಶಾಪವಾಕ್ಯದ ನಂತರ (ಅಥವಾ ಮೊದಲು) ಆ ಶಾಸನವನ್ನು ಬರೆದಾತನ ಹೆಸರು ಕಾಣಿಸಿಕೊಳ್ಳುತ್ತದೆ. ಇದು ಎಲ್ಲ ಶಾಸನಗಳಲ್ಲಿಯೂ ಇರುತ್ತದೆಂದು ಹೇಳಲಾಗುವುದಿಲ್ಲ, ಇಲ್ಲಿ ಒಂದು ಸೂಕ್ಷ್ಮತೆಯನ್ನು ಗಮನಿಸಬೇಕು. 'ಕಂಡರಣೆ', 'ಕಂಡರಿಸಿದಾತ' ಎಂದು ಬಂದಾಗ ಅದು ಕಲ್ಲಿನ ಮೇಲೆ ಕಡೆದ ಕಲ್ಕುಟಿಗನಿಗೆ ಸಂಬಂಧಿಸಿದುದು ಎಂಬುದು ಸ್ಪಷ್ಟ. ಆ ಒವಝು (ಓಜ)ನ ಹೆಸರು, ಒಮ್ಮೊಮ್ಮೆ ಬಿರುದು, ಇರುತ್ತದೆ. ವಿಗ್ರಹಗಳನ್ನು ಕಡೆದಾತ 'ರೂವಾರಿ'. ಆದರೆ ಈ ಪದ ಕಲ್ಕುಟಿಗನಿಗೂ ಅನ್ವಯಿಸುತ್ತದೆ. ಆದರೆ, 'ಬರೆದೋಂ', 'ಬರೆದಾತ' ಎಂಬ ಮಾತುಗಳು ಬಂದಾಗ ಅದು ಯಾರಿಗೆ ಅನ್ವಯಿಸುತ್ತದೆ ಎಂದು ಹೇಳುವುದು ಕಷ್ಟವಾಗುತ್ತದೆ. ಸಾಮಾನ್ಯವಾಗಿ ಇಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದು. ದಾನಪತ್ರವನ್ನು ಬರೆಯುವುದು ಮೊದಲ ಘಟ್ಟ, ಇದನ್ನು ಸಾಧಾರಣವಾಗಿ ಒಬ್ಬ ಅಧಿಕಾರಿ - ಸೇನಬೋವ ಯಾ ಕರಣಿಕ ಯಾ ಲೇಖಕ ತಯಾರಿಸುತ್ತಾನೆ. ನಂತರ ಇದನ್ನು ಕಲ್ಲಿನ, ನಯಗೊಳಿಸಿ ಸಿದ್ಧಪಡಿಸಿದ, ಮುಖದ ಮೇಲೆ ಉತ್ತಮ ಹಸ್ತಾಕ್ಷರವನ್ನು ಬರೆಯಬಲ್ಲ ಲಿಪಿಕಾರ ಸುಣ್ಣದಿಂದಲೋ ಬಳಪದಿಂದಲೋ ಪ್ರತಿಮಾಡುತ್ತಾನೆ. ಆ ಬಳಿಕ ರೂವಾರಿ ಆ ಅಕ್ಷರಗಳನ್ನು ಕೆತ್ತುತ್ತಾನೆ. ರೂವಾರಿ ಉತ್ತಮ ಕಲೆಗಾರನಾದರೂ ಅನಕ್ಷರಸ್ಥನೇ ಆಗಿರಬಹುದಲ್ಲ!

ಒಂದು ವೇಳೆ ಆತ ಸ್ವತಃ ಅಕ್ಷರಸ್ಥನಾಗಿ ಅಕ್ಷರಗಳನ್ನು ರೂಪಿಸಬಲ್ಲವನಾಗಿದ್ದಲ್ಲಿ, ಮಧ್ಯದ ಘಟ್ಟದ ಅವಶ್ಯಕತೆ ಇರುವುದಿಲ್ಲ. ಶಾಸನದಲ್ಲಿ ಕೇವಲ 'ಬರೆದಾತ', ಎಂದಾಗ ಈ ಮೂವರಲ್ಲಿ ಇದು

ಯಾರಿಗೆ ಅನ್ವಯಿಸುತ್ತದೆಂದು ಹೇಳಲಾಗುವುದಿಲ್ಲ. ಓಜ ಎಂಬ ಅಂತ್ಯವುಳ್ಳ ಹೆಸರಿನ ವ್ಯಕ್ತಿಯಾದರೆ ಆತ ಕಲ್ಲುಕಟಿಗನೆಂದು ಹೇಳಲು ಬಂದೀತು! ಹಾಗಿಲ್ಲದಿದ್ದಲ್ಲಿ?

ಶಾಸನಗಳಲ್ಲಿ ಕಾಲಗಣನೆ ಒಂದು ಮಹತ್ವದ ಅಂಶ. ಅ ಕಾಲದ ವಿವರಗಳು ಸಂವತ್ಸರ, ತಿಂಗಳು, ಪಕ್ಷ, ದಿನ ಇತ್ಯಾದಿ-ಶಾಸನದ ಕಾಲವನ್ನು ಖಚಿತವಾಗಿ ನಿರ್ಧರಿಸಲು ಸಹಾಯಕವಾಗುತ್ತದೆ. ಭಾರತದಲ್ಲಿನ ಶಾಸನಗಳಲ್ಲಿ ಹಲವಾರು 'ಶಕೆ'ಗಳು ಕಂಡುಬಂದರೂ, ಕರ್ನಾಟಕದಲ್ಲಿ ಬಹುಪ್ರಚಲಿತವಾಗಿರುವುದು ಶಾಲಿವಾಹನಶಕೆ. ಇದು ಕುಷಾಣರ ಅರಸ ಕನಿಷ್ಕನಿಂದ ಕ್ರಿ.ಶ. ೭೮ರಲ್ಲಿ ಆರಂಭವಾಯಿತೆಂದು ಒಪ್ಪಲಾಗಿದೆ. ಕ್ರಿ.ಶ. ವರ್ಷಕ್ಕೆ ೭೮ ವರ್ಷಗಳನ್ನು ಕೂಡಿದರೆ ಕ್ರಿಶ್ಚಿಯನ್ ಶಕೆ- ಈಗ ನಾವು ಬಳಸುತ್ತಿರುವ ಆನಾ ಡೊಮಿನಿ (Anna Domini - A.D) ಸಿಗುತ್ತದೆ. ಕರ್ನಾಟಕದಲ್ಲಿ, ಅಷ್ಟೇಕೆ ಭಾರತದಲ್ಲಿಯೇ ಅತಿ ಪ್ರಾಚೀನ ಶಕ ವರ್ಷದ ಉಲ್ಲೇಖ ಬಾದಾಮಿಯ ಮೊದಲನೆಯ ಪುಲಕೇಶಿಯ ಶಾಸನದಲ್ಲಿತ್ತು. ಇದರ ಕಾಲ ಶಕ ವರ್ಷ ೪೬೫ (ಶಕವರ್ಷೇಷು ಚತುಶ್ಯತೇಷು ಪಂಚಷಷ್ಟಿಯುತೇಷು)ಕ್ಕೆ ಸಮನಾದ ಕ್ರಿ.ಶ. ೫೪೩, ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಇದಕ್ಕೂ ಮೊದಲನೆ ಶಕ ವರ್ಷದ ಪ್ರಸ್ತಾಪವಿರುವ ಶಾಸನವೊಂದು ದೊರೆತಿದೆ.

ಐಹೊಳೆಯ ಇಮ್ಮಡಿ ಪುಲಕೇಶಿಯ ಶಾಸನದಲ್ಲಿ ಶಕವರ್ಷದ ಉಲ್ಲೇಖದ ಜೊತೆಗೆ, ಅದಕ್ಕೆ ಸಮನೆನ್ನಲಾದ ಕಲಿಯುಗ ಶಕೆಯ ಪ್ರಸ್ತಾಪವೂ ಬಂದಿದೆ. ಅದರ ಕಾಲ ಶತಕ ವರ್ಷ ೫೫೬ಕ್ಕೆ ಸಮನಾದ ಕಲಿಸಂವತ್ಸರ ೩೭೩೫. ಈ ಮಾಹಿತಿಯಂತೆ ಕಲಿಯುಗ ಆರಂಭವಾದುದು ೩೭೩೫ - ೬೩೪ = ಕ್ರಿ.ಪೂ.• ೩.೧೦೧ರಲ್ಲಿ. ಇದರ ಬಗೆಗೆ ಭಿನ್ನಾಭಿಪ್ರಾಯಗಳಿವೆ.

ಇದಕ್ಕೂ ಮೊದಲು ಬನವಾಸಿಯ ಕದಂಬರು ತಮ್ಮ ಶಾಸನಗಳಲ್ಲಿ ಅರಸನ ಆಳ್ವಿಕೆಯ ವರ್ಷ, ಋತು, ಪಕ್ಷ ಮತ್ತು ದಿನಗಳನ್ನು ಸುಚಿಸುತ್ತಿದ್ದರು. ಈ ವಿವರಗಳು ಖಚಿತವಾದ ಕಾಲಗಣನೆಗೆ ಸಾಲವು. ದಕ್ಷಿಣ ಕರ್ನಾಟಕದಲ್ಲಿ ತಲಕಾಡಿನ ಗಂಗರು ಆರಂಭದ ಶಾಸನಗಳಲ್ಲಿ ಆಳ್ವಿಕೆಯ ವರ್ಷಗಳನ್ನು ಮಾತ್ರ ಸೂಚಿಸುತ್ತಿದ್ದರು. ೮ನೆಯ ಶತಮಾನದ ನಂತರ ಅವರು ಶಕ ಕಾಲಗಣನೆಯನ್ನು ರೂಢಿಗೆ ತಂದರು.

ಕಲ್ಯಾಣದ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನು ತನ್ನ ಹೆಸರಿನಲ್ಲಿಯೇ ಒಂದು ಶಕೆ- ಚಾಲುಕ್ಯವಿಕ್ರಮ ಶಕೆ-ಯನ್ನು ಆರಂಭಿಸಿದ. ಇದು ಕ್ರಿ.ಶ. ೧೦೭೭ರಲ್ಲಿ. ಈ ಕಾಲಗಣನೆ ಆತನು ಆಳಿದ ೫೦ವರ್ಷಗಳು ಹಾಗೂ ನಂತರದ ಒಂದೆರಡು ದಶಕಗಳ ಕಾಲ ರೂಢಿಯಲ್ಲಿತ್ತು. ಆದರೆ ಅವನ ನಂತರ ಬಂದ ಅರಸರು ತಮ್ಮ ಹೆಸರಿನಲ್ಲಿಯೂ ಅಂತಹುದೇ ಶಕೆಯನ್ನು ಆರಂಭಿಸಲು ಯತ್ನಿಸಿದರು. ಆದರೆ ಅವು ಅವರವರ ಆಳ್ವಿಕೆಯ ವರ್ಷಗಳಿಗಷ್ಟೇ ಸೀಮಿತವಾದುವು.

ಹೊಯ್ಸಳರು, ಸೇಉಣರು ಆಳ್ವಿಕೆಯ ವರ್ಷಗಳನ್ನು ತಮ್ಮ ಶಾಸನಗಳಲ್ಲಿ ಪ್ರಸ್ತಾಪಿಸಿದ್ದರೂ ಜೊತೆ ಜೊತೆಯಾಗಿಯೇ ಶಕವರ್ಷಗಣನೆಯೂ ಬಳಕೆಯಲ್ಲಿತ್ತು. ವಿಜಯನಗರದ ಅರಸರು ತಮ್ಮ ಆಳ್ವಿಕೆಯ ವರ್ಷಗಳನ್ನು ಶಾಸನಗಳಲ್ಲಿ ನಮೂದಿಸುವ ಪದ್ಧತಿಯನ್ನು ಕೈಬಿಟ್ಟರು.

ಕಲಚುರಿ ಬಿಜ್ಜಲನ ಶಾಸನಗಳ ಧೋರಣೆ ನಮಗೆ ಅಶೋಕನ ಶಾಸನಗಳನ್ನು ನೆನಪಿಗೆ ತರುತ್ತವೆ. ಇವೂ ಸಹ ಆತ್ಮಕಥನಗಳೇ! ಆದರೆ ಎಷ್ಟು ವ್ಯತ್ಯಾಸ ! ಬಿಜ್ಜಲ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಅಂತ್ಯಕ್ಕೆ ಕಾರಣನಾದವನು. ೧೨ನೆಯ ಶತಮಾನದ ರಾಜಕೀಯದಲ್ಲಿ, ಸಾಮಾಜಿಕ

ಜೀವನದಲ್ಲಿ ತಲೆದೋರಿದ ಕ್ರಾಂತಿಗೆ ಕಾರಣನಾದವನು ಈತನು. ಈತನ ಪೂರ್ವಜರು, ಉತ್ತರಾಧಿಕಾರಿಗಳು ಆಳಿದುದು ಕೇವಲ ಎರಡು ದಶಕಗಳ ಕಾಲ. ಆದರೆ ಅದು ಕರ್ನಾಟಕದ ಇತಿಹಾಸದಲ್ಲಿ ಪರ್ವಕಾಲ. ಬಸವೇಶ್ವರರಿಗೆ ಅದು ತಮ್ಮ ಸಾಮಾಜಿಕ ಕ್ರಾಂತಿಯ ಕಹಳೆಯನ್ನೂದಲು ತಕ್ಕ ಪರಿಸ್ಥಿತಿಯನ್ನು ದೊರಕಿಸಿಕೊಟ್ಟಿತು. ಇದಂತಿರಲಿ.

ಬಿಜ್ಜಲ ತನ್ನ ಶಾಸನಗಳಲ್ಲಿ ತನ್ನ ಔನ್ನತ್ಯವನ್ನು ಬೀಗಿಕೊಳ್ಳುತ್ತಾನೆ. ಕಟಚುರಿಮನೆತನದ ಆರಂಭದಲ್ಲಿದ್ದವರು ಅರಸರು. ಆದರೆ ನಂತರ ಬಂದವರು ತಮ್ಮ ಶೌರ್ಯ-ಸಾಮರ್ಥ್ಯಗಳನ್ನು ಕಳೆದುಕೊಂಡು ಕೇವಲ ಮಂಡಲಿಕರೆನಿಸಿಕೊಂಡರು. ಆದರೆ ಈಗ ನಾನು ಬೆಳೆದಿದ್ದೇನೆ; ಬಲಶಾಲಿಯಾಗಿದ್ದೇನೆ. ಮಂಡಲಿಕತ್ವ ನನಗೆ ಸಲ್ಲದು. ಹೇಗೂ ಈ ವಸುಂಧರೆ ವೀರರಿಂದ ತಾನೇ ಅನುಭವಿಸಲ್ಪಡಬೇಕು ? 'ವೀರಭೋಜ್ಯಾವಸುಂಧರಾ' ಎಂದಿಲ್ಲವೇ (ಪುಸಿಯಲ್ತು ವೀರಭೋಜ್ಯಾವಸುಂಧರಾ). ಆದುದರಿಂದ ಹಿಂದೆ ಕುಂಭ ಸಂಭವನಾದ ಅಗಸ್ತ್ಯ ಕಡಲನ್ನೇ ಹೀರಿದಂತೆ ನಾನು ಈಗ ಭೂಮಂಡಲವನ್ನು ಗೆದ್ದುಕೊಂಡಿದ್ದೇನೆ? ಹೇಗೆ? ಕೇವಲ ಶೌರ್ಯ್ಯದಿಂದ, ಸಾಹಸದಿಂದ. ಜೊತೆಗೆ 'ನೊಸಲೊಳ್ ಸಾಮ್ರಾಜ್ಯಪಟ್ಟಂ ನೆಲಸಲ್' ಯಾರು ತಾನೇ ತನ್ನನ್ನು ತಡೆಯಬಲ್ಲರು? ಇದು ಈತನ ಶಾಸನಗಳ ಧೋರಣೆ. ಎಲ್ಲಿಂದೆಲ್ಲಿಗೆ ?

ಕನ್ನಡ ಶಾಸನಶಾಸ್ತ್ರ (Epigraphical Science) ದೊಡ್ಡ ಸರೋವರ. ಹಲವಾರು ಮುಖಗಳುಳ್ಳದ್ದು. ಇತ್ತೀಚೆಗೆ ಇದರ ವಿಸ್ತಾರ ಆಳಗಳ ಅರಿವು ಜನರಲ್ಲುಂಟಾಗುತ್ತಿದೆ. ಈ ಮೇಲಿನ ವಿಷಯಗಳು ಸರೋವರದಿಂದ ತೆಗೆದ ಒಂದೆರಡು ಬೊಗಸೆಗಳು ಮಾತ್ರ. ಇದು ಸಮಗ್ರ ಎಂದು ನಾನೇ ಭಾವಿಸಿಲ್ಲ. ಆದರೆ ಜನತೆಗೆ ಈ ಶಾಸ್ತ್ರದ ಸೂಕ್ಷ್ಮ ಪರಿಚಯ ಇದರಿಂದಾಗುತ್ತದೆಂಬುದು ನನ್ನ ಅನಿಸಿಕೆ. ಅಷ್ಟಾದರೆ ನಾನು ಧನ್ಯ.

ಸರ್ವಂ ಶ್ರೀಕೃಷ್ಣಾರ್ಪಣಮ್

ಆಧಾರ ಗ್ರಂಥಗಳು

D.C. Sircar - Indian Epigraphy

K.V. Ramesh - Indian Epigraphy (Vol. 1)

ಚಿದಾನಂದಮೂರ್ತಿ - ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಫ್ಲೀಟ್ - ಭಾರತೀಯ ಶಾಸನ ಶಾಸ್ತ್ರ (ಅನುವಾದ - ಸಿ.ಪಿ.ಕೆ)

H.M. Nayak and B.R. Gopal (Ed) - South Indian Studies

ಎಂ. ಎಂ. ಕಲ್ಬುರ್ಗಿ - ವೀರಗಲ್ಲುಗಳು ಮಾಸ್ತಿಕಲ್ಲುಗಳು

ಎಫಿಗ್ರಾಫಿಯ ಕರ್ನಾಟಕ ಹಾಗೂ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ - ಸಂಪುಟಗಳು

ಶುಭವಾಗಲಿ

ಒಂದು ದೇಶದ ಪ್ರಾಚೀನ ಇತಿಹಾಸ ರಚನೆಗೆ ಲಿಖಿತ ಆಧಾರಗಳೆಂದರೆ ಶಾಸನಗಳು. ಜನಜೀವನವೇ ಅಲ್ಲದೆ ಸಾಹಿತ್ಯ ಸಂಸ್ಕೃತಿ ನಾಗರಿಕತೆಗಳ ಕುರಿತು ಶಾಸನಗಳಲ್ಲಿ ಪುರಾವೆಗಳು ದೊರೆಯುತ್ತವೆ. ಪುರಾತತ್ತ್ವ ಇಲಾಖೆಯಿಂದ ದೊರೆತಿರುವ ಸಹಸ್ರಾರು ಕನ್ನಡ ಶಾಸನಗಳು ನಮ್ಮ ನಾಡಿನ ಇತಿಹಾಸವನ್ನು ಸೂಚಿಸುವ ಖಚಿತ ಸಾಧನಗಳಾಗಿವೆ.

ಶಾಸನಾಧ್ಯಯನದ ಪ್ರಯೋಜನ, ಅದರ ಇತಿಹಾಸ, ಶಾಸನಗಳ ಸಾಮಗ್ರಿಗಳು, ಶಾಸನಗಳಲ್ಲಿ ವೈವಿಧ್ಯತೆ, ಶಾಸನಗಳ ಆರಂಭ, ಬೆಳವಣಿಗೆ ರೀ , ಕಾಲಗಣನೆ ಇವೇ ಮುಂತಾದ ಹಲವು ಹತ್ತು ಮುಖಗಳ ಮಾಹಿತಿ ಈ ಕೃತಿಯಲ್ಲಿ ಹೇರಳವಾಗಿ ದೊರೆಯುತ್ತವೆ.

ಶ್ರೇಷ್ಠ ಮಾಹಿತಿ ಸರಳವಾಗಿ ಈ ಪುಸ್ತಕದಲ್ಲಿ ಕಾಣಸಿಗುತ್ತದೆ. ಅದರ ಉಪಯೋಗ ಪಡೆದುಕೊಳ್ಳಲು ವಿನಂತಿ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು